ಯಕ್ಷ ದ್ವಾದಶಾಮೃತಮ್

ಪ್ರಸಂಗ ಮಾಲಿಕಾ

ಕೃತಿ ಕರ್ತೃ : ಡಾ. ಪಟ್ಟಾಜೆ ಗಣೇಶ ಭಟ್

ಯಕ್ಷ ದ್ವಾದಶಾಮೃತಮ್

ಪ್ರಸಂಗ ಮಾಲಿಕಾ

ಕೃತಿ ಕರ್ತೃ : ಡಾ. ಪಟ್ಟಾಜೆ ಗಣೇಶ ಭಟ್

ಕಲಾರಾಧನಾ ಪ್ರತಿಷ್ಠಾನ, ನಾರಾಯಣೀಯಂ,
ಬರೆಕರೆ ಮನೆ. ಕಾವು, ಪುತ್ತೂರು ತಾಲೂಕು,
ಕರ್ನಾಟಕ - 574223

ಮುಖಪುಟ ವಿನ್ಯಾಸ
ರವಿನಾರಾಯಣ ಪಟ್ಟಾಜೆ
ಭರತ್ ಹೆಗ್ಡೆ ಕಡಬಾಳ್

ಫೋಟೋ ಕೃಪೆ
ಡಾ. ವೇಣುಗೋಪಾಲ ಶರ್ಮ
ಹರೀಶ ಹಳೆಮನೆ ಕಾರಿಂಜ

ಮುದ್ರಣ
ಕಿರಣ್ ಪ್ರಿಂಟರ್ಸ್ ಬೆಳ್ಳಾರೆ
ಅಂಚೆ : ಬೆಳ್ಳಾರೆ 574212, ಸುಳ್ಯ ತಾಲೂಕು
08257–271066

।। ಅರ್ಪಣೆ ।।

ಎಳವೆಯಲ್ಲೇ ಕರೆದೊಯ್ದು, ತಿದ್ದಿ ತೀಡಿ ನನ್ನ ಜೀವನವನ್ನು
ಈ ಮಟ್ಟಕ್ಕೆ ರೂಪಿಸಿದ ಸೋದರಮಾವ, ಜನಪ್ರಿಯ
ಆಯುರ್ವೇದ ವೈದ್ಯ, ಕವಿ, ಸಾಹಿತಿ, ಒಳ್ಳೆಯ ಚಿತ್ರಕಾರ,
ಯಕ್ಷಗಾನ ಕಲಾವಿದ, ಉತ್ತಮ ಕೃಷಿಕರೂ ಆದ

ದಿ। ಕೆರೆಕ್ಕೋಡಿ ಗಣಪತಿ ಭಟ್ಟರ

ದಿವ್ಯ ಚರಣಗಳಿಗೆ.

ಮುನ್ನುಡಿ....

ಆತ್ಮೀಯ ಬಂಧು ಪಟ್ಟಾಜೆ ಗಣೇಶ ಭಟ್ಟ ಅವರ ಈ ಪ್ರಸಂಗ ಸಮುಚ್ಚಯಕ್ಕೆ ಮುನ್ನುಡಿಯಾಗಿ ಕೆಲವು ಮಾತುಗಳನ್ನು ಬರೆಯುವುದಕ್ಕೆ ನಾನು ತುಂಬಾ ಸಂತೋಷಪಡುತ್ತೇನೆ. ಯಕ್ಷಗಾನ ಎನ್ನುವುದು ನಾನು ಬಹಳ ಮೆಚ್ಚಿಕೊಂಡ ಕಲೆ. ನನ್ನ ತೀರ್ಥರೂಪರು (ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟ) ಬಹಳವಾಗಿ ಹಚ್ಚಿಕೊಂಡ ಕಲೆ. "ಹಚ್ಚೋಣ ಕನ್ನಡದ ದೀಪ" ಎಂಬಂತೆ ಅವರು ದೇಲಂಪಾಡಿ ಬನಾರಿಯ ಒಂದು ಕಿರು ಹಳ್ಳಿಯಲ್ಲಿ ಹಚ್ಚಿದ ಯಕ್ಷಗಾನ ಗುರುಕುಲದ ಹಣತೆಗಳು ಇಂದು ನಾಡಿನ ಉದ್ದಗಲಗಳಲ್ಲೂ ಬೆಳಕು ಬೀರುತ್ತಿವೆ. ನಾನು ಈ ಹಣತೆಗಳ ಬೆಳಕಿನಲ್ಲೇ ಬೆಳೆದು ಬಂದವರನು. ಪಟ್ಟಾಜೆಯವರೂ ಅದೇ ಮಾರ್ಗಾವಲಂಬಿಗಳು. ಈ ಹಿನ್ನೆಲೆಯಲ್ಲಿ ನಾನು ಮತ್ತು ಅವರು ಸಮಾನ ಮನಸ್ಕರು ಮತ್ತು ಸಮಾನ ವಯಸ್ಕರು. ನನ್ನ ಸಂತೋಷಕ್ಕೆ ಈ ಸಮಾನಶೀಲತೆಯೇ ಮುಖ್ಯವಾದ ಕಾರಣ. ಇಲ್ಲಿ ಸಂಕಲನಗೊಂಡಿರುವ ಪ್ರಸಂಗಗಳ ಕುರಿತಾದ ಮೆಚ್ಚಿಕೆ ಮತ್ತು ಅಭಿಮಾನ ಮತ್ತೊಂದು ಕಾರಣ.

ಪ್ರಸಂಗ ಸಾಹಿತ್ಯಕ್ಕೆ ನಾಲ್ಕೈದು ಶತಮಾನಗಳ ಇತಿಹಾಸವಿದೆ. ಕನ್ನಡ ಸಾಹಿತ್ಯದ ಪಳಮೆಗೆ ಹೋಲಿಸಿದರೆ ಇದು ತುಂಬ ಅರ್ವಾಚೀನ ಎಂಬುದರಲ್ಲಿ ಎರಡು ಮಾತಿಲ್ಲ. ಕಾಲದ ಅಂತರ ಏನೇ ಇದ್ದರೂ ಕಾಲಾತೀತವಾದ ಕೊಡುಗೆಯನ್ನು ಯಕ್ಷಗಾನ ಸಾಹಿತ್ಯ – ಅರ್ಥಸಾಹಿತ್ಯ ಮತ್ತು ಪ್ರಸಂಗಸಾಹಿತ್ಯ – ಕನ್ನಡಕ್ಕೆ ಕೊಟ್ಟಿರುವುದನ್ನು ನಾವು ಯಾವ ಕಾರಣಕ್ಕೂ ಮರೆಯುವಂತಿಲ್ಲ. ಕನ್ನಡ ಸಾಹಿತ್ಯಕ್ಕೆ ಶಾಸ್ತ್ರೀಯ ಸ್ಥಾನಮಾನಗಳ ಸನ್ಮಾನ ಸಲ್ಲುತ್ತಿರುವ ಇಂದಿನ ದಿನಗಳಲ್ಲಿ ಅನ್ಯ ಪ್ರಕಾರಗಳಿಂದ ಮತ್ತು ಅನ್ಯ ಶಿಸ್ತುಗಳಿಂದ ಕನ್ನಡಕ್ಕೆ ಸಂದಿರುವ ಕೊಡುಗೆಗಳು ತುಂಬ ಮಹತ್ವದ್ದಾಗುತ್ತವೆ. ಕನ್ನಡ ಸಾಹಿತ್ಯ ಸಮೃದ್ಧವಾಗಬೇಕಾದರೆ, ಶ್ರೀಮಂತವಾಗಬೇಕಾದರೆ, ಬೆಳಕು ಎಲ್ಲೆಡೆಯಿಂದಲೂ ಬರಲಿ ಎಂಬಂತೆ ಎಲ್ಲ ಮೂಲಗಳಿಂದ ಬರುವ ವಿಭಿನ್ನ ಸಾಹಿತ್ಯಗಳನ್ನು ಮುಕ್ತವಾಗಿಯೂ ಯುಕ್ತವಾಗಿಯೂ ನಾವು ಸ್ವಾಗತಿಸಬೇಕು.

ಈ ನಿಟ್ಟಿನಲ್ಲಿ ಯಕ್ಷಗಾನ ಪ್ರಸಂಗ ಸಾಹಿತ್ಯಕ್ಕೆ ಪ್ರಧಾನ ವಾಹಿನಿಯಲ್ಲಿ ಸಮಪಂಕ್ತಿಯಾಗಲಿ ಸಹಪಂಕ್ತಿಯಾಗಲಿ ದೊರಕದಿರುವುದು ನಿಜಕ್ಕೂ ದುರದೃಷ್ಟಕರ. ಜಾನಪದ ಎನ್ನುವ ಅಸಡ್ಡೆ ಇದಕ್ಕೆ ಕಾರಣವಾಗಿರಬಹುದು. ಆದರೆ ಬದುಕಿನ ಮತ್ತು ಸಾಹಿತ್ಯದ ಮೂಲ ಇರುವುದೇ ಜಾನಪದದಲ್ಲಿ ಎನ್ನುವ ಸತ್ಯವನ್ನು ನಾವು ಮರೆಯಬಾರದು. ಪ್ರಸಂಗಗಳು ಹಲವು ಶಿಷ್ಟ ಸಾಹಿತ್ಯದ ಶ್ರೇಷ್ಠತೆಯನ್ನೂ ಮೈಗೂಡಿಸಿಕೊಂಡಿವೆ ಎಂಬ ವಾಸ್ತವವನ್ನೂ ನಾವು ನೆನಪಿಡಬೇಕು.

'ಾವ್ಯೇಷು ನಾಟಕಂ ರಮ್ಯಂ ಎನ್ನುವ ಪ್ರಸಿದ್ಧವಾದ ಮಾತು ಯಕ್ಷಗಾನ ಪ್ರಸಂಗಗಳ ಅರ್ಹತೆಯನ್ನೂ ಔಚಿತ್ಯವನ್ನೂ ಸಾರಿ ಹೇಳುತ್ತದೆ. ಕಾರಣ ಪ್ರಸಂಗಗಳೂ ನಿಜಾರ್ಥದಲ್ಲಿ ನಾಟಕಗಳೇ ಆಗಿವೆ. ದೃಶ್ಯ ಮತ್ತು ಶ್ರವ್ಯ ಈ ಎರಡೂ ಗುಣಗಳು ಅವುಗಳಲ್ಲಿ ಮೇಳೈಸಿವೆ. ಪದ್ಯಕ್ಕೆ ವ್ಯಾಖ್ಯಾನ (ಅರ್ಥ) ಸೇರಿದರೆ ಅವುಗಳೊಂದು ವಿಶಿಷ್ಟವಾದ ನಾಟಕ ಸಾಹಿತ್ಯ ಪ್ರಕಾರವಾಗಿ ತಮ್ಮ ಮೇಲ್ಮೆಯನ್ನು ರುಜುವಾತುಗೊಳಿಸುತ್ತವೆ.

ಯಕ್ಷಗಾನದ ಆಚಾರ್ಯ ಪುರುಷ ಪಾರ್ತಿಸುಬ್ಬನಿಂದ ಪ್ರಾರಂಭಿಸಿ ಪ್ರಸಂಗ ಸಾಹಿತ್ಯಕ್ಕೆ ಅಪೂರ್ವವಾದ ಕಾಣಿಕೆಗಳನ್ನು ನೀಡಿದ ವಿಫುಲ ಸಂಖ್ಯೆಯ ಕವಿಗಳು ಕಾಸರಗೋಡು ಮತ್ತು ದಕ್ಷಿಣ ಕನ್ನಡದಲ್ಲಿ ಇಂದಿಗೂ ಆ ಕಾಯಕದಲ್ಲಿ ನಿರತರಾಗಿದ್ದಾರೆ. ಬೇರೆ ಪ್ರದೇಶಗಳಲ್ಲೂ ಸಾಕಷ್ಟು ಸಂಖ್ಯೆಯಲ್ಲಿ ದಾಖಲಿಸಬಹುದಾದ ಕವಿಗಳಿದ್ದಾರೆ. ಮುನ್ನುಡಿಯ ಮಿತಿಯಲ್ಲಿ ಆ ಎಲ್ಲರ ಹೆಸರನ್ನೂ ಉಲ್ಲೇಖಿಸುವುದಕ್ಕೆ ನಾನು ಇಚ್ಚಿಸುವುದಿಲ್ಲ.

ಇಷ್ಟನ್ನು ಪ್ರಸ್ತಾಪಿಸುವುದಕ್ಕಿರುವ ಮುಖ್ಯವಾದ ಉದ್ದೇಶ ಪಟ್ಟಾಜೆಯವರ ಕೃತಿಗಳು ಪ್ರಸಂಗಗಳ ಕುರಿತಾದ ನನ್ನ ಮಾತುಗಳನ್ನು ಪುಷ್ಟೀಕರಿಸುತ್ತವೆ ಎನ್ನುವುದನ್ನು ಸೂಚಿಸುವುದಷ್ಟೇ ಆಗಿದೆ. ಅವರ ಎಲ್ಲ ಕೃತಿಗಳಲ್ಲೂ ಎದ್ದು ತೋರುವ ಸರಳತೆ, ಸಹಜತೆ, ಸರಾಗತೆ ಮತ್ತು ಸುಭಗತೆ ಮೇಲ್ನೋಟಕ್ಕೆ ನಮ್ಮನ್ನು ಆಕರ್ಷಿಸುತ್ತವೆ. ಈ ಗುಣಗಳು ಯಕ್ಷಗಾನ ಪ್ರಸಂಗಗಳ ಮೂಲಧಾತು ಎಂದರೂ ತಪ್ಪಾಗಲಾರದು. ಗಣೇಶರಿಗೆ ಯಕ್ಷಗಾನದ ಮೇಲಿರುವ ಪ್ರೀತಿ ಅವರು ಪ್ರಸಂಗವನ್ನು ನಿರ್ವಹಿಸುವ ರೀತಿ ಮತ್ತು ಆ ಮೂಲಕ ಸಮಾಜಕ್ಕೆ ನೀಡುವ ನೀತಿ ಹೇಗೆ "ಮೂರುತಿ"ಗಳು ಅವರ ಪ್ರಸಂಗಗಳಿಗೆ ಶ್ರೀರಕ್ಷೆಯಾಗಿ ಕೂಡಿ ಬಂದಿವೆ.

ದೃಶ್ಯ ಕಾವ್ಯವೊಂದರಲ್ಲಿ ಇರಲೇ ಬೇಕಾದ ಘಟನಾವಳಿಗಳು ಮತ್ತು ಅವುಗಳ ಸಂಯೋಜನೆ, ಸನ್ನಿವೇಶ ಸಂದರ್ಭಗಳಿಗೆ ಸರಿಯಾದ ಬದಲಾವಣೆ ಈ ಪ್ರಸಂಗಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಮೈದಳೆಯುತ್ತವೆ. ಅದರೊಂದಿಗೇ ಭಾವವೈವಿಧ್ಯ ಮತ್ತು ರಸವೈವಿಧ್ಯಗಳನ್ನೂ ಕಾಪಾಡಿಕೊಳ್ಳಲಾಗಿದೆ. ಯಕ್ಷಗಾನ ಪ್ರದರ್ಶನದ ಕಾಲಗಳಿಗೆ ಅನುಗುಣವಾಗಿ ರಾಗಗಳನ್ನು ಪೋಣಿಸುವುದು ಮತ್ತು ಪಾತ್ರಗಳ ಪ್ರವೇಶಕ್ಕೆ ಅವಕಾಶವನ್ನು ಒದಗಿಸುವುದು ಪ್ರಸಂಗ ಸಾಹಿತ್ಯದಲ್ಲಿ ಇರಬೇಕಾದ ಹೆಚ್ಚುಗಾರಿಕೆಯಾಗಿದ್ದು, ಅದು ಇಲ್ಲಿನ ಪ್ರಸಂಗಗಳಲ್ಲೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಪ್ರಸಂಗಗಳು ಪ್ರದರ್ಶನದ ಕಾಲಕ್ಕೆ ಕಲೆಯಾಗಿ ಆಸ್ವಾದಿಸಲ್ಪಡುವಂತೆ ಕೇವಲ ವಾಚಿಕ ಸಾಹಿತ್ಯವಾಗಿಯೂ ರುಚಿಕರವಾಗಿರಬೇಕೆಂಬ ಸಹೃದಯರ ನಿರೀಕ್ಷೆಗೂ ಇಲ್ಲಿ ನಿರಾಶೆಯಾಗುವುದಿಲ್ಲ.

ಎಲ್ಲಕ್ಕಿಂತ ಮುಖ್ಯವಾಗಿ ಪ್ರಸಂಗಗಳಲ್ಲಿ ಇರಬೇಕಾದದ್ದು ಮತ್ತು ಪ್ರತ್ಯೇಕವಾಗಿ ಗುರುತಿಸಲ್ಪಡಬೇಕಾದದ್ದು ಯಕ್ಷಗಾನೀಯತೆ ಎನ್ನುವ ವಿಶಿಷ್ಟವಾದ ಮೌಲ್ಯ. ಪದಮೈತ್ರಿ, ಪದಶಯ್ಯೆ ಮೊದಲಾದವುಗಳಲ್ಲಿ ಈ ಗುಣ ಅಂತರ್ಗತವಾಗಬೇಕು. ಓದುತ್ತಾ ಹೋದಂತೆ, ಹಾಡುತ್ತಾ ಹೋದಂತೆ ಅದು ಅದ್ಭುತವಾದೊಂದು ಕಲಾಪ್ರಪಂಚವನ್ನು ತೆರೆದು ತೋರಿಸುವಂತಿರಬೇಕು. ಈ ಅಪೇಕ್ಷೆಗೂ ಬಹುಮಟ್ಟಿಗೆ ಇಲ್ಲಿ ಮಾನ್ಯತೆ ಸಂದಿದೆ.

ಹನ್ನೆರಡು ಪ್ರಸಂಗಗಳಲ್ಲಿ ವಸ್ತುವಿನ ದೃಷ್ಟಿಯಿಂದ ಪೌರಾಣಿಕ ಕಥಾಭಾಗಗಳೊಂದಿಗೆ ಒಂದೆರಡು ಕಾಲ್ಪನಿಕ ಕಥೆಗಳನ್ನೂ ಸಮನ್ವಯಿಸಲಾಗಿದೆ. ಕಾಲ್ಪನಿಕವಾದರೂ ಅವು ಪೌರಾಣಿಕದ ಸ್ವರೂಪದಲ್ಲಿಯೇ ಉಳಿದುಕೊಂಡಿವೆ ಮತ್ತು ವೈವಿಧ್ಯತೆಯ ಅಗತ್ಯಕ್ಕೆ ಪೂರಕವಾಗಿ ಬಂದಿವೆ. ಶೀರ್ಷಿಕೆಗಳೂ ಯಕ್ಷಗಾನದ ಸ್ವಭಾವದಲ್ಲಿಯೇ ಇವೆ ಎನ್ನುವುದಕ್ಕೆ "ಜರಾಸಂಧ ಗರ್ವಭಂಗ, ನೈಮಿಷಾರಣ್ಯ, ಶತ್ರುದಮನ, ಪಾರ್ವತೀ ಪ್ರತಿಜ್ಞೆ, ಕಾವು ಕ್ಷೇತ್ರ ಮಹಾತ್ಮೆ, ಉದಯಚಂದ್ರಿಕೆ," ಮೊದಲಾದ ಹೆಸರುಗಳೇ ಸಾಕ್ಷಿ ನುಡಿಯುತ್ತವೆ. ಅಲ್ಲಿಂದ ಇಲ್ಲಿಂದ ಎಂಬಂತೆ ತಕ್ಷಣಕ್ಕೆ ಮನಸ್ಸನ್ನು ಸೂರೆಗೊಳ್ಳುವ ಪಟ್ಟಾಜೆಯವರ ಪದ್ಯಗಳ ಅನೇಕ ಸಾಲುಗಳನ್ನು ಸಹೃದಯರು ಮೆಲುಕಾಡಬಹುದು. ಅವುಗಳನ್ನು ಪ್ರತ್ಯೇಕವಾಗಿ ತೋರಿಸುವುದಕ್ಕಿಂತ ಓದುಗರ ಆಸ್ವಾದನೆಗೆ ಬಿಟ್ಟುಬಿಡುವುದೇ ಸೂಕ್ತ ಎನ್ನುವುದು ನನ್ನ ಅನಿಸಿಕೆ.

ಆಳವಾದ ವಿಮರ್ಶೆಗೆ ಕೆಲವೊಂದು ದೋಷಗಳೂ, ನ್ಯೂನತೆಗಳೂ ಕಾಣಿಸಿಕೊಳ್ಳಬಹುದಾದರೂ ಅಂತಹ ಸೀಳುನೋಟಕ್ಕೆ ಮನಮಾಡುವುದು ನನ್ನ ಉದ್ದೇಶವಲ್ಲ. ನನ್ನ ದೃಷ್ಟಿಯಲ್ಲಿ ಅದು ಮುನ್ನುಡಿಕಾರನ ಕರ್ತವ್ಯವೂ ಅಲ್ಲ.

ಪಟ್ಟಾಜೆ ಗಣೇಶ ಭಟ್ಟರು ಒಳ್ಳೆಯ ಆಯುರ್ವೇದ ವೈದ್ಯರಾಗಿಯೂ ಪ್ರಸಿದ್ಧರಾದವರು. ಅದರೊಂದಿಗೆ ಯಕ್ಷಗಾನ ಅರ್ಥಗಾರಿಕೆ, ವೇಷಗಾರಿಕೆ ಮೊದಲಾದವುಗಳಲ್ಲೂ ತುಂಬುಹೃದಯದಿಂದ ತನ್ನನ್ನು ತೊಡಗಿಸಿಕೊಂಡವರು. ಹವ್ಯಾಸ ವೃತ್ತಿಯಾಗುವುದು, ವೃತ್ತಿ ಹವ್ಯಾವಾಗುವುದು ಈ ಎರಡೂ ಅಪರೂಪದ ವಿದ್ಯಮಾನಗಳನ್ನು ಅವರ ವ್ಯಕ್ತಿತ್ವದಲ್ಲೂ ನೋಡಬಹುದು. ಶ್ರೀಯುತರಿಂದ ಇನ್ನೂ ಹೆಚ್ಚಿನ ಸೇವೆ ನಾಡು ನುಡಿಗಳಿಗೆ ಸಲ್ಲಲಿ ಎನ್ನುವುದಷ್ಟೆ ನನ್ನ ಹಾರ್ದಿಕವಾದ ಹಾರೈಕೆ.

ಡಾ. ರಮಾನಂದ ಬನಾರಿ
ಮಂಜೇಶ್ವರ – 671323, ಕಾಸರಗೋಡು
ಮೊ : 9446297226

ಲೇಖಕನ ಮಾತು....

ಬಾಲ್ಯದಿಂದಲೇ ಯಕ್ಷಗಾನದ ಗೀಳು ಅಂಟಿಕೊಂಡಿತ್ತು. ಶಾಲಾ ಜೀವನದಲ್ಲಿ ಊರಿಗೆ ಬಂದ ಎಲ್ಲಾ ಮೇಳಗಳ ಆಟಗಳನ್ನು ನೋಡುತ್ತಿದ್ದೆ. ಇದರಿಂದಾಗಿ ಪುರಾಣ ಜ್ಞಾನವುಂಟಾಯಿತು. ಬೇಸಿಗೆಯಲ್ಲಿ ಬಂದೆಲ್ಲಾ ಆಟಗಳನ್ನು ನೋಡಿ ಕೆಲವೊಮ್ಮೆ ಮಳೆಗಾಲದಲ್ಲಿಯೂ ಒಂದೆರಡು ಆಟಗಳು ನೋಡಲು ಸಿಗುತ್ತಿತ್ತು. ಕ್ರಮೇಣ ಯಕ್ಷಗಾನ ರಂಗದ ಹೆಚ್ಚಿನ ಮಾಹಿತಿಗಳು ದೊರೆಯಿತು. ರಂಗಕ್ಕೆ ಹೊಸ ಪ್ರಸಂಗಗಳು ಬರತೊಡಗಿದವು. ಪುರಾಣದಲ್ಲಿ ಕೆಲವು ಪಾತ್ರಗಳ ಕುರಿತಾದ ಪ್ರಸಂಗಗಳು ಒಳ್ಳೆ ಯಶಸ್ವಿ ಎನಿಸಿತ್ತು. ಸಮಗ್ರ ಭೀಷ್ಮ, ಮಹಾರಥಿ ಕರ್ಣ, ಮಹಾಕಲಿ ಮಗಧೇಂದ್ರ ಇತ್ಯಾದಿ. ಕೊನೆ ಕೊನೆಗೆ ಚಾರಿತ್ರಿಕ, ಸಾಮಾಜಿಕ ಕಥೆಗಳು ಪ್ರಸಂಗವಾಗಿ ರಂಗಪ್ರವೇಶ ಮಾಡಿದವು. ಇದನ್ನೆಲ್ಲಾ ಕಂಡಾಗ ನನಗೂ ಪ್ರಸಂಗ ರಚನೆಯ ಮನಸ್ಸಾಯಿತು. ಅದರ ಪರಿಣಾಮವಾಗಿ ಬ್ರಹ್ಮೋತ್ತರ ಖಂಡದ ಶನಿ ಪ್ರದೋಷ ಮಹಾತ್ಮೆ ಎಂಬ ಕಥೆಯನ್ನು ಆಯ್ದುಕೊಂಡು "ಗಂಧರ್ವ ನಂದನೆ" ಎಂಬ ಹೆಸರಿನಿಂದ ಪ್ರಸಂಗ ರಚಿಸಿದೆ. ಆರಂಭದಲ್ಲಿ ಸ್ವಲ್ಪ ಕಷ್ಟವಾದರೂ ಪ್ರಯತ್ನ ಮುಂದುವರೆಸಿ ಬರೆದು ಮುಗಿಸಿದೆ. ಮೊದಲ ಯಕ್ಷಗಾನ ಕೃತಿಯನ್ನು ಮೊದಲ ಬಾರಿ ಯಕ್ಷಗಾನ ಕ್ಷೇತ್ರದ ಪ್ರಸಿದ್ಧ ಅರ್ಥಧಾರಿ ಎನಿಸಿದ, ನೂರಕ್ಕೆ ಹತ್ತಿರ ಯಕ್ಷಗಾನ ಪ್ರಸಂಗಗಳನ್ನು ರಚಿಸಿದ, ನನ್ನ ಬಂಧುಗಳೂ ಆದ ದಿ। ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟರಲ್ಲಿ ತೋರಿಸಿದೆ. ನನ್ನಲ್ಲಿ ಪ್ರೀತಿಯಿಟ್ಟು ಅತ್ಯಾಸಕ್ತಿಯಿಂದ ಓದಿನೋಡಿ ಮೆಚ್ಚಿಕೊಂಡಿದ್ದಲ್ಲದೆ ಕೆಲವು ತಿದ್ದುಪಡಿಗಳನ್ನು ಸೂಚಿಸಿದರು. ಅವರ ಮಾರ್ಗದರ್ಶನದಂತೆ ತಿದ್ದಿ ಬರೆದದ್ದಾಯಿತು. ಅದರೊಂದಿಗೆ ಯಕ್ಷಗಾನ ಅರ್ಥಗಾರಿಕೆಯಲ್ಲಿ ಅನುಸರಿಸಬೇಕಾದ ಕೆಲವು ಕ್ರಮಗಳನ್ನು ಸೂಚಿಸಿದರು. ಅವರನ್ನು ಯಾವ ಕಾಲಕ್ಕೂ ಮರೆಯಲಾಗುವುದಿಲ್ಲ. ಅವರಿಗೆ ತುಂಬು ಹೃದಯದ ಕೃತಜ್ಞತೆಗಳು. ನಮ್ಮ ನೆರೆಕರೆಯವರಾಗಿರುವ ಪೆರ್ನಾಜೆ ಶ್ರೀ ಸೀತಾರಾಘವ ಪ್ರೌಢಶಾಲಾ ಕನ್ನಡ ಪಂಡಿತರಾದ ದಿ। ಡಿ. ಮಹಾಲಿಂಗ ಭಟ್ಟರು ಓದಿ ನೋಡಿ ಕೆಲವು ವ್ಯಾಕರಣ ದೋಷಗಳನ್ನು ಅವರು ಸೂಚಿಸಿದಂತೆ ಸರಿಪಡಿಸಿದೆ. ಅವರಿಗೆ ನನ್ನ ಧನ್ಯವಾದಗಳು. ಹೀಗೆ ವಿದ್ವಾಂಸರು, ಕಲಾವಿದರುಗಳು ಆದ ನನ್ನ ಮಿತ್ರರು ಓದಿನೋಡಿ ಮೆಚ್ಚುಗೆ ಸೂಚಿಸಿದರು. ಇದರಿಂದಾಗಿ ಮುಂದೆ ಬರೆಯಲು ಉತ್ಸಾಹ ಬಂತು. ಆಟಗಳನ್ನು ನೋಡಿದಾಗ ಸ್ಫೂರ್ತಿಯುಂಟಾಗಿ ಹರಿವಂಶ ಪುರಾಣವನ್ನು ಆಧರಿಸಿ ಪಾಂಚಜನ್ಯವೆಂಬ ಶ್ರೀಕೃಷ್ಣನ ಗುರುಕುಲವಾಸ, ಗುರುದಕ್ಷಿಣೆಯ ಭಾಗದ ಪ್ರಸಂಗ ರಚಿಸಿದೆ.

ಅದೇ ರೀತಿ ಉತ್ಸಾಹ ಬಂದಾಗ ಬಂದಾಗ ಒಂದೊಂದರಂತೆ ಒಟ್ಟು ಹನ್ನೆರಡು ಪ್ರಸಂಗಗಳನ್ನು ರಚಿಸಿದೆ. ಆದರೆ ಬರೆದದ್ದೆಲ್ಲ ಯಾವುದೂ ಪ್ರದರ್ಶನಗೊಳ್ಳಲಿಲ್ಲ. ಯಕ್ಷಗಾನ ಕ್ಷೇತ್ರದಲ್ಲಿ ನನಗೆ ಹೇಳಿಕೊಳ್ಳುವಂತಹ ಪ್ರಸಿದ್ಧಿ ಇರಲಿಲ್ಲ. ಆದ್ದರಿಂದ ಯಾವ ಮೇಳದವರಲ್ಲಿಯೂ ಕೇಳಿಕೊಳ್ಳುವುದಕ್ಕೆ ಹೋಗಲಿಲ್ಲ. ಹಾಗಾಗಿ ನಮ್ಮ ಊರಲ್ಲೇ ಹವ್ಯಾಸಿ ಮತ್ತು ವೃತ್ತಿ ಕಲಾವಿದರನ್ನು ಸೇರಿಸಿ ಪ್ರದರ್ಶನಕ್ಕೆ ಇಳಿದೆ. ಮೊದಲೆರಡು ಪ್ರಸಂಗಗಳಲ್ಲಿ ಪ್ರಸಿದ್ಧ ಭಾಗವತರೆನಿಸಿದ ದಿ। ಚನಿಯ ನಾಯ್ಕರು ಭಾಗವತರಾಗಿ ಭಾಗವಹಿಸಿ ಆಟವನ್ನು ಯಶಸ್ವಿಗೊಳಿಸಿದರು. ಅವರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು. ಆಮೇಲೆ ದೇವಾಲಯದ ಬ್ರಹ್ಮಕಲಶೋತ್ಸವದ ಸಂದರ್ಭದಲ್ಲಿ ದೇವಸ್ಥಾನದ ವ್ಯವಸ್ಥಾಪಕರ ಅಪೇಕ್ಷೆಯಂತೆ ಕಾವು ಕ್ಷೇತ್ರ ಮಹಾತ್ಮೆ ಎಂಬ ಪ್ರಸಂಗವು ಕುಂಟಾರು ಶ್ರೀ ಮಹಾವಿಷ್ಣು ಕೃಪಾಪೋಷಿತ ಯಕ್ಷಗಾನ ಮಂಡಳಿಯ ಮೂಲಕ ಪ್ರದರ್ಶಿಸಲ್ಪಟ್ಟಿತು. ಮರುವರ್ಷ ಇದೇ ಪ್ರಸಂಗವು ಮದ್ಲ ಸುಬ್ರಾಯ ಬಲ್ಯಾಯರ ಉತ್ಸಾಹದಿಂದ ಮತ್ತೊಮ್ಮೆ ಪ್ರದರ್ಶನಗೊಂಡಿತು. ಹೀಗೆ ಒಟ್ಟು 5 ಪ್ರಸಂಗಗಳು ಕಾವಿನಲ್ಲಿ ಪ್ರದರ್ಶನಗೊಂಡಿತು.

ಈ ವಿಚಾರವಾಗಿ ಯಾವತ್ತೂ ಮರೆಯಲಾಗದ ವ್ಯಕ್ತಿ ಎಂದರೆ ಕಟೀಲು ಶ್ರೀ ದುರ್ಗಾಪರಮೇಶ್ವರಿ ಕೃಪಾಪೋಷಿತ ಯಕ್ಷಗಾನ ಮೇಳದ ಪ್ರಸಿದ್ಧ ಭಾಗವತರಾದ ದಿ। ಕುಬಣೂರು ಶ್ರೀಧರರಾಯರು ತನ್ನ ಯಕ್ಷಪ್ರಭಾ ಮಾಸಪತ್ರಿಕೆಯ ಚಂದಾ ಸಂಗ್ರಹಕ್ಕಾಗಿ ಬಂದಿದ್ದವರು, ನನ್ನೆಲ್ಲಾ ಪ್ರಸಂಗಗಳನ್ನು ಮೇಲೆ ಮೇಲೆ ಓದಿ ನೋಡಿ ನಮ್ಮ ಮೇಳದಲ್ಲಿ ಹೊಸ ಪ್ರಸಂಗಗಳ ಪ್ರದರ್ಶನಕ್ಕೆ ಸೀಮಿತ ಅವಕಾಶಗಳುಂಟು ಎಂದು 3 ಪ್ರಸಂಗಗಳನ್ನು ಕೊಂಡುಹೋಗಿ ಅದೇ ವರ್ಷ ಮೇಳದಲ್ಲಿ ಪ್ರದರ್ಶಿಸಿದರು. ಮೊದಲ ಪ್ರಸಂಗ – 2 ಬಾರಿ, ಪಾಂಚಜನ್ಯ – ನಾಲ್ಕೈದು ಬಾರಿ, ಶತ್ರುದಮನ 1 ಬಾರಿ ಪ್ರದರ್ಶನವಾಯಿತು. ಶ್ರೀಧರರಾಯರಿಗೆ ಧನ್ಯವಾದಗಳು. 2017ನೇ ಇಸವಿಯಲ್ಲಿ ಶ್ರೀ ಕಟೀಲು ನಾಲ್ಕನೇ ಮೇಳದ ಪ್ರಸಿದ್ಧ ಹಾಸ್ಯಗಾರರಾದ ಶ್ರೀ ರವಿಶಂಕರ ವಳಕ್ಕುಂಜರವರು ಶತ್ರುದಮನ ಎಂಬ ಪ್ರಸಂಗವನ್ನು 3 ಬಾರಿ ಪ್ರದರ್ಶನಗೊಳಿಸಿದರು. ಅವರ ಸೂಚನೆಯಂತೆ ಎಲ್ಲಾ ಪ್ರಸಂಗಗಳನ್ನು ಮುದ್ರಿಸುವ ಯೋಚನೆಯುಂಟಾಯಿತು. ನನ್ನ ಕಿರಿಯ ಪುತ್ರ ಚಿ। ವಸಂತಕೃಷ್ಣನು ಮುದ್ರಣದ ಎಲ್ಲಾ ಹೊಣೆಯನ್ನು ವಹಿಸಿಕೊಂಡು ಮುದ್ರಣಕ್ಕೆ ಮುಂದಾದನು. ಅದಕ್ಕೂ ಮುನ್ನ ಎಲ್ಲಾ ಹನ್ನೆರಡು ಪ್ರಸಂಗಗಳನ್ನು ನನ್ನ ಹಿರಿಯ ಪುತ್ರ ಚಿ। ಶಿವನಾರಾಯಣನು ತನ್ನ ಸೊಗಸಾದ ಅಕ್ಷರಗಳಿಂದ ನಕಲು ಮಾಡಿ ಸಹಕರಿಸಿದನು. ಮುದ್ರಣದ ಕರಡು ಪ್ರತಿಯನ್ನು ತಿದ್ದಿ ಸಹಕರಿಸಿದ ಶ್ರೀ ರವಿಶಂಕರ ವಳಕ್ಕುಂಜ ಅವರಿಗೆ ಹೃದಯಪೂರ್ವಕ ಧನ್ಯವಾದಗಳು.

ಈ ಕೃತಿಗಳಿಗೆ ಒಂದು ಮುನ್ನುಡಿಬೇಕೆಂಬ ಅಭಿಲಾಷೆಯುಂಟಾಗಿ ನಮ್ಮ ಆತ್ಮೀಯರೂ ಪ್ರಸಿದ್ಧ ಯಕ್ಷಗಾನ ಅರ್ಥಧಾರಿಗಳೂ, ಜನಪ್ರಿಯ ವೈದ್ಯರೂ ಆಗಿರುವ ಶ್ರೀ ರಮಾನಂದ ಬನಾರಿಯವರನ್ನು ಕೇಳಿಕೊಂಡಾಗ ಸಂತೋಷದಿಂದ ಒಪ್ಪಿ ಯಥೋಚಿತವಾದ ಮುನ್ನುಡಿಯನ್ನು ಬರೆದುಕೊಟ್ಟ ಡಾ। ಬನಾರಿಯವರಿಗೂ ಹೃತ್ಪೂರ್ವಕ ಕೃತಜ್ಞನಾಗಿದ್ದೇನೆ. ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ಬೆಳ್ಳಾರೆ ಕಿರಣ್ ಪ್ರಿಂಟರ್ಸ್‌ನ ಶ್ರೀ ಪರಮೇಶ್ವರ ಭಟ್ ಪದ್ಯಾಣ ಮತ್ತು ಶ್ರೀ ಅಕ್ಷಯ್ ಪದ್ಯಾಣ ಇವರಿಗೂ ಕೃತಜ್ಞತೆಗಳು. ಊರಿನಲ್ಲಿ ನಡೆದ ಪ್ರಸಂಗಗಳ ಪ್ರದರ್ಶನಕ್ಕೆ ಕಲಾವಿದರಾಗಿ ಭಾಗವಹಿಸಿದ ಹವ್ಯಾಸಿ ಮತ್ತು ವೃತ್ತಿ ಕಲಾವಿದ ಬಂಧುಗಳಿಗೂ ಮತ್ತು ಕುಂಬಾರು ಮತ್ತು ಶ್ರೀ ಕಟೀಲು ಮೇಳದ ಕಲಾವಿದರಿಗೂ ಕೃತಜ್ಞನಾಗಿದ್ದೇನೆ. ಇದೇ ರೀತಿ ಹತ್ತು ಹಲವು ರೀತಿಯಲ್ಲಿ ಸಹಕರಿಸಿ ನನ್ನೆಲ್ಲಾ ಬಂಧುಗಳಿಗೂ ವಂದಿಸುತ್ತೇನೆ.

ಇತೀ,

ವೈದ್ಯ ಪಟ್ಟಾಜೆ ಗಣೇಶ ಭಟ್ಟ

'ನಾರಾಯಣೀಯಂ' ಬರೆಕರೆ, ಕಾವು

ಒಳಪುಟಗಳಲ್ಲಿ......

1.	ಗಂಧರ್ವ ನಂದನೆ	–	01
2.	ಪಾಂಚಜನ್ಯ	–	39
3.	ನೈಮಿಷಾರಣ್ಯ	–	59
4.	ಜರಾಸಂಧ ಗರ್ವಭಂಗ	–	103
5.	ಶತ್ರುದಮನ	–	123
6.	ಪಾರ್ವತೀ ಪ್ರತಿಜ್ಞೆ	–	157
7.	ಕಾವು ಕ್ಷೇತ್ರ ಮಹಾತ್ಮೆ	–	195
8.	ನಾಗಮಣಿ ಮಾಣಿಕ್ಯ	–	233
9.	ಹಂಸಡಿಬಿಕೋಪಾಖ್ಯಾನ	–	275
10.	ಉದಯ ಚಂದ್ರಿಕೆ	–	309
11.	ವರಸಿದ್ಧಿ	–	347
12.	ಶಲ್ಯಾಗಮನ	–	357

ಉದಯ ಚಂದ್ರಿಕೆ

ಕಥಾಸಾರಾಂಶ :

1. ಮಂದಾರಪುರ. ಸಿಂಧು ಭೈರವ ಅರಸ. ರಾಣಿ ಕುಸುಮಗಂಧಿ. ಮಕ್ಕಳಿಲ್ಲ ಎಂಬ ಕೊರತೆಯನ್ನು ವಿಪ್ರರು ಹೇಳುವರು. ತಂಗಿ ಪದ್ಮಾವತಿಯನ್ನು ಚಂದನಪುರದ ಅರಸನಿಗೆ ಮದುವೆ ಮಾಡಿಕೊಟ್ಟೆ. ಆಕೆಗೊಬ್ಬ ಮಗನಿದ್ದಾನೆ. ಇನ್ನೊಬ್ಬ ಪುತ್ರನು ಜನಿಸಿದರೆ ನಿನಗೆ ನೀಡುತ್ತೇನೆಂದು ಮಾತು ಕೊಟ್ಟಿದ್ದಾರೆ. ಆ ಮಗುವನ್ನು ದತ್ತು ಪಡೆಯುವೆನೆಂದು ಸಿಂಧುಭೈರವನು ಹೇಳುವನು. ಚಾರಕರ ಆಗಮನ. ಪದ್ಮಾವತಿಯು ಎರಡನೇ ಪುತ್ರನನ್ನು ಹೆತ್ತಳೆಂದು ಹೇಳುವರು. ನಾಮಕರಣಕ್ಕೆ ಆಮಂತ್ರಣವನ್ನು ನೀಡುವನು. ಸಿಂಧು ಭೈರವನು ಸಂತೋಷದಿಂದ ಬೆಳಿಗ್ಗೆ ಸತೀ ಸಹಿತ ಚಂದನಾಪುರಕ್ಕೆ ತೆರಳಲು ಸಿದ್ಧತೆ ನಡೆಸುವನು.
2. ಕೇತಕೀಪುರದ ಅರಸ ಕೇತುಮಲ್ಲನ ತಮ್ಮ ಚಂಡಕೀರ್ತಿ. ಸಿಂಧುಭೈರವನ ಆಶ್ರಯದಲ್ಲಿರುವನು. ಕುಸುಮಗಂಧಿಯು ಅವನನ್ನು ತಮ್ಮನೆಂದೇ ತಿಳಿಯುವಳು. ವಂಚಕನಾದ ಆತ ಪೆದ್ದನಾದ ತನ್ನ ಮಗನಿಗೆ ಮಂದಾರಪುರದ ಅಧಿಕಾರ ಸಿಗಬಹುದೆಂಬ ಆಸೆಯಲ್ಲಿರುತ್ತಾನೆ. ಅರಸನು ತಂಗಿಯ ಪುತ್ರನನ್ನು ದತ್ತು ಪಡೆಯುವನೆಂದು ಚಿಂತೆ. ಕುಸುಮಗಂಧಿಯ ಬಳಿಗೆ ತೆರಳಿ ಚಾಡಿ ಹೇಳುವನು. ನನ್ನ ಮಗನಿರುವಾಗ ದತ್ತು ಪಡೆಯುವುದೇಕೆ ಎಂದು ಹೇಳುವನು. ಅವನು ಪೆದ್ದನೆಂದು ಹೇಳುವಳು. ನಿನ್ನ ಉದರದಲ್ಲೇ ಮುಂದೆ ಮಗನು ಜನಿಸಿದರೆ ಕಷ್ಟವಾಗಬಹುದೆಂದು ಹೇಳುವನು. ಕುಸುಮಗಂಧಿಯು ಚಂಡಕೀರ್ತಿಯನ್ನು ಗದರಿಸಿ ಕಳುಹಿಸುವಳು. ಚಂಡಕೀರ್ತಿಯ ಚಿಂತೆ. ಅರಸನ ತಂಗಿಯು ಹೆತ್ತ ಮಗನನ್ನು ಕೊಲ್ಲಲು ಸಂಚು. ಮಿತ್ರನಾದ ಚಿಂತಾಮಣಿಯ ಮನೆಗೆ ತೆರಳುವನು.
3. ಚಂಡಕೀರ್ತಿ ಮತ್ತು ಚಿಂತಾಮಣಿಯರ ಸಮಾಲೋಚನೆ. ಚಿಂತಾಮಣಿಯಿಂದ ಸಾಂತ್ವನ. ಕಾರಸ್ಥಾನ, ಸೇವಕಿ ಚೆನ್ನಿಯನ್ನು ಕರೆದು ಎಳೆ ಶಿಶುವನ್ನು ತರಿಸಿ ಕತ್ತು ಹಿಚುಕಿ ಕೊಲ್ಲೋಣ ಎಂಬ ಸಲಹೆ. ಚೆನ್ನಿಯನ್ನು ಕರೆದು ಆಮಿಷ. ಆಕೆ ಸಂತೋಷದಿಂದ ಚಂದನಾಪುರಕ್ಕೆ ನಡೆಯುವಳು.
4. ಚಂದನಾಪುರದ ಅರಸ ದೈವಜ್ಞರನು ಕರೆಸಿ ಪುತ್ರನ ಜಾತಕದ ಫಲವನ್ನು ಕೇಳುವನು. ಮೂಲ ನಕ್ಷತ್ರದಲ್ಲಿ ಜನನ. ಬಲಭುಜದಲ್ಲಿ ಓಂಕಾರ ಚಿಹ್ನೆ. ಅವನಿಗೆ ಉತ್ತಮ ಯೋಗವಿದ್ದರೂ ಹೆತ್ತವರಿಗೆ ತೊಂದರೆಯಿದೆ. ಶತ್ರುಗಳು ದಾಳಿಯಿಡುತ್ತಾರೆ. ಅದಕ್ಕಾಗಿ ಶಿಶುವನ್ನು ದತ್ತು ನೀಡಲು ದೈವಜ್ಞರ ಸಲಹೆ. ಸಿಂಧುಭೈರವನ ಆಗಮನ, ಸತ್ಕಾರ, ದೈವಜ್ಞರು ಹೇಳಿದ ಮಾತನ್ನು ಹೇಳುವನು. ದತ್ತು ನೀಡಲು ಸಮ್ಮತಿ. ನಾಮಕರಣ ಉತ್ಸವ, ಉದಯ ಎಂದು ನಾಮಕರಣ. ಮನೋರಂಜನಾ ಕಾರ್ಯಕ್ರಮ. ಆಟ, ತಾಳಮದ್ದಳೆ, ಸಂಗೀತ, ಭಾಮಿನಿ ಎಂಬ ಕಲಾವಿದೆಯನ್ನು ಕರೆಸಿ ನೃತ್ಯ ಕಲಾವಿದರಿಗೆ ಸನ್ಮಾನ.
5. ಚೆನ್ನಿ ಪದ್ಮಾವತಿಯನ್ನು ಒಲಿಸಿ ಸೇವೆ ಮಾಡುವಳು. ಹಾಲಿಗೆ ಅಮಲು ಸೇರಿಸಿ ನಿದ್ದೆ ಮಾಡಿದಾಗ ಮಗುವಿಗೂ ಮೂರ್ಛೆಯ ಔಷಧಿ ನೀಡಿ ಅಪಹರಿಸುವಳು. ಚಿಂತಾಮಣಿಯ ಕೈಗೆ ಶಿಶುವನ್ನು ಕೊಡುವಳು. ಚಂಡಕೀರ್ತಿಗೆ ಸಂತಸ.
6. ಪದ್ಮಾವತಿಗೆ ಎಚ್ಚರವಾಗಿ ಶಿಶುವನ್ನು ಕಾಣದೆ ಚಿಂತೆ. ಕುಸಮಗಂಧಿನಿ ಸಂತೈಸುವಳು. ಸಿಂಧುಭೈರವನ ಚಿಂತೆ. ದೇವರಸನ ಚಿಂತೆ.
7. ಚಿಂತಾಮಣಿ ಶಿಶುವನ್ನು ಎತ್ತಿ ಕೊಂಡೊಯ್ಯುವಾಗ ಶಿಶುವಿಗೆ ಎಚ್ಚರವಾಗಿ ಎದೆಗೆ

ತುಳಿಯುವುದು. ತಾನು ಮಾಡುತ್ತಿರುವುದು ತಪ್ಪು ಎಂದು ತಿಳಿದು ಪಶ್ಚಾತ್ತಾಪ. ದೇವರಲ್ಲಿ ಕ್ಷಮೆಯನ್ನು ಯಾಚಿಸಿ ಶಿಶುವನ್ನು ಕಾಡಲ್ಲಿ ಬಿಟ್ಟು ತೆರಳುವನು. ಕಾಡಿನಲ್ಲಿ ಮಗುವು ಅತ್ತಾಗ ಖಗ ಮೃಗಗಳೆಲ್ಲಾ ಗಲಿಬಿಲಿಯಿಂದ ಓಡುವುದು.

8. ಕಾಡನಲ್ಲಿ ವಾಸಿಸುವ ಕುಡಿಯರ ನಾರಿ ವೆಂಕಮ್ಮ. ಬುಟ್ಟಿ ಹೆಣೆಯುವ ಕಾಯಕ. ಕರಿಯನ ಹೆಂಡತಿ. ಬಿದಿರು ಸಂಗ್ರಹಿಸಲು ಬರುವಾಗ ಮಗುವಿನ ಅಳು ಕೇಳಿ ಹುಡುಕುವಳು. ಶಿಶವನ್ನೆತ್ತಿ ಗುಡಿಸಲಿಗೆ ತೆರಳಿ ಗಂಡನಿಗೆ ತೋರಿಸುವಳು. ಮಗುವಿನ ವಿಚಾರ ತಿಳಿಯಲು ಕಾಡಿನಲ್ಲಿ ಹನುಮಂತನ ಭಜಕನಾದ ಮುನಿಯ ಬಳಿಗೆ. ರಾಜ ಕಳೆ ಇದೆ. ಬಲಭುಜದಲಿ ಓಂಕಾರ ಇರುವ ಕಾರಣ ತ್ರಿಮೂರ್ತಿಗಳ ಅನುಗ್ರಹ ಇರುವುದು. ಪರಿಸರ ಪ್ರೇಮಿಯಾಗಿರುತ್ತಾನೆ. ಹಗೆಗಳ ಸಂಚಿನಿಂದಾಗಿ ಹೆತ್ತವರನ್ನು ಅಗಲಬೇಕಾಗಿ ಬಂತು. ಐದು ವರ್ಷ ತುಂಬಿದಾಗ ನಾನೇ ವಿದ್ಯೆ ಕಲಿಸುವೆ ಅಲ್ಲಿಯವರೆಗೆ ಸಾಕಿರಿ ಎಂಬ ಸಲಹೆ. ಪುತ್ರರಿಲ್ಲ ನಿಮ್ಮ ಬಾಳಿನ ಕತ್ತಲೆಯನ್ನು ಕಳೆದ ಕಾರಣ ಉದಯಾದಿತ್ಯ ಎಂದು ಹೆಸರಿಡಲು ಸಲಹೆ. ಕುಡಿಯರ ಕೇರಿಯಲ್ಲಿ ಉದಯಾದಿತ್ಯನು ಬೆಳೆಯುವನು.

9. ಸಿಂಧುಭೈರವನ ಹೆಂಡತಿ ಕುಸುಮಗಂಧಿ ಗರ್ಭಿಣಿಯಾಗುವಳು. ದೇವತಾರಾಧನೆ, ಸೀಮಂತ.

10. ಚಂಡಕೀರ್ತಿಯ ಚಿಂತೆ. ಮಿತ್ರ ಚಿಂತಾಮಣಿಯೊಡನೆ ಸಮಾಲೋಚನೆ. ಹೆಣ್ಣುಮಗಳು ಜನಿಸಿದರೆ ನಿನ್ನ ಮಗನಿಗೆ ತಂದು ಮದುವೆ ಮಾಡಿದರೆ ಅಧಿಕಾರ ತನ್ನಿಂದ ತಾನೆ ಸಿಗುತ್ತದೆ ಎಂಬ ಸಲಹೆ. ಚಂಡಕೀರ್ತಿಗೆ ಸಂತಸ.

11. ದುರ್ಗಾಪುರದಲ್ಲಿ ಶಾಂತಿ ಗುಪ್ತನ ಆಳ್ವಿಕೆ. ದಂಡಯಾತ್ರೆಗೆ ನಿರ್ಣಯ. ಭೀಕರ ಬರಗಾಲ ಬಂದಿರುವ ಚಂದನಾಪುರವನ್ನು ಆಕ್ರಮಿಸಲು ಸೇನಾ ಸಹಿತ ತೆರಳುವನು.

12. ಚಾರಕರಿಂದ ವಿಚಾರ ತಿಳಿದ ಚಂದನಪುರದ ಅರಸ ದೇವರಸನು ಪತ್ನಿಯನ್ನು ಕರೆದು ಮಗನ ಜತೆ ತವರು ಮನೆಗೆ (ಮಂದಾರ ಪುರ) ತೆರಳಲು ಹೇಳುವನು. ಪದ್ಮಾವತಿಯು ಕಷ್ಟಕಾಲದಲ್ಲಿ ನಿಮ್ಮ ಜತೆಗೇ ಇರುವೆನೆಂದು ಹೇಳುವಳು. ಆರಿಗೂ ತಿಳಿಯದಂತೆ ಗುಪ್ತದ್ವಾರದ ಮೂಲಕ ತೆರಳಿ ಕಾಡು ಸೇರುವರು.

13. ಶಾಂತಿಗುಪ್ತನು ಚಂದನಾಪುರವನ್ನು ವಶಪಡಿಸುವನು. ದೇವರಸನನ್ನು ಹುಡುಕಲು ಸೈನಿಕರನ್ನು ಕಳುಹಿಸುವನು.

14. ಸಿಂಧುಭೈರವನ ಪತ್ನಿ ಕುಸುಮಗಂಧಿನಿ ಹೆಣ್ಣು ಮಗುವನ್ನು ಹೆರುವಳು. ಚಂದ್ರಿಕಾ ಎಂದು ನಾಮಕರಣ. ಚಾರಕರ ಆಗಮನ. ಚಂದನಪುರವನ್ನು ದುರ್ಗಾಪುರದ ಅರಸ ಶಾಂತಿಗುಪ್ತನು ವಶಗೈದುದನ್ನೂ, ದೇವರಸ ಮತ್ತು ಅವನ ಪತ್ನಿ ಮಗನ ಜತೆ ಕಾಡನ್ನು ಸೇರಿದನೆಂದೂ ಹೇಳುವನು. ಅವರನ್ನು ಹುಡುಕಲು ಯಾರಿದ್ದಾರೆ ಎಂಬ ಚಿಂತೆ. ಚಿಂತಾಮಣಿಯು ನಾನು ಹೋಗುವೆನೆಂದು ಹೇಳುವನು. ಸಿಂಧುಭೈರವನು ಗುರುತಿನ ಪತ್ರವನ್ನು ನೀಡುವನು. ಚಂಡಕೀರ್ತಿಯು ಚಿಂತಾಮಣಿಯನ್ನು ಅಭಿನಂದಿಸುವನು. ದೇವರಸ, ಪದ್ಮಾವತಿಯರನ್ನು ನಾಶ ಮಾಡಲು ಸೂಚನೆ.

15. ಕುಡಿಯರ ಮನೆಯಲ್ಲಿ ಬೆಳೆಯುವ ಉದಯಾದಿತ್ಯನಿಗೆ ಐದು ವರ್ಷವಾದಾಗ ವಿದ್ಯೆ ಕಲಿಯಲು ಹನುಮದಾಸನ ಆಶ್ರಮಕ್ಕೆ.

16. ದೇವರಸ, ಪದ್ಮಾವತಿಯರು ಪುತ್ರ ಚಂದ್ರನಾಥನೊಂದಿಗೆ ಕಾಡಿನಲ್ಲಿ ತಿರುಗುವರು. ಸತಿ ಸುತರನ್ನು ಬಿಟ್ಟು ದೇವರಸನು ಮುಂದೆ ಸಾಗುವನು. ಎಚ್ಚರವಾದಾಗ ಪತಿಯನ್ನು ಕಾಣದೆ ಪದ್ಮಾವತಿಯು ಚಿಂತಿಸುವಳು. ಚಂದ್ರನಾಥನು ಧೈರ್ಯ ಹೇಳುವನು.

ಚಿಂತಾಮಣಿಯು ಬಂದು ಪರಿಚಯ ಕೇಳುವನು. ಮಂದಾರಪುರದ ತವರು ಮನೆಗೆ ತೆರಳಲು ಹೇಳಿದಾಗ ಪದ್ಮಾವತಿಯೇ ನಿರಾಕರಿಸಿ, ಮಗನಿಗೆ ವಿದ್ಯೆ ಕಲಿಸಲು ಗುರುಗಳನ್ನು ತೋರಲು ಹೇಳುವಳು. ಎಲ್ಲರೂ ಹನುಮದಾಸನ ಆಶ್ರಮಕ್ಕೆ.

17. ಹನುಮದಾಸನು ಪದ್ಮಾವತಿಗೆ ಆಶ್ರಯ ನೀಡಿ ಚಂದ್ರನಾಥನಿಗೆ ವಿದ್ಯೆ ಕಲಿಸುವನು. ಉದಯಾದಿತ್ಯನು ಜತೆಯಾಗಿ ಇರುವನು.
18. ಚಂಡಕೀರ್ತಿಯ ಬಳಿಗೆ ಗುಪ್ತಚಾರಕ. ಮಂದಾರಪುರದ ಚಂದನಾ ಕಾಡಿನಲ್ಲಿ ಪದ್ಮಾವತಿ ಇದ್ದಾಳೆ ಎಂಬ ವಾರ್ತೆ ಹೇಳುವನು. ಅಣ್ಣನಾದ ಸಿಂಧುಭೈರವನು ಬರಹೇಳಿದ್ದಾನೆಂದು ತಿಳಿಸಿ ಅವಳನ್ನು ಕರೆತಂದು ಭೋಗಿಸಲು ನಿರ್ಧಾರ. ಕರೆ ತಂದು ಸೇವಕಿ ಚೆನ್ನಿ ಮನೆಯಲ್ಲಿ ಇರಿಸಲು ನಿರ್ಣಯ.
19. ಹನುಮದಾಸನ ಆಶ್ರಮದಲ್ಲಿ ಉದಯಾದಿತ್ಯ ಮತ್ತು ಚಂದ್ರನಾಥ. ಚಂದ್ರನಾಥನಿಗೆ ಇಪ್ಪತ್ತನಾಲ್ಕು, ಉದಯಾದಿತ್ಯನಿಗೆ ಇಪ್ಪತ್ತು ವರ್ಷ ಪ್ರಾಯ. ಪದ್ಮಾವತಿಯು ಕಾಡಿನಲ್ಲಿ ಸುಮ ಕೊಯ್ಯುವಳು. ಚಂಡಕೀರ್ತಿಯ ಆಗಮನ. ಮಂದಾರಪುರಕೆ ಅಣ್ಣ ಬರ ಹೇಳಿದ ಕಾರಣ ಕರೆದೊಯ್ಯಲು ಬಂದಿರುವೆನೆಂದು ಹೇಳಲು ಪದ್ಮಾವತಿಯು ನಿರಾಕರಿಸುವಳು. ಎಳೆದೊಯ್ಯಲು ಕೈ ಇಕ್ಕಿದಾಗ ಉದಯ ಮತ್ತು ಚಂದ್ರರು ಬಂದು ಚಂಡಕೀರ್ತಿಯನ್ನು ಬಡಿದೋಡಿಸುವರು. ಅರ್ಧ ಮೀಸೆಯನ್ನು ಬೋಳಿಸಿ ಕಳುಹಿಸುವರು. ಸೇಡು ತೀರಿಸುವೆನೆಂದು ನಿರ್ಧರಿಸಿ ಬರುವನು. ಮತ್ತೊಂದು ಬದಿ ಮೀಸೆಯನ್ನು ಬೋಳಿಸಿ ಸ್ನಾನ ಮಾಡಿ ಬರುವನು.
20. ಸಿಂಧುಭೈರವನ ಪುತ್ರಿ ಚಂದ್ರಿಕೆ. ಷೋಡಷಿ. ಧನುರ್ವಿದ್ಯೆಯನ್ನು ಕಲಿತು ಪಕ್ಷಿಗಳಿಗೆ ಪ್ರಯೋಗಿಸಿದಾಗ ಗೆಳತಿಯರು ನೀತಿ ಹೇಳುವರು. ಚಂಡಕೀರ್ತಿ ಮಾವನನ್ನು ನೋಡಿ ನಕ್ಕು ಮೀಸೆ ಏನಾಯಿತೆಂದು ಕೇಳುವಳು. ತುರಿಕೆ ಆದುದರಿಂದ ತೆಗೆದೆ ಎಂದು ಹೇಳುವನು. ಕಲಿತ ವಿದ್ಯೆಯ ಪ್ರದರ್ಶನಕ್ಕಾಗಿ ಅವಕಾಶ ಇಲ್ಲ ಎಂದು ಚಂದ್ರಿಕೆ ಹೇಳಲು ನಾನು ಅವಕಾಶ ಕೊಡಿಸುವೆ ಎಂದು ಹೇಳುವನು. ಕಾಡಿನಲ್ಲಿರುವ ಕೊಬ್ಬಿದ ಕುಡಿಯರ ಕುಲದ ಹುಡುಗರಿಗೆ ಬಡಿಯಲು ಸಲಹೆ. ಬೇಟೆಯ ನೆಪದಲ್ಲಿ ಸಾಗಲು ಸಲಹೆ.
21. ಚಂದ್ರಿಕೆಯು ಪಿತನಲ್ಲಿ ಬೇಟೆಗೆ ಅಪ್ಪಣೆ ಕೇಳುವಳು. ಮೊದಲು ಬೇಡ ಎಂದರೂ ಹಠ ಮಾಡಿದಾಗ ಸಿಂಧುಭೈರವನು ಒಪ್ಪುವನು. ಶಬರರ, ಸಖಿಯರ ಜತೆ ಮೃಗಬೇಟೆಗೆ.
22. ಚಂದ್ರಿಕೆಯಿಂದ ಮೃಗಬೇಟೆ. ಹರಿಣಕ್ಕೆ ಬಾಣ ಬಿಡಲು ಅದು ಆಶ್ರಮದ ಬಳಿ ಇದ್ದ ಉದಯನ ಬಳಿ ಸಾಗಿ ಕುಸಿಯುತ್ತದೆ. ಅದರ ಗಾಯಕ್ಕೆ ಔಷಧ ನೀಡಿ ರಕ್ಷಿಸುವನು. ಚಂದ್ರಿಕೆ ಮಾಲತಿ ಎಂಬ ಗೆಳತಿಯನ್ನು ಕಳುಹಿಸಿ ಜಿಂಕೆಯನ್ನು ಕೇಳಲು ಉದಯನು ಕೊಡಲಾರೆ ಎನ್ನುವನು. ಚಂದ್ರಿಕೆ ಬಂದು ಕೇಳಿದರೂ ಉದಯನು ಕೊಡಲಾರೆ ಎಂದು ಆಕೆಗೆ ನೀತಿ ಹೇಳುವನು. ಯುದ್ಧ ಮಾಡಲು ಬಿಲ್ಲನ್ನು ಎತ್ತುವಳು. ಉದಯನು ಕಲ್ಲನ್ನು ಎಸೆದು ಆಕೆಯ ಬಿಲ್ಲನ್ನು ಬೀಳಿಸುವನು. ಚಂದ್ರಿಕೆಯು ಅಪಮಾನಗೊಂಡು ತೆರಳುವಳು.
23. ಚಂದ್ರಿಕೆಯು ಅಪಮಾನದಿಂದ ಸೇಡು ತೀರಿಸಲು ನಿರ್ಧರಿಸಿದಳು. ಚಂಡಕೀರ್ತಿಯಿಂದ ವಿಚಾರಣೆ. ರೂಪದಿಂದ ಉದಯನನ್ನು ಮರುಳುಗೊಳಿಸಿ ಕರೆತಂದು ಬಂಧಿಸಲು ಸಲಹೆ. ಚಂದ್ರಿಕೆ ಸಖಿಯನ್ನು ಕೂಡಿ ಉದಯಾದಿತ್ಯನನ್ನು ಮರುಳುಗೊಳಿಸಲು ತೆರಳುವಳು.
24. ಚಿಂತಾಮಣಿಯು ದೇವರಸನನ್ನು ಹುಡುಕಲು ತೆರಳಿ ಸೋತು ಹಿಂತಿರುಗಿದನು.

25. ಕಾಡಿನ ಹನುಮದಾಸನ ಆಶ್ರಮದ ಬಳಿ ಉದಯಾದಿತ್ಯನು ಚಂದ್ರನಾಥನೂ ಕುಡಿಯರ ತರುಣರನ್ನು ಕರೆದು ಹನುಮಂತ ದೇವರನ್ನು ಸ್ಮರಿಸುತ್ತಾ ನಲಿಯುವರು.
26. ಚಂದ್ರಿಕೆ ಮತ್ತು ಸಖಿಯರ ವನದ ವರ್ಣನೆ. ನೀರಾಟ, ಮಡಿವಸನ ಉಟ್ಟು ಉದಯಾದಿತ್ಯನು ಬರುವನೋ ಎಂದು ಕಾಯುವಳು. ಉದಯನು ಚಂದ್ರಿಕೆಯನ್ನು ನೋಡುವನು. ಯುದ್ಧ ಮಾಡದೆ ಇಂದು ನಾರಿಯರ ಜತೆ ಏಕೆ ಬಂದಳೆಂದು ಸಂಶಯ ತಾಳುವನು. ಯುದ್ಧದಲ್ಲಿ ಗೆಲ್ಲಲಾಗದೆ, ತನ್ನ ರೂಪದಿಂದ, ಕಣ್ಣಲ್ಲಿ ಕಣ್ಣಿರಿಸಿ ಗೆಲ್ಲಲು ಬಂದಿರಬಹುದೆಂದು ಗೆಳೆಯ ಚಂದ್ರನಾಥನಲ್ಲಿ ಹೇಳುವನು. ಕುಡಿಯರಿಗೂ ಅರಸು ಮಕ್ಕಳಿಗೂ ಸಂಬಂಧ ಆಗದೆಂದು ಹಂಗಿಸುವನು. ಕುಲಕ್ಕಿಂತ ಯೋಗ್ಯತೆಯೇ ಶ್ರೇಷ್ಠ. ರಾಜಕುಮಾರನಂತೆ ರೂಪ, ಪರಾಕ್ರಮ ಇದೆ ಎಂದು ಚಂದ್ರಿಕೆಯು ತನ್ನ ಸಖಿ ಮಾಲತಿಯೊಡನೆ, ಉದಯನಿಗೆ ಕೇಳಿಸುವಂತೆ ಹೇಳುವಳು, ಹಿರಿಯರಿಗೆ ಹೇಳದೆ, ಹುಡುಗಿಯೊಬ್ಬಳು ಹೀಗೆ ಕೇಳುವುದು ಸರಿಯಲ್ಲ ಎಂದು ಉದಯನು ಹೇಳುವನು. ಹಿರಿಯರನ್ನು ಕಳುಹಿಸಿ ನನ್ನ ಪಿತನಲ್ಲಿ ಕೇಳಿ ವರಿಸೆಂದು ಹೇಳಿ ತನ್ನ ಹರಳಿನ ಉಂಗುರವನ್ನು ಚಂದ್ರಿಕೆಯು ನೀಡುವಳು.
27. ಕರಿಯನು ಉದಯಾದಿತ್ಯನಿಗೆ ಹೆಣ್ಣು ಕೇಳಲು ಮಂದಾರದ ಅರಮನೆಗೆ. ಅರಸನಿಗೆ ಕಾಣಿಕೆ. ಪರಿಚಯ ಹೇಳಿ ಚಂದ್ರಿಕೆಯನ್ನು ಉದಯಾದಿತ್ಯನಿಗೆ ಕೊಡಲು ಹೇಳುವನು. ಆಕೆ ನೀಡಿದ ಉಂಗುರವನ್ನೂ ತೋರಿಸುವನು. ಮಗಳನ್ನು ಕರೆದು ವಿಚಾರಣೆ, ವನ ವಿಹಾರ ಮಾಡುವಾಗ ಬೆರಳಿನಿಂದ ಜಾರಿಬಿದ್ದ ಉಂಗುರವನ್ನು ತಂದು ಅವರು ಸುಳ್ಳು ಹೇಳುತ್ತಿದ್ದಾರೆ ಎಂದು ಹೇಳುವಳು. ಕರಿಯ ಮತ್ತು ಕುಡಿಯರಿಗೆ ಇಪ್ಪತ್ತು ಛಡಿಯೇಟಿನ ಶಿಕ್ಷೆ ನೀಡುವನು. ಚಾರಕರಿಂದ ಛಡಿಯೇಟು. ಕರಿಯ ಮನೆಗೆ ಬರುವನು.
28. ಚಂದ್ರಿಕೆಯು ವಂಚಿಸಿದಳೆಂದು ಉದಯಾದಿತ್ಯನಿಗೆ ಸಿಟ್ಟು. ಸಾಕಿದ ನಿಮಗೆ ನನ್ನಿಂದಾಗಿ ಛಡಿಯೇಟು ಸಿಕ್ಕಿತು ಎಂದು ದುಃಖಿಸಿದಾಗ ಕರಿಯನು ಸಂತೈಸುವನು. ಉದಯಾದಿತ್ಯ, ಚಂದ್ರನಾಥ, ಕುಡಿಯರು ಸಿಂಧುಭೈರವನ ಅರಮನೆಗೆ ಸಾಗಿ ದಿಕ್ಕಾರ ಕೂಗುವರು. ಸಿಂಧುಭೈರವನ ವಿಚಾರಣೆ. ಚಂದ್ರಿಕೆಯು ಉದಯಾದಿತ್ಯನಿಗೆ ಸೋಲುವಳು. ಚಂಡಕೀರ್ತಿಯ ಮಾತಿಗಾಗಿ ನಾನು ಸುಳ್ಳು ಹೇಳಿದೆನು. ನಾನು ತಪ್ಪು ಮಾಡಿದೆ. ಉದಯನನ್ನೇ ಮದುವೆಯಾಗುವೆ ಎನ್ನುವಳು. ಉದಯಾದಿತ್ಯನ ನಿರಾಕರಣೆ. ಅವಳಿಗೂ ಛಡಿಯೇಟು ಕೊಡಿಸಬೇಕೆಂದು ಸಿಂಧುಭೈರವನು ಹೇಳಿದಾಗ ಬೇಡವೆಂದು ಉದಯಾದಿತ್ಯನು ಹೇಳುವನು. ಎಲ್ಲರೂ ಆಶ್ರಮದತ್ತ ತೆರಳುವಾಗ ದೇವರಸನು ಊರೂರು ತಿರುಗುತ್ತಾ ಭಿಕ್ಷುಕನಂತೆ ಬರುವನು. ಅವನಿಗೆ ಆಹಾರ, ಬಟ್ಟೆಗಳನ್ನು ನೀಡಿ ಉದಯಾದಿತ್ಯನು ಪರಿಚಯ ಕೇಳುವನು. ತನ್ನ ಅಂಗಿಯನ್ನೇ ನೀಡಲು ತೆಗೆದಾಗ ಉದಯನ ಬಲಭುಜದ ಓಂಕಾರ ಚಿಹ್ನೆಯು ದೇವರಸನಿಗೆ ಕಾಣುವುದು. ಪರಸ್ಪರ ಪರಿಚಯವಾಗಿ ದೇವರಸನು ಮಕ್ಕಳೊಡನೆ ಹನುಮದಾಸನ ಆಶ್ರಮದಲ್ಲಿ ವಾಸಿಸುವನು.
29. ಚಂಡಕೀರ್ತಿಯು ಮಂದಾರಪುರದ ಅಧಿಕಾರ ಪಡೆಯಲು ತಂತ್ರ ಹೂಡುವನು. ಚಿಂತಾಮಣಿಯೊಡನೆ ಚಂದನಾಪುರಕ್ಕೆ ತೆರಳುವನು.
30. ಚಂದನಾಪುರದಲ್ಲಿರುವ ಶಾಂತಗುಪ್ತ ಅರಸನಿಗೆ ಚಂಡಕೀರ್ತಿಯ ದುರ್ಭೋದನೆ. ಸಿಂಧುಭೈರವನನ್ನು ಸೋಲಿಸಿದರೆ ಅವನ ಮಗಳೂ ನನ್ನ ಸೊಸೆಯೂ ಆದ ಚಂದ್ರಿಕೆಯನ್ನು ಮದುವೆ ಮಾಡಿಕೊಡುವೆ. ಹಿರಿಯ ರಾಣಿಯಲ್ಲಿ ಮಕ್ಕಳಾಗದಿದ್ದರೂ, ಚಂದ್ರಿಕೆಯಲ್ಲಿ ಸಂತಾನ ಭಾಗ್ಯ ಸಿದ್ಧಿಸಬಹುದೆಂದು ಹೇಳಿ ಕೆರಳಿಸುವನು. ದೇವರಸನ

ಮಗನನ್ನು ನಾನು ಕೊಲ್ಲಿಸಿದ್ದೇನೆಂದು ಹೇಳುವನು. ಶಾಂತಗುಪ್ತನನ್ನು ಒಪ್ಪಿಸುವನು. ಸೇನಾ ಸಿದ್ಧತೆ. ದಳಪತಿ ತಿಮ್ಮಪನೂ ಬರುವನು.

31. ಚಂಡಕೀರ್ತಿಯ ಧೂರ್ತತನಕೆ ಚಿಂತಾಮಣಿಯ ಮರುಕ. ಅವನ ಯೋಜನೆಯನ್ನು ವಿಫಲಗೊಳಿಸಲು ಉಪಾಯ ಮಾಡುವನು.

32. ಸಿಂಧುಭೈರವನ ಬಳಿಗೆ ಚಿಂತಾಮಣಿ. ಚಂಡಕೀರ್ತಿಯ ವಂಚನೆಯನ್ನು ವಿವರಿಸಿ ಹೇಳುವನು. ಭಾವ ಅಳಿಯಂದಿರನ್ನು ಸಹಾಯಕ್ಕಾಗಿ ಕರೆಸಲು ಸಲಹೆ. ಅವರೆಲ್ಲಿದ್ದಾರೆಂದು ತಿಳಿಯೆ ಎಂದು ಸಿಂಧುಭೈರವನು ಹೇಳುವನು. ಆ ವಿಚಾರವನ್ನು ನಾನು ಮತ್ತೆ ಹೇಳುವೆ. ಪದ್ಮಾವತಿಯ ಪುತ್ರರು ನಿನ್ನ ಅಳಿಯಂದಿರು. ಬದುಕಿದ್ದಾರೆ. ಪರಾಕ್ರಮಿಗಳಾಗಿರುವ ಅವರನ್ನು ಕರೆಸೆಂದು ಹೇಳಲು ಸಿಂಧುಭೈರವನಿಗೂ, ಪದ್ಮಾವತಿಗೂ ಸಂತಸ. ಸಿಂಧುಭೈರವನು ಕಾಡಿಗೆ ಹೋಗಿ ಬಾವ ದೇವರಸನನ್ನೂ ಅವನ ಮಕ್ಕಳನ್ನೂ ಕರೆತರುವನು. ಭುಜದ ಓಂಕಾರವನ್ನು ನೋಡಿ ಉದಯನು ತನ್ನ ಮಗನೆಂದು ಪದ್ಮಾವತಿಯು ತಿಳಿದು ಸಂತಸಗೊಳ್ಳುವಳು. ಚಿಂತಾಮಣಿ ಬಂದು ಚಂಡಕೀರ್ತಿಗೂ, ಶಾಂತಗುಪ್ತನಿಗೂ ನಡೆದ ಒಪ್ಪಂದದ ಬಗ್ಗೆ ಹೇಳುವನು. ಉದಯಾದಿತ್ಯನಿಂದ ಧೈರ್ಯ. ಚಂಡಕೀರ್ತಿಯನ್ನು ಶಿಕ್ಷಿಸಲು ತೀರ್ಮಾನ. ಶಾಂತಗುಪ್ತನನ್ನು ಎದುರಿಸಲು ಎಲ್ಲರೂ ಮಂದಾರಪುರಕೆ ತೆರಳುವರು.

33. ಶಾಂತಗುಪ್ತನ ಸೇನೆ ಮಂದಾರಪುರಕ್ಕೆ ದಾಳಿ ಮಾಡಿದಾಗ ಎದುರಿಸುವರು. ಚಂದ್ರನಾಥನೊಡನೆ ದಳಪತಿ ತಿಮ್ಮಪ್ಪನ ಯುದ್ಧ, ತಿಮ್ಮಪ್ಪನ ಮರಣ. ಶಾಂತಗುಪ್ತನೊಡನೆ ಚಂದ್ರನಾಥನ ಯುದ್ಧ. ಶಾಂತಗುಪ್ತನ ಸೋಲು. ಶರಣಾಗತಿ. ಪುತ್ರಿ ಕಾಂತಿಯನ್ನು ಚಂದ್ರನಾಥನಿಗೆ ಕೊಡುವೆ ಎಂದು ಹೇಳುವನು. ಚಂಡಕೀರ್ತಿಯೊಡನೆ ಉದಯಾತ್ಯನ ಯುದ್ಧ. ಚಂಡಕೀರ್ತಿಯು ಸೋಲುವನು. ಸೆರೆಹಿಡಿದು ಅರಮನೆಗೆ ಎಳೆದುಕೊಂಡು ಹೋಗಿ ಮಾವನಾದ ಸಿಂಧುಭೈರವನಿಗೆ ಒಪ್ಪಿಸುವನು. ಉದಯನನ್ನು ಅಪ್ಪಿ ಅಭಿನಂದಿಸುವನು. ಓಂಕಾರ ಚಿಹ್ನೆ ಭುಜದಲ್ಲಿ ಕಂಡಾಗ ನೀನು ನನ್ನ ಅಳಿಯನೆಂದು ತಿಳಿದೆ. ಅರಿಯದೆ ಮಾಡಿದ ತಪ್ಪಿಗಾಗಿ ಕ್ಷಮಿಸು ಎಂದು ಹೇಳಿ, ಚಂಡಕೀರ್ತಿಯನ್ನು ಜರೆದು ನನ್ನೆದುರಿಂದ ನಡೆ ಎನ್ನುವನು. ಚಂದ್ರಿಕೆಯೂ ಚಂಡಕೀರ್ತಿಯನ್ನು ಜರೆಯುವಳು. ಚಂಡಕೀರ್ತಿಗೆ ಪಶ್ಚಾತ್ತಾಪ. ಎದೆಗೆ ಇರಿದುಕೊಂಡು ಸಾಯುವನು. ಶಾಂತಗುಪ್ತನ ಪುತ್ರಿ ಕಾಂತಿಯನ್ನು ಚಂದ್ರನಾಥನಿಗೂ, ಸಿಂಧುಭೈರವನ ಪುತ್ರಿ ಚಂದ್ರಿಕೆಯನ್ನು ಉದಯಾದಿತ್ಯನಿಗೂ ಕೊಟ್ಟು ಮದುವೆ ಮಾಡುವರು.

ಪಾತ್ರ ಪರಿಚಯ :

ಸಿಂಧುಭೈರವ, ಚಾರಕ, ಚಂಡಕೀರ್ತಿ, ಕುಸುಮಗಂಧಿ, ಚಿಂತಾಮಣಿ, ಚೆನ್ನಿ, ದೇವರಸ, ದೈವಜ್ಞರು, ವೆಂಕಮ್ಮ, ಕರಿಯ, ಹನುಮದಾಸ, ಶಾಂತಗುಪ್ತ, ಚಾರಕ, ಪದ್ಮಾವತಿ, ಚಂದ್ರನಾಥ, ಉದಯಾದಿತ್ಯ, ಗುಪ್ತಚಾರಕ, ಚಂದ್ರಿಕೆ, ಸಖಿಯರು, ದಳಪತಿ ತಿಮ್ಮಪ್ಪ.

ಕೇವಲ ದೃಶ್ಯಕ್ಕಾಗಿ :

ಭಾಮಿನಿ ನೃತ್ಯಗಾತಿ, ಯಕ್ಷಗಾನ ಕಲಾವಿದರು, ಕುಡಿಯ ತರುಣರು, ಕಾರ್ಯಕ್ರಮ ನಿರೂಪಕ, ಸಖಿಯರು, ಭಡಿಯೇಟಿನ ದೂತ, ಬೇಟೆಗಾರರು, ಹರಿಣ, ಕಾಂತಿಮತಿ

॥ ಶ್ರೀ ಗಣಾಧಿಪತಯೇ ನಮಃ ॥ ॥ ಶ್ರೀ ಗುರುಭ್ಯೋನಮಃ ॥

॥ಶಾರ್ದೂಲ ವಿಕ್ರಿಡಿತ ವೃತ್ತ॥

ವಂದೇ ವಂದಿತ ಪಾದ ಪಂಕಜ ಯುಗಾಂ ದೇವೈಸ್ಸದಾ ಶಾಂಭವೀಂ । ಚಂದ್ರಾಭಾಂ ಗಿರಿನಂದಿನೀಂ ಗುಣಖನೀಂ ಕುಂದಪ್ರಭಾದಂತಿನೀಂ ॥ ಸೌಂದರ್ಯಾತಿಶಯೇನ ಶೋಭಿತವಪುಃ ಸೌದಾಮಿನೀಂ ಕಾಮಿನೀಂ । ತಾಂದೇವೀಂ ಮನಸಾಗಣೇಶ ಜನನೀಂ ಸಂಭಾವಯೇ ಸರ್ವದಾ ॥1॥

॥ರಾಗ॥ ನಾಟಿ॥ ಝಂಪೆ॥

ತುಹಿನಾದ್ರಿಜೆಯ ತನಯ। ಸಹನಗುಣಗಣ ಹೃದಯ। ಇಹುದು ಮಹಿಮಾತಿಶಯ। ಮಹ ವಿಘ್ನರಾಯ ॥ಪ॥ ಕರುಣಾಂಬುನಿಧಿ ನೀನು। ಶರಣರನು ಪೊರೆವವನು। ನಿರತಮೋದಕಪ್ರಿಯನು। ಪರಮ ಸನ್ನುತನು॥ ಚರಣ ಸೇವಕನಾನು। ಸಿರಿಪಾದ ನಂಬಿಹೆನು। ಬರೆಸು ಕಾವ್ಯಗಳನ್ನು। ಮೆರೆಸು ಲೀಲೆಯನು ॥1॥ ಚಂಚಲನು ನಾಮನದಿ। ವಂಚನೆಯದಿಲ್ಲ ಹೃದಿ। ಕಿಂಚಿದಿಹ ಮಮ ಬುದ್ಧಿ ಮಿಂಚೆ ತವದಯದಿ॥ ಸಂಚಯಿಸಿ ಮಸ್ತಕದಿ। ಹೊಂಚಿರುವ ಕಥೆ ಸಿದ್ಧಿ। ಯಿಂ ಚೆಲುವು ಗೊಳಿಸು ವಿಧಿ। ವಂಚಿಸದ ತೆರದಿ ॥2॥ ಸಕಲ ಲೋಕವಂದ್ಯನು।ವಿಕಲದನುಜ ಭೇದನು। ಭಕುತ ಜನ ಸುಸೇವ್ಯನು। ಲಕುಮೀಶ ಮಿತ್ರನು॥ ಮುಕುತಿಯೀಯುವಾತನು। ವಿಕೃತಿಗಳನು ಕಳೆವನು। ಸುಕೃತಿಗಳನು ಕಾವನು। ಪ್ರಕೃತಿಗೆ ಪೂಜ್ಯನು ॥3॥ ಮಧುಪುರದಿ ನೆಲೆಸಿರುವೆ। ಮದನಾಂತಕನ ಮಗುವೆ। ಮಧುರರದಪ್ಪವ ನೀವೆ। ಮೊದಲು ಪೂಜಿಸುವೆ॥ ಉದಯಾಸ್ತಮಾನ ನಿನ। ಗಿದೊ ಯೆನ್ನ ಹರಕೆಯನ। ಮುದದಿ ಬಂದೀವೆ ಮನ। ಮುದಗೊಳಿಸು ಎನ್ನ ॥4॥ ಜಯ ಜಯತು ಜಯ ಗಣಪ। ಜಯ ಜಯತು ಭಕ್ತರಪ। ಜಯವಕಳೆಯುತ ಕೃಪಾ। ಶ್ರಯವ ನೀಡಪ್ಪ॥ ಜಯ ಜಯತು ವಿಘ್ನೇಶ। ಜಯತು ಮಮ ಹೃದಿವಾಸ। ಜಯ ಮನೋಹರ ಹಾಸ ಜಯ ಜಯ ಗಣೇಶ ॥5॥

॥ಭಾಮಿನಿ॥

ನಂಬುತಲಿ ಹೇರಂಬನಡಿಗಳ। ಇಂಬ ಬೇಡುತ ಜಗದ ಪಿತತರ।ಅಂಬುಜೋದ್ಧವ ವಾಣಿ ಸಿರಿ ಹರಿ ಪಾದ ಪಂಕಜವ॥ ಕುಂಭಿನಿಗೆ ತಾನಾದಿಕವಿಯೆಂ। ದೆಂಬ ಬಿರುದಿನ ಮುನಿಪಗೊಂದಿಸಿ। ಸಂಭ್ರಮದೊಳಾವ್ಯಾಸರನು ನೆನೆದೆಂಬೆನೀ ಕಥೆಯ॥

॥ರಾಗ॥ ನಾಟಿ॥ ಝಂಪೆ॥

ಮಂದಾರ ಪುರವನ್ನು। ಸಿಂಧು ಭೈರವ ತಾನು। ಹೊಂದಿ ಸದ್ಧರ್ಮವನು। ಅಂದಾಳುತಿದ್ದ॥ ಮಂದಗಮನೆಯು ಕುಸುಮ। ಗಂಧಿ ಅರಸಿಯು ಅಸಮ। ಸುಂದರಿಯು ಶಚಿಗೆ ಸಮ। ವೆಂದರದು ಬದ್ಧ ॥ 1 ॥

॥ರಾಗ॥ ಸೌರಾಷ್ಟ್ರ॥ ತ್ರಿವುಡೆ॥

ಅರಸನೋಲಗ ಕೊಡುತ ಲೊಂದಿನ। ನೆರೆದ ಪುರಜನರೊಡನೆ ನುಡಿದನು। ಧರೆಯೊಳೆನ್ನಾಳ್ವಿಕೆಯ ಕೊರತೆಗ।ಳೊರೆವುದೆನಲು ॥1॥

॥ರಾಗ॥ ಕಾಪಿ॥ ಅಷ್ಟ॥

ನುಡಿದನೋರುವ ವೃದ್ಧ ಪ್ರಜೆಯು॥ಹೇ॥ ಪೊಡವಿಪಾಲಕ ಕೇಳು ನಿನ್ನಂಥ ದೊರೆಯು॥ ನಡೆವ ಹಾದಿಯು ಎಮಗೆಲ್ಲ ಮಾದರಿಯು॥ ಧರ್ಮ॥ ಬಿಡದೆ ಸಾಗುತಲಿದೆ ಚೆಲುವಿನಾಳ್ವಿಕೆಯು ॥1॥

॥ರಾಗ॥ ಸೌರಾಷ್ಟ್ರ॥ ತ್ರಿವುಡೆ॥

ರಾಜನಂತೆಯೆ ಪ್ರಜೆಗಳೆಂಬುದು। ಮಾಜದಾನುಡಿ, ನಿಜವದಾದರೆ। ಸಾಜವಾಗಿಯೆ ಪೇಳಿ ಕೊರತೆಯು। ರಾಜಿಸಿರದೆ ॥1॥

॥ರಾಗ॥ ಕಾಪಿ॥ ಅಷ್ಟ॥

ಆಳುವಿಕೆ ಯೊಳೊಂದು ದೋಷವ ಕಾಣೆ॥ ಭೂ॥ ಪಾಲಗೆ ಸಂತತಿಯಾಗದುದನ್ನೆ॥ ಪೇಳುವರೆಲ್ಲರು ತಮ್ಮ ತಮ್ಮೊಳಗೆ ॥ಧಿಟ॥ ಕೇಳುವೆನಿದಕೀಗ ಪರಿಹಾರ ಹೇಗೆ ॥1॥

॥ರಾಗ॥ ಸೌರಾಷ್ಟ್ರ॥ ತ್ರಿವುಡೆ॥

ಎನಲು ನುಡಿದನು ಎನ್ನ ಸಹಜೆಯು। ವನಿತೆ ಪದುಮಾವತಿಯು ಗುಣವತಿ। ಘನದೊಳಾವರ ಚಂದನಾಪುರ। ಜನಪಗಿತ್ತು ॥1॥ ವಿರಚಿಸಿಹೆ ಮದುವೆಯನು ವಿಭವದಿ। ಪರಮ ವಿಕ್ರಮಿ ದೇವರಸನಿಗೆ। ಇರುವ ನೋರುವ ಮಗನು ಮುಂದಕೆ। ಅರಸಿಯಲ್ಲಿ ॥2॥ ತನಯ ಜನಿಸಿದರೀವೆ ದತ್ತಕೆ। ಎನುತ ಭಾಷೆಯ ನಿತ್ತರಿಬ್ಬರು। ಅನುಜೆ ಗರ್ಭಿಣಿ ಎಂಬ ವಾರ್ತೆಯು। ಎನಗೆ ದೊರೆತು ॥3॥ ಪ್ರಾರ್ಥಿಸುತ್ತಿಹೆ ದೇವರೊಳು ಚೆಲು। ಪುತ್ರನುದಿಸಲಿ ಸಹಜೆಗೆನುತಲಿ। ನಿತ್ಯ ವಾಕುಲ ದೇವನನ್ನತಿ। ಭಕ್ತಿಯಿಂದ ॥4॥

॥ಕಂದ॥

ಇನಿತಾ ಭೈರವ ಭೂಪಂ। ಜನಾದರವ ಕಂಡು ತೋಷವಂ ತಾಳುತಿರಲ್॥ ಅನಿತರೊಳೋರುವ ದೂತಂ। ವಿನಯದಿ ಮಣಿಯುತ್ತಲಿಂ ತೊರೆದನಾನೃಪಗಂ ॥1॥

॥ರಾಗ॥ಮುಖಾರಿ॥ ಏಕ॥

ವಂದಿಪೆ ನಿಮ್ಮಯ ಪದಗಳಿಗೊಡೆಯ॥ ಸಿಂಧು ಭೈರವರಾಯ॥ ವಂದಿಪೆ ನಿಮ್ಮಯ ಪದಗಳಿಗೊಡೆಯ ॥ಪ॥ ಬಂದಿಹೆ ತಂಗಿಯ । ಚಂದನ ಪುರದಿಂ। ತಂದಿಹೆ ಒಸಗೆಯ। ನೊಂದನು ನಿಮಗಿಂ। ದಂದದ ಅಳಿಯನು। ಬಂದಿಹ ಹೊಸಬಂ। ಇಂದಿಗೆ ದಿವಸವು। ಸಂದುದು ನಾಲ್ಕು ॥1॥ ಹನ್ನೆರಡನೆ ದಿನದಲಿ ನಾಮಕರಣ॥ ತೊಟ್ಟಿಲ ಶಾಸ್ತ್ರ॥ ವನ್ನಂದೆ ಇರಿಸಿಕೊಂಡಿರುವದು ಚೆನ್ನ॥ ಸನ್ನುತ ಭೂಪತಿ। ಮುನ್ನವೆ ಕರೆಯಲು। ಎನ್ನಟ್ಟಿದ ಸಂ। ಪನ್ನನೆಮ್ಮರಸನು। ಬಿನ್ನಹ ಮಾಳ್ಪೆನು। ಬನ್ನಿರಿ ಸಕಲರು। ಚೆನ್ನಗೊಳಿಸುತಲಿ। ಮನ್ನಣೆ ಪಡೆವುದು ॥2॥

॥ಭಾಮಿನಿ॥

ಕೇಳಿ ದೂತನ ನುಡಿಯ ಸಂತಸ। ತಾಳಿಬಹು, ಬಹುಮಾನವಿತ್ತನು। ಪೇಳಿದನು ಸತಿಯನ್ನು ಕರೆದಾ ವಾರ್ತೆಯನು ಮುದದಿ॥ ನಾಳೆಯೇ ಪಯಣವನು ಬೆಳಗಿನ। ವೇಳೆಯಲಿ ಮುಂದರಿಪುದೆನೆಗುಣ। ಶೀಲೆ ತೋಷದೊಳೊಪ್ಪಿದಳು ತಾನಧಿಕ ತವಕದಲಿ ॥1॥

॥ರಾಗ॥ ಕಾಂಬೋಧಿ ॥ ಝಂಪೆ॥

ಕೇತಕೀ ಪುರದರಸ। ಕೇತುಮಲ್ಲನ ಸಹಜ। ಧೂರ್ತ ಬಲುವಂಚಕನು ತಾನು॥ ಸ್ವಾರ್ಥಿ ದುಷ್ಟನು ಚಂಡಕೀರ್ತಿ ನಾಮಕನಿಹನು। ಓ ತಕ್ಕನಾಶ್ರಯವನವನು ॥1॥ ಬಂದು ಸೇರಿದ ತಿದ್ದ। ಲೆಂದು ಕಳುಹಲಿಕಣ್ಣ। ಮಂದಮತಿಗನುಕೂಲವಾಯ್ತು॥ ಒಂದನರಿಯಳು ಕುಸುಮ। ಗಂಧಿ ಮುಗ್ಧಳು ತಮ್ಮನೆಂದು ಮಮಕಾರವತಿಯಾಯ್ತು ॥2॥ ಅಂದು ಸಭೆಯಲಿ ಭಾವ। ನೆಂದ ವಾರ್ತೆಯ ಕೇಳಿ। ನೊಂದ ದತ್ತಕೆ ತರುವ ವಿಷಯ ಇಂದು ನಾನಿರಲೇಕೆ। ತಂದಪರುಪರಸುತರ।ನೆಂದು ಯೋಚಿಸುತಕ್ಕನೊಡನೆ ॥3॥

॥ರಾಗ॥ ಕಾಫಿ॥ ಅಷ್ಟ॥

ನುಡಿದನೇಕಾಂತದಿ ಕರೆದು॥ ತನ್ನ॥ ಒಡ ಹುಟ್ಟಿದಳ ಮಮತೆ ಯ ಆಳ ತಿಳಿದು॥ ಪೊಡವಿಪಾಲಕ ನೆಂದುದನು ಕೇಳಿದೆಯ ॥ದತ್ತು॥ ಪಡೆವನು ತಂಗಿಯ ಮಗನನಕ್ಕಯ್ಯ ॥1॥ ಲೇಸಾಯ್ತು ಬಹು ಒಳ್ಳೆ ಕಾರ್ಯ॥ನಮ॥ ಗೀಸು ಕಾಲವು ಮಕ್ಕಳಿರದಾಗೆ ರಾಯ॥ ಆಸೆಯಿಂದಲಿ ತಂಗಿಯ ಮಗನನ್ನು ॥ತರೆ॥ ಪೋಷಿಪೆ ಮಮತೆಯಿಂದಲಿ ಶಿಶುವನ್ನು ॥2॥

॥ರಾಗ॥ ಸಾಂಗತ್ಯ॥ ರೂಪಕ॥

ಪರರ ಮಕ್ಕಳ ತಂ।ದರೆ ಸುಖವೇನು ತೊಂ।ದರೆ ಬಹುದವ ಬೆಳೆಯಲು ನೀನು॥ ಪರಕೀಯಳಾಗೆಯ। ಅರಸಾಗಲಾತನು। ಅರಿ ತೊರೆದೆನು ಮಮ ಮಗನಿಹನು ॥1॥ ಬಲು ಪೆದ್ದು ತವಸುತ। ತಿಳಿಯ ಮಾತಾಡಲು। ಕಳೆದುದಿಲ್ಲವೆ ವರ್ಷ ಹತ್ತು॥ ತಿಳಿದು ಅಂತವನನು। ಅಳಿಯನೆನುತ ನಾನು। ಒಲವಿಂದರಸಗೆ ಪೇಳೆನು ॥2॥ ಸಂದುದೆ ಪ್ರಾಯವ।ದಿಂದಷ್ಟು ನಿನಗೆ ವ। ಸುಂದರಾಧಿಪನಿಂದ ಮುಂದೆ॥ ಕಂದನು ಜನಿಸಿದರೆ। ತೊಂದರೆ ಬಹುದದ।ರಿಂದೊರೆದೆನು ಜಾಗ್ರತೆಗೆಂದೆ ॥3॥ ನಿನ್ನ ನಡತೆಯನ್ನು। ಮುನ್ನ ತಿದ್ದಲಿಕೆನು। ತಣ್ಣ ಕಳುಹಿದನೆನ್ನ ಬಳಿಗೆ॥ ಇನ್ನು ಸರಿಯಪ್ಪೆ ನೀ। ನೆನ್ನುತ ಬಗೆದರೆ। ಎನ್ನುವೆ ಉಪದೇಶವೆನಗೆ ॥4॥

॥ರಾಗ॥ ಸೌರಾಷ್ಟ॥ ತ್ರಿವುಡೆ॥

ಎನುತ ತಮ್ಮನ ಗದರಿ ನಡೆದಳು। ವನಿತೆಯಾ ವರಕುಸುಮಗಂಧಿನಿ। ಮನದಿ ಮಸಗುತ ಚಂಡಕೀರ್ತಿಯು। ಎನುವನಿಂತು ॥1॥ ಎನಿತು ದತ್ತಕೆ ತಹರು ನೋಳ್ಪೆನು। ಜನಪನಳಿಯನು ಉಳಿದರಲ್ಲವೆ। ವಿನಯದಿಂ ಸಾಧಿಸಲು ಮಿತ್ರನ। ಮನೆಗೆ ನಡೆದು ॥2॥

॥ರಾಗ॥ ಬೇಗಡೆ॥ ಏಕ॥

ಕೇಳು ಚಿಂತಾಮಣಿಯೆ ಸಂಗತಿಯ॥ ಪ್ರಾಣ ಸ್ನೇಹಿತ॥ ಬಾಲ್ಯದಿಂದಲೆ ನೀನು ಎನಗಯ್ಯ॥ ದಾಳ ನಿಪುಣನು ಶಕುನಿ ಸಹಿತಲಿ। ಸೋಲುವನು ತವಬುದ್ಧಿ ಚುರುಕಿಗೆ। ಪೇಳುವೆನು ಮಮ ಮನದ ವ್ಯಥೆಯನು। ಆಲಿಸುತನೀ ದಾರಿತೋರ್ವೆಯ ॥1॥

॥ರಾಗ॥ ಕೇದಾರಗೌಳ॥ ಅಷ್ಟ॥

ಯುಕುತಿಗಳಿಗೆ ನಾನು। ಶಕುನಿಗೆ ಸಮವೇನು। ಅಕಳಂಕನಲ್ಲ ನೀನು॥ ಸುಖ ಸಾಧನೆಯಲಿ। ಶಕುತನೆ ಸರಿತವ। ವಿಕಟ ವತಿಗೆ ಹೋಗದೇನು॥

॥ರಾಗ॥ ಬೇಗಡೆ॥ ತ್ರಿವುಡೆ॥

ಬರಿದೆ ಹಾಸ್ಯವದೇಕೆ ಕೇಳಯ್ಯ॥ ಎನ್ನಯಕ್ಕನು॥ ತರಳರಿಲ್ಲದ ಬಂಜೆ ಕಾಣಯ್ಯ॥ ಕೊರತೆಯನು ಪರಿಹರಿಸಲೋಸುಗ। ಅರಿತು ಭಾವನ ತಂಗಿಯಾ ಮಗ।ನಿರುವ ಕಿರಯನ, ಶಿಶುವದತ್ತಕೆ। ತರಲು ಯೋಚಿಸಿ ನಿರ್ಧರಿಸಿಹರು ॥1॥

॥ರಾಗ॥ ಕೇದಾರಗೌಳ॥ ಅಷ್ಟ॥

ಅದಕೆ ಚಿಂತೆಯು ಏಕೊದಗಿತು ನಿನಗೆ ಏ।ನದರಿಂದ ತೊಂದರೆಯು॥ ಸುದತಿ ನಿನ್ನಕ್ಕನ। ಮದುವೆ ಕಳೆದು ವರ್ಷ। ಹದಿನೈದೆಂಬುದ ತಿಳಿಯೊ ॥1॥

॥ರಾಗ॥ ಬೇಗಡೆ॥ ಆದಿ॥

ಎನ್ನ ಮಗನಿಹ ದತ್ತ ಕೀರುತಿಯ॥ ಕೊಡುವೆ ನಾನವ॥ ನನ್ನೆದತ್ತಕೆ ಎಂದಡಕ್ಕಯ್ಯ॥ ಎನ್ನನತಿ ಹೀನೈಸಿದಳು ಸುತ।ನನ್ನು ಪೆದ್ದನು ಎನುತ ಜರೆದಳು। ಮುನ್ನ ಭಾವನ ತಂಗಿಯಾ ಮಗ।ನನ್ನು ತರಲಡೆ ತಡೆಯ ನಿರ್ಮಿಸು ॥1॥

॥ರಾಗ॥ ಕೇದಾರಗೌಳ॥ ಅಷ್ಟ॥

ಇಷ್ಟು ಕಾರ್ಯಕೆ ನೀ।ನೆಷ್ಟು ಚಿಂತಿಪೆಯದ। ಬಿಟ್ಟು ಬಿಡಾಸುದ್ದಿಯ॥ ಗುಟ್ಟಲಿ ಸಾಗಿಸೆ।ಗಟ್ಟಿಗಳಾ ಚೆನ್ನಿ। ಕೊಟ್ಟರೆ ಹಣವನಯ್ಯ ॥1॥

॥ಭಾಮನಿ॥

ತೊಟ್ಟಿಲಿನವರ ಶಾಸ್ತ್ರ ಮುಗಿಯಲು।ಇಟ್ಟಿರುವರಾನೃತ್ಯನಾಟಕ। ಗುಟ್ಟನಿಂದಾಸಮಯದಲಿ ಮಗುವನ್ನು ಅಪಹರಿಸಿ॥ ಕೊಟ್ಟರವಳದ ನೆನ್ನ ಕೈಯೊಳು। ಥಟ್ಟನೇ ಹಿಚುಕಿಸುತ ಕೊಲ್ಲುವೆ। ಇಷ್ಟು ಕಾರ್ಯಕೆ ಚೆನ್ನಿಯನು ನುಡಿಸುವೆನು ಎನುತವಳ ॥1॥

॥ರಾಗ ಪೂರ್ವಿ॥ ಅಷ್ಟ॥

ಕರೆದೆಂದ ಚೆನ್ನಿ ಲಾಲಿಪುದು॥ ಈಗ॥ ಒರೆವೆನೊಂದೊಳಿಗವದನು ಪಾಲಿಪುದು॥ ಚುರುಕುತನದಿ ಕಾರ್ಯವನ್ನು॥ ನಾನು॥ ಅರುಹಿದಂದದಿ ಗೈದರೀವೆನು ಹೊನ್ನು॥1॥ ಎನ್ನ ಸಾಕುವವರು ನೀವು। ಪೇಳ್ದು॥ದನ್ನು ನಾಮಾಡೆನೆ ಇರಲಿಷ್ಟು ಒಲವು॥ ಚೆನ್ನಿಯ ಕಾಯುವ ಹೊಣೆಯು॥ ನಿಮ॥ಗೆನ್ನುತ ಲೊಪ್ಪಿದ ಳಾಕ್ಷಣ ಸತಿಯು॥2॥

॥ಭಾಮಿನಿ॥

ಎನಲವಳ ಕಿವಿಯಲ್ಲಿ ನುಡಿದನು।ಮನದಿ ಯೋಚಿಸಿದಂತು ಪಾಯವ। ವನಿತೆ ನಗುತಲಿ ನಡೆದಳತಿ ಸಂತೋಷದಿಂದಾಗ ॥1॥ ಜನಪದವದಾ ಚಂದನಾಪುರ।ವಿನುತ ಶೃಂಗಾರದಲಿ ಶೋಭಿಸೆ। ಘನದೊಳಾ ನೃಪ ದೇವರಸ ನೋಲಗವ ಕೊಡುತಂದು ॥1॥

॥ರಾಗ॥ ಸೌರಾಷ್ಟ್ರ॥ ತ್ರಿವುಡೆ॥

ಕರೆಸಿ ದೈವಜ್ಞರನು ನುಡಿದನು। ತರಳನಾವರ ಜಾತಕದ ಫಲ। ಅರುಹುವದು ಇದ್ದಂತೆನಲು ದೇ।ವರಸನಂದು ॥1॥ ದಿನದ ಮಾನವ ನೋಡಿ ತಾರೆಯ। ಗುಣಿಸಿ ತಿಳಿದನು ಲಗ್ನ ಸಹಿತಲಿ। ಮನದೊಳರಿಯುತ ಭವಿತ ಪೇಳಿದ। ಜನಪನೊಡನೆ॥2॥ ಮೂಲ ನಕ್ಷತ್ರದೊಳು ಉದಿಸಿದ।

ಬಾಲನಾ ಬಲ ಭುಜದಿ ಚಿಹ್ನೆಯು। ಹೋಲುವದು ಓಂಕಾರವನು ಶುಭ। ಪೇಳಲಿವಗೆ ॥3॥ ಮಗನ ಭಾಗ್ಯವು ಹಿರಿದದಾದರು। ಸಿಗದು ಸುಖ ಹೆತ್ತವರ ಪಾಲಿಗೆ। ಹಗೆಗಳಿಹರ್ಯೆ ಧಾಳಿಯಿಡುವರು। ಮುಳಿಯೆ ಪ್ರಕೃತಿ ॥4॥ ಅದಕೆ ನಾ ಪೇಳುವೆನು ಶೀಘ್ರದಿ। ಮೊದಲು ಬಾಲನ ದತ್ತಕೀವುದು। ಒದಗಿಹುದು ಶುಭಕಾಲ ನಾಳೆಯೆ। ಮುದದಿ ಶಿಶುವ ॥5॥

॥ಭಾಮಿನಿ॥

ಎನು ತೊರೆದು ದೈವಜ್ಞ ನಡೆಯಲು। ಜನಪ ಚಿಂತೆಯ ತಾಳಿಮನದಲಿ। ಚಿನುಮಯನೆ ವರ ಚಂದ್ರಹಾಸನ ಕಥೆಯ ತೆರನಾಯ್ತೆ॥ ಅನಿತರೊಳಗಾ ಸಿಂಧುಭೈರವ। ಘನದಿ ಸತಿ ಪರಿವಾರ ಸಹಿತಲಿ। ಅನುಜೆಯಣುಗನ ನಾಮಕರಣಕೆ ಎಂದು ನಡೆತರಲು॥

॥ರಾಗ॥ ಕಾಂಭೋಧಿ॥ ಝಂಪೆ॥

ಕಂಡು ದೇವರಸ ಮುಂ।ಕೊಂಡಿದಿರ್ಗೊಂಡು ಕರ। ಕೊಂಡು ಮನೆಯೊಳಗೈದುತವರ। ಖಂಡ ಶರ್ಕರೆಯ ಬಿಸಿ। ಗೊಂಡ ಹಾಲನಿತ್ತು। ಮಂಡೆ ಬಾಗಿಸುತೆಂದ ವಿವರ ॥1॥ ಲಾಲಿಪುದು ಭಾವ ಮಮ।ಬಾಲಕನ ಗ್ರಹಗತಿಯ। ಪೇಳಿದರು ದೈವಜ್ಞರೆನಗೆ॥ ಮೂಲ ನಕ್ಷತ್ರ ಫಲ। ಹಾಳೆಂದು ಹಡೆದರ್ಗೆ। ಬಾಳುವನು ಮಗನು ಸುಖದೊಳಗೆ ॥2॥ ಪರಿಹಾರ ಒರೆದರದ। ಕಿರುವ ದೊಂದೇ ದಾರಿ। ತರಳನನು ದತ್ತಕೀಯುವದು॥ ಹರುಷದಿಂದೀವೆ ನಿಮ।ಗೊರೆದಂತೆ ಮಗನನ್ನು। ವರ ಮುಹೂರ್ತವು ನಾಳೆಗಿಹುದು ॥3॥ ಎನೆ ಹಸಾದ ವೆನುತ್ತ। ಮನದಿ ತೋಷವಗೊಂಡು।ಜನಪನಾ ಸಿಂಧು ಭೈರವನು॥ ಅನುಜೆಯಾ ಮಗನನ್ನು। ಕಣುತುಂಬ ನೋಡಿದನು। ಘನದ ಬಲಭುಜದ ಚಿಹ್ನೆಯನು ॥4॥

॥ಭಾಮಿನಿ॥

ನಾಮಕರಣದಿ ಉದಯನೆನುತಲಿ।ನೇಮದಿಂ ಪೆಸರಿರಿಸಿ ರಾತ್ರಿಗೆ। ಪ್ರೇಮದಿಂ ತೊಟ್ಟಿಲಿನ ಶಾಸ್ತ್ರವ ವಿರಚಿಸುತ ಬಳಿಕ॥ ಆ ಮಹೋನ್ನತ ವರ ಕಲಾವಿದೆ। ಭಾಮಿನಿಯ ಶಾಸ್ತ್ರೀಯ ನೃತ್ಯವು। ಸೀಮೆಗತ್ಯ ರೂಪವದು ನಡೆಯಲ್ಕೆ ಸಂಭ್ರಮದಿ ॥1॥

॥ರಾಗ॥ಆರಭಿ॥ ಏಕ॥

ಪಾಹಿ ಪಾರ್ವತಿ ಶಕ್ತಿ ಸ್ವರೂಪಿಣಿ। ಭಾವುಕ ಜಗಜ್ಜನನೀ॥ ಅಂಬ॥ ಪ॥ ಪಾವನ ಹಿಮಗಿರಿ ವಾಸಿನಿ ಕೇಸರಿ। ವಾಹನೇಂದು ಕಳಾ ಪರಿಪೂರ್ಣೇ॥ ಅಂಬಪಾಹಿ ॥1॥ ಅಂಬುಜ ಮುಖಿ ಮುಖ ಮುಕುರೇ ಮುನಿಕ।ದಂಬ ನಮಿತೆ ವರದಾತೇ। ಶಂಭು ಮನೋಹರಿ ಶಂಕರಿ ಶ್ರೀಗಿರಿ। ಸಂಭವೆ ಗಣಪತಿ ಷಣ್ಮುಖ ಮಾತೆ॥ ಅಂಬ ॥2॥ ಕಂಜದಳಾಯತ ಲೋಚನೆ ಮದ। ಕುಂಜರ ನಿಭ ಸಂಚರಣೇ॥ ಭಂಜಕ ಸುರಗಣ ಖಳ ಮಹಿಷಾಸುರ। ಭಂಜಿನಿ ಸಜ್ಜನ ರಂಜಿನಿ॥ ಅಂಬ ॥3॥ ಚಂಚಲಳಿಗಣ ಕಮಲದ ಭ್ರಮೆಯೊಳು। ಹೊಂಚಿ ಕುಳಿತ ಮುಂಗುರುಳ ಮುಖೆ। ಸಂಚಿತ ಪಾಪಗಳೆಲ್ಲವ ದಯದೊಳು। ಕಿಂಚಿದುಳಿಯದಂತೆ ಕಳೆಹೇ ಮಾತೇ। ಅಂಬ ॥4॥

॥ಭಾಮಿನಿ॥

ನಾಟ್ಯಮುಗಿಯಲು ಯಕ್ಷಗಾನದ। ಕೂಟವೇರ್ಪಡಿಸಿದ್ದರದಕತಿ। ಶ್ರೇಷ್ಠರನು ಕರೆಸಿದ್ದ ಭೂಪತಿ ಬಲು ಪ್ರಸಿದ್ಧರನು॥ ಕುಟ್ಟಿ ಭಾಗವತರು, ಮೃದಂಗಕೆ। ಗಟ್ಟಿ ಕುಳ ಮಂಜಣ್ಣ, ಚೆಂಡೆಯ।

ಪೆಟ್ಟು ಬಲವಾಗಿರುವ ಶಂಕಣ್ಣಯ್ಯ ಸಹವಿರಲು ॥1॥ ವಾಲಿ ಮೋಕ್ಷ ಪ್ರಸಂಗದಲಿ ಘನ।ವಾಲಿ ಪಾತ್ರದಿ ಕಾಂತು ಸೇಮಿತ। ಬಾಲು ನ್ಯಾಕರು ರಾಮ, ಸುಗ್ರೀವನಿಗೆ ಸುಬ್ಬಯ್ಯ॥ಬಾಳ ವಿಭವದಿ ತೊಡಗಿ ವಾದದಿ। ಸೋಲಲೊಪ್ಪದೆ ಚರ್ಚೆ ನಡೆಯಲು। ಕೇಳಿ ಮುಂದಿನ ಕಥೆಯನಿತ್ತಲು ನಡೆದ ಸಂಗತಿಯ ॥2॥ ಮಾತಿನಂದದಿ ಚೆನ್ನಿ ಬಹು ಚೆಲು। ಮಾತಿನಿಂವಶೀಕರಿಸಿ ರಾಣಿಯ। ಪ್ರೀತಿಗಳಿಸುತ ಹಾಲಿಗಿಕ್ಕುತ ಅಮಲು ದ್ರವ್ಯವನು॥ ಸೋತೊರಗೆ ಶಿಶು ಕೂಗಂದದಿ । ಆತಕಿಗ್ಗುತ ಮೂರ್ಛೆಯೌಷಧಿ । ಆತತುಕ್ಷಣ ತಂದು ಚಿಂತಾಮಣಿಯ ಕರಕಿಡಲು ॥ 3 ॥

॥ರಾಗ॥ ಕೇದಾರಗೌಳ ॥ಅಷ್ಟ॥

ತಾಳಮದ್ದಳೆಯೊಳು।ಮೇಲಾಟ ನಡೆದಿರೆ।ವಾಲಿ ರಾಮರೊಳಂದು॥ಬಾಲೆ ಪದ್ಮಾವತಿ। ಏಳುತ ತೊಟ್ಟಿಲ। ಬಾಲನ ಕಾಣದೆ ಅಳಲಂದು ॥1॥ ಗೊಂದಲವಾಗಲು।ನಿಂದುದು ಕಾರ್ಯವು। ಬಂದೊಳ ಧರಣಿಪತಿ॥ ಕಂದನ ಕಾಣದೆ। ನೊಂದ ಮನದಿ ಕರೆ।ದೆಂದ ಶಿಶುವ ಪುಡುಕೆ॥2॥ ಅರಮನೆಯೊಳಗೆಲ್ಲ।ಅರಸಲು ಕಾಣದೆ। ತರಹರಿಸುತ ಮಗುವ॥ ಅರಿಯದಂತಾರಿಗು। ಕರೆದೊಯ್ದರಾರಯ್ಯೊ। ಹರಹರ ಮಹದೇವ ॥3॥ ಅರಸಿಯ ರೋದನ। ಕಿರದಾಯ್ತು ಸಾಟಿಯು।ತರಳನೇನಾದನೆಂದು॥ ಹರಿಸೆ ಕಣ್ಣೀರನು। ಬರುತ ಕುಸುಮಗಂಧಿ॥ ಒರೆಯೆ ಸಾಂತ್ವನವಂದು ॥4॥ ಅತ್ತಿಗೆ ತಾಳಿಕೊ।ಚಿತ್ತಜಾರಿಯ ಮನ। ಎತ್ತ ಏನೆಂದರಿಗೆ॥ ಚಿತ್ತಜಯ್ಯನ ದಯ। ಉತ್ತಮ ವಿರೆ ಮುದ। ವೆತ್ತಿ ಬರುವ ಬಳಿಗೆ ॥5॥

॥ರಾಗ॥ ಸೌರಾಷ್ಟ್ರ॥ ತ್ರಿವುಡೆ॥

ಸಿಂಧು ಭೈರವ ಮನದಿ ಮರುಗುತ।ಲೆಂದ ಸುತ ದೊರಕುವನೆನುತ್ತಲಿ। ಹೊಂದಿರುವ ಮಮ ತೋಷವೆಲ್ಲವು। ನಂದಿಹೋಯ್ತು ॥ 1 ॥ ಕಂದನನು ಕದ್ದೊಯ್ದರೇತಕೊ। ಮಂದ ಮತಿಗಳಿಗೇನು ಲಾಭವೋ। ಚಂದ್ರಶೇಖರ ನೀನೆ ಗತಿಯೆನ।ಗೆಂದು ಅಳಲೆ ॥2॥ ತಾಳಿದುಗುಡುವ ದೇವರಸ ಮಮ। ಬಾಲಕನ ಜಾತಕದ ಫಲವೀ। ರೀತಿಯಿಂ ಫಲಿಸಿದುದೆ ಶಿವ ಶಿವ। ತಾಳಲೆಂತು ॥3॥ ದುರಳರ್ಯೊದಾ ಶಿಶುವ ತಲೆಯನು। ತರಿವರೋ ಕಾಡಿನಲಿ ಬಿಡುವರೊ। ಹರನೆ ನೀನೇ ಕಾವುದೆನ್ನಯ। ತರಳನನ್ನು ॥4॥ ಚಂಡಕೀರ್ತಿಯು ಬಹಳ ತೋಷವ।ಗೊಂಡು ನಲಿದನು ಅಕ್ಕನಿಗೆ ಬರಿ।ಕಂಡವರ ಮಗನಾಸೆ ಭಾವನ। ಷಂಡತನಕೆ ॥5॥ ಆರಸುತನನ್ನಿನ್ನು ತರುವರೊ। ಕಾರಣಿಕ ನಾ ಸಿಂಧು ಭೈರವ। ದಾರಿಗಾಣದೆ ಅಳಲುವನು ಬರಿ। ನಾರಿಯಂತೆ ॥6॥ ಅತ್ತಲಾ ಚಿಂತಾಮಣಿಯು ತಾ। ಎತ್ತಿಕೊಳುತಲಿ ಶಿಶುವ ನಡೆಯುತ। ಮತ್ತೆ ಸೂರ್ಯೋದಯದ ಸಮಯಕೆ ಕಾಡಿನೊಳ ಸೇರೆ॥ ಮತ್ತಿಳಿಯೆ ಮಗುವೆಚ್ಚರಾಗುತ। ಎತ್ತಿತುಳಿಯಿತು ಕಾಲೊಳವನೆದೆ ಮತ್ತದಾರೋ ಗುದ್ದಿದಾ ತೆರವಾಗಲನುಭವವು॥

॥ರಾಗ॥ ಕಾಂಬೋಧಿ॥ ಝಂಪೆ॥

ಕಾಣೆಕಂದನ ಮೋರೆ। ತಾನು ಕಿರುನಗೆ ಬೀರೆ। ಮಾನವೀಯತೆ ಜಾಗರಿಸಲು। ಏನು ಲಾಭವು ಶಿಶುವ। ಹಾನಿಗೊಳಿಸಲು ಜೀವ। ಆನದೇನೆನಗೆ ಪಾಪಗಳು ॥1॥ ಮಿತ್ರಗೆನುತಲಿ ನಾನೆ। ಸೂತ್ರ ರಚಿಸಿದೆ ತಾನೆ। ಪಾತ್ರವೆನ್ನದೆ ಪಾಪ ಕೃತದಿ॥ ಕೃತ್ತಿವಾಸನೆ ಕ್ಷಮಿಸು। ಪೃಥ್ವಿಯೊಳಗಿನ್ನು ಕು। ಕೃತ್ಯವೆಸಗೆನು ನಾನು ನಿಜದಿ ॥2॥ ಕೊಲ್ಲೆ ನಾನೀ ಶಿಶುವ।ಫುಲ್ಲನಾಭನೆ ಮಗುವ। ನಿಲ್ಲೆ ಬಿಡುತಲಿ ಪೋಪೆ ಪೊರೆವ। ಎಲ್ಲ ಹೊಣೆ ನಿನಗೆನುತ। ಮೆಲ್ಲ ನಡೆದನು ಚಿಂತೆ।ಯಲ್ಲಿ ಚಿಂತಾಮಣಿ ನಿಗರ್ವ ॥3॥

॥ಭಾಮಿನಿ॥

ಬಳಿಕ ದೃಢ ಸಂಕಲ್ಪಗೈದನು। ಗೆಳೆಯನಾ ದುಷ್ಕೃತ್ಯಗಳನವ ತಿಳಿಯದಂದದಿ ತಡೆವೆ ನಾನೆಂದೆನುತ ನಿರ್ಧರಿಸೆ॥ ಬೆಳಗಿನಲಿ ಮಗು ಬೆದರಿ ಜೋರಿಂ।ದಳಲು ತೊಡಗಿತು ಖಗ ಮೃಗಂಗಳು। ಗಲಿಬಿಲಿಯ ಗೊಂಡೋಡೆ ಮುಂಗಥೆಯೊರೆವೆ ಲಾಲಿಪುದು॥

॥ರಾಗ॥ ॥ತಾಳ॥

ಕುಡಿಯರ ನಾರಿ ವೆಂಕಮ್ಮ। ಬಡವಳಾದರು ತಾನು ಬಿಡಳಯ್ಯ ಧರ್ಮ॥ ಅಡವಿಯೊಳಗೆ ಬೀಣೆ ಬೆತ್ತವನರಸೆ। ಹುಡುಕುತ ಗೆಡ್ಡೆ ಗೆಣಸುಗಳ ಸಂಗ್ರಹಿಸೆ ॥1॥ ನಿತ್ಯದ ಕಾಯಕವೆನುತಲಿ ವನಕೆ।ಅತ್ಯುತ್ಸಾಹದಿ ನಡೆತಂದಳಂದಾಕೆ। ಕತ್ತಿಯು ಕರದೊಳು ತಲೆಗೆ ಮುಟ್ಟಾಳೆ। ಹತ್ತಿ ಗುಡ್ಡವನೇರಿ ಬಂದು ನಿಂತಾಳೆ ॥2॥ ಎಳೆ ಶಿಶುವಳುವುದು ಕೇಳಿತು ಕಿವಿಗೆ। ತಳೆದಳಚ್ಚರಿಯ ನಾಲಿಸುತಲಿ ಹಾಗೆ। ಸೆಳೆದುದವಳಮನ ಮಗುವಿನ ಬಳಿಗೆ। ತಳೆಯೆ ವಾತ್ಸಲ್ಯವು ಪುಡುಕುತ್ತ ಸಾಗೆ ॥3॥

॥ಭಾಮಿನಿ॥

ಏನಿದಚ್ಚರಿಯೆನುತ ಕಾಡೊಳು। ಮಾನಿನಿಯು ಅರಸುತ್ತಲಾ ಎಳೆ। ಸೂನುವನು ಕಂಡೊಡನೆ ಮಮತೆಯು ಉಕ್ಕಿ ಹರಿಯಲ್ಕೆ॥ ತಾನೆ ತೆಗಪ್ಪಿದಳು ಹಸಿವನು। ಆನಲಾರದೆ ಅಳುವ ಮಗುವಿಗೆ। ಜೇನರಸಿ ತೆಗೆಯುತಲಿ ವಸ್ತ್ರದೊಳದ್ದಿ ಬಾಯ್ಗಿಡುತ ॥1॥ ಹಿಂದೆ ರಕ್ಕಸ ನಾರಿಯರು ತಾ।ಕಂದನನು ಹೆತ್ತಲ್ಲೆ ಬಿಡುತಲಿ। ಮುಂದೆ ಸಾಗುತಲಿದ್ದರೆನುತಲಿ ದಾಸರೊರೆದಿಹರು॥ ತಂದಿವನ ನೀವನದಿ ಬಿಟ್ಟಿಹ।ಳಿಂದು ರಾಕ್ಷಸ ವೃತ್ತಿಯಳೆ ಸರಿ। ಎಂದು ತನ್ನಯ ಭಾಗ್ಯವನು ನೆನೆದೆಂದಳೀ ತೆರದಿ ॥2॥

॥ರಾಗ॥ ಸೌರಾಷ್ಟ್ರ॥ ತ್ರಿವುಡೆ॥

ಪಂದಳದ ರಾಜನಿಗರಣ್ಯದಿ। ಕಂದನಾ ಅಯ್ಯಪ್ಪ ದೊರೆತನು। ಇಂದು ಸುತರಿರದೆನಗೆ ದೊರಕಿತಿ।ದೊಂದು ಮಗುವು ॥1॥ ಶಬರಿಮಲೆಯ ನಿವಾಸನಾ ದಯ।ಅಬಲೆ ಎನ್ನಾಸೆಯನು ಸಲಿಸಿತು। ಶುಭವದೀ ದಿನ ಎನ್ನ ಪಾಲಿಗೆ। ಅಭಯವಿತ್ತ ॥2॥ ಚಿಣ್ಣನಿವನನು ಕೇರಿಗೊಯ್ಯುತ। ಮುನ್ನ ಪೊರೆಯುವೆನೆನುತ ನಡೆದಳು। ತನ್ನ ಮನೆಗತಿ ತೋಷದಲಿ । ಸಂ।ಪನ್ನೆಯಂದು॥3॥

॥ಜಾನಪದ ದಾಟಿ॥

ಕರಿಯನೆಂಬಾತನು ಕುಡಿಯರ ಗುರಿಕಾರ। ಇರಲವ ತನ್ನ ಗುಡಿಸಲಲಿ। ಇರಲವ ತನ್ನ ಗುಡಿಸಲಲಾತನ। ಅರಸಿ ವೆಂಕಮ್ಮ ಬರುತಲ್ಲಿ ॥1॥ ವನದೊಳು ಸಿಕ್ಕಿದ ಕಂದನ ತೋರ್ದಳು। ತನಯರಿಲ್ಲದ ದುಃಖ ತೊಲಗಿದುದು॥ ತನಯರಿಲ್ಲದ ದುಃಖ ತೊಲಗಿತು ನಮಗಿಂದು। ಕಣುಬಿಟ್ಟ ಕುಲದೇವನೊಲುಮೆಯಿದು ॥2॥ ಕಾಣುತಚ್ಚರಿಯಲ್ಲಿ ಏನು ಎತ್ತಣ ಶಿಶು। ಕಾನನ ದೊಳಗಾರು ಬಿಟ್ಟರಿದ। ಕಾನನ ದೊಳಗಾರು ಬಿಟ್ಟರೀ ಮಗುವನ್ನು। ದಾನವಳೆನರೇ ಹೆತ್ತವಳನ್ನು ॥3॥

॥ಭಾಮಿನಿ॥

ಶಿಶುವಿದನು ಸಾಕಿದರೆ ಈತನ। ದೆಸೆಯೊಳಗೆ ನಮಗೇನದಾದರು। ಬೆಸೆದು ಕೊಳುವುದೊ ಕಷ್ಟಕೋಟಲೆ ಎನುತ ತಿಳಿಯುವರೆ॥ ತುಸುವೆ ದೂರದಿ ಕಾಡೊಳೋರ್ವನು ವಸತಿಗೈದಿಹ

ಸಾಧು, ಹನುಮನ। ವಶವ ಮಾಡಿಹ ನವಗೆ ತೋರುತ ಭವಿತ ವರಿಯುವುದು॥ ಎನುತ ಸತಿ ಸಹ ನಡೆದನಾಗಲೆ। ವನದೊಳಗೆ ರಚಿಸಿರುವ ಚೆಲುವೆಲೆ। ಮನೆಯೊಳಗೆ ಹನುಮಂತ ಮೂರ್ತಿಯನರ್ಚಿಸುತ್ತಿರುವ॥ ಮುನಿಪ ನಂಘ್ರಿಗೆ ಮಣಿದು ಹಸುಳೆಯು। ತನಗೆ ದೊರೆತುದ ತಿಳುಹುತೀತನ। ಜನನದ ಸ್ಥಿತಿಯರುಹ ಬೇಕೆಂದೆನಲು ತೋಷದೊಳು ॥2॥

॥ರಾಗ॥ ಕೇದಾರಗೌಳ॥ ಅಷ್ಟ॥

ಮಗುವಿನ ಮುಖವನು।ನಗುತಲೀಕ್ಷಿಸಿದನು। ಒಗುತಿದೆ ರಾಜಕಳೆ॥ ಹಗೆಗಳ ಸಂಚಿಗೆ। ಅಗಲಿದ ಹಡೆದರ। ಮಗನಾದ ನಿಮಗೆ ಭಲೇ ॥ 1 ॥ ಬಲದ ಭುಜದೊಳಿಹ। ಚೆಲುವಿನೋಂಕಾರವು। ತಿಳಿಯೆ ತ್ರಿಮೂರ್ತಿಗಳ। ಒಲವಿರಲೀತಗೆ। ಇಳೆಯ ನಾಳುವ ಹಗೆ।ಗಳ ಗೆಲುವನು ಬಾಲ॥2॥ ಪರಿಸರ ಪ್ರಿಯನೀತ। ಸರುವ ಜೀವಿಯ ಹಿತ। ನಿರತ ಕಾಯುವ ಪ್ರೀತ॥ ಪೊರೆಯಿರಿ ಸುಖದೊಳು ವರುಷವೈದಾಗಲು। ಒರೆವೆ ವಿದ್ಯೆಯ ನುಚಿತ ॥3॥

॥ಭಾಮಿನಿ॥

ಪುತ್ರರಿಲ್ಲದ ನಿಮ್ಮ ಬಾಳಿನ। ಕತ್ತಲೆಯ ಕಳೆದವಗೆ ಉದಯಾ। ದಿತ್ಯ ನೆನುತಲಿ ಪೆಸರ ನಿರಿಸಿರಿ ಎಂದು ಹರಸುತಲಿ॥ ಮಸ್ತಕವನೇವರಿಸಿ ಕಳುಹಲು। ಚಿತ್ತ ತೋಷದಿ ಮನೆಗೆ ಬಂದರು। ಉತ್ಸವವನಾಚರಿಸಿದರು ಕೇರಿಯೊಳು ಸಂಭ್ರಮದಿ ॥1॥

॥ರಾಗ॥ ಸೌರಾಷ್ಟ್ರ॥ ತ್ರಿವುಡೆ॥

ಸಿಂಧು ಭೈರವನರಸಿ ಗರ್ಭವ ಹೊಂದಿರಲಿ ಕರಿಯುತ್ತ ಭೂಪತಿ। ಚಂದದಿಂ ಹಬ್ಬವನು ರಚಿಸಿದ। ನಂದು ಮುದದಿ ॥1॥ ಪುರದ ದೇವಾಲಯದಿ ಪೂಜೆಯ। ವಿರಚಿಸಿದ ಸಂತಾನ ಭಾಗ್ಯವ। ಕರುಣಿಸಿಹ ದೇವನಿಗೆ ಹೊತ್ತನು। ಹರಕೆಗಳು ॥2॥ ಸತಿಯ ಬಯಕೆಗಳನ್ನು ಅರಿಯುತ। ಅತಿಶಯದಿ ತಾ ಸಲಿಸುತ್ತಿದ್ದನು। ಸುತನುದಿಸಲೆಂದಾಶಿಸುತ ಲಾ।ಪೃಥಿವಿ ಪತಿಯು ॥3॥

॥ರಾಗ॥ ಕಾಂಬೋಧಿ॥ ಝಂಪೆ॥

ಚಂಡಕೀರ್ತಿಯು ಅರಿತು। ದಿಂಡೆಗರ್ಭವನಾಂತು। ಕೊಂಡಳೆಂತೀ ವಿಷಯ ಚೋದ್ಯ॥ ಷಂಡನೆನುತಲಿ ಕರೆಸಿ।ಕೊಂಡ ಭೈರವನು ಕುಷಿ।ಗೊಂಡಿಹುದ ನಿಳಿಸುವೆನು ಸದ್ಯ। ಮಕ್ಕಳಿರದನ ರಾಜ್ಯ। ದಕ್ಕುವದು ಎನಗೆನುತ। ತಕ್ಕುಪಾಯವ ನೆಸಗುತಿದ್ದೆ। ಅಕ್ಕ ಬಸಿರಾಗಿಹಳು। ತಕ್ಕಕಾಲದಿ ಹೆರಲು। ಸಿಕ್ಕದಿದು ಏಂಗೈವೆ ಮುಂದೆ ॥2॥ ಎಂದು ಯೋಚಿಸಿ ಮನದಿ। ಬಂದ ಮಿತ್ರನ ಮುದದಿ। ಸಂಧಿಸುತ ಎಲ್ಲ ಸಂಗತಿಯ। ಎಂದನವನೊಳು ಕೇಳು।ತೆಂದ ಚಿಂತಾಮಣಿಯು। ಮುಂದಿನಾಗುಗಳ ನಿಜಸ್ಥಿತಿಯ॥

॥ರಾಗ॥ ಸಾಂಗತ್ಯ॥ ರೂಪಕ॥

ಬರಿದೇಕೆ ಚಿಂತಿಪೆ।ಹೆರಲಿ ನಿನ್ನಕ್ಕನು। ಅರಿಯುತಲಿ ಗಂಡೊ ಹೆಣ್ಣೆಂದು।ತರಳೆಯಾದರೆ ನಿನ್ನ ತರಳನಿಗೆ ತರೆ ಚೆನ್ನ। ಪರಿಹಾರಗೈವೆ ನಾ ಮುಂದು ॥1॥ ಎನಲೆಂದ ತೋಷದಿ। ನಿನಗಿಹಾಲೋಚನೆ। ಎನಗೆ ಏತಕೆ ಹೊಳೆಯದುದೊ। ಘನ ಬುದ್ಧಿ ನಿನ್ನದು। ಮನಕಾಯ್ತು ಸಮಧಾನ। ಋಣಿಯು ನಿನಗಹೆನು ಎಂದೆಂದು ॥2॥ ಎನ್ನನೇತಕೆ ಹೊಗಳಿ। ಹೊನ್ನ ಶೂಲಕ್ಕಿಡುವೆ। ಬನ್ನಣೆಯ ಮಾತು ಸಾಕು ಬಿಡು॥ ಮುನ್ನಿನಂತೆಯೆ ಕಾರ್ಯ।ವನ್ನು ತಿಳಿಸಿಯೆ ಮಾಡು। ನಿನ್ನ ದಾರಿಗೆ ತಹೆನು ನೋಡು ॥3॥

॥ರಾಗ॥ ಕಾಂಬೋಧಿ॥ ಝಂಪೆ॥

ಅತ್ತ ದುರ್ಗಾಪುರದಿ। ಇತ್ತನೋಲಗ ಶಾಂತಿ। ಗುಪ್ತನತಿ ವೈಭವದೊಳಂದು॥ ಸುತ್ತನೋಡುತ ತನ್ನ। ಆಪ್ತರೊಡನಾಡಳಿತ। ದತ್ತ ಗಮನವ ಸೆಳೆಯುತೆಂದ ॥1॥

॥ರಾಗ॥ ಸೌರಾಷ್ಟ್ರ॥ ತ್ರಿವುಡೆ॥

ಲಾಲಿಪುದು ಎಮ್ಮವರು ದೇಶದಿ। ಮೇಲು ಸಂಪದ ತುಂಬಿಹುದು ಮಮ। ಆಳುವಿಕೆಯಿಂ ದಾದುದೀಪರಿ।ಏಳಿಗೆಯಿದು ॥1॥ ಕ್ಷಾಮ ಡಾಮರ ಭೀತಿಯಿಲ್ಲವು। ನೇಮ ನಿಯಮ ದೊಳೆಲ್ಲರಿರ್ಪರು। ಸೀಮೆಯೊಳು ನೆಲಸಿಹುದು ಶಾಂತಿಯು। ಭೂಮಿಯಲ್ಲಿ ॥2॥ ದೇಶವನು ವಿಸ್ತರಿಸಬೇಕೆಂ।ಬಾಶೆಯಿರ್ಪುದು, ಮನದೊಳದಕವ। ಕಾಶವದು ತಾನೊದಗಿ ಬಂದಿದೆ। ಈ ಸುದಿನದಿ ॥3॥ ಇಂದು ನಮ್ಮಯ ನೆರೆಯ ರಾಜ್ಯವು। ಚಂದನಾಪುರ ಭೀಕರದ ಬರ।ದಿಂದ ಬೆಂದಿದೆ ಜನರು ನಡೆದರು। ನೊಂದು ವಲಸೆ ॥4॥ ಅರಸ ದುರ್ಬಲನಾಗಿರಲಿಕಿದೆ। ಧುರವನೆಸಗುತ ಗೆಲಲು ಸಮಯವು। ಬರಿದೆ ಕಾಯುವದೇಕೆನುತ ಬಲು। ಭರದಿ ಸೇನೆ ॥5॥ ನೆರಹಿಸುತ ತಾ ತೆರಳಿದನು ಅತಿ। ಬಿರುಸಿನಿಂದಲಿ ಬರಲು ಚಂದನ। ಪುರದ ಚಾರಕ ನರಿತು ನುಡಿದನು। ಧರಣಿಪತಿಗೆ ॥6॥

॥ರಾಗ॥ ಪುನ್ನಾಗತೋಡಿ॥ ಅಷ್ಟ॥

ದೊರೆಯೆ ಲಾಲಿಸು ವೈರಿ ರಾಯರ ಸೇನೆಯು।ಬರುತಿದೆ ನಾ ಕಂಡೆ॥ ಬರವು ಬಂದಿರೆಗೆಲೆ ಸುಲಭವೆನುತ ಬಹ। ಅರಸನ ನಾ ಕಂಡೆ ॥1॥ ಶಾಂತಿಗುಪ್ತನು ದುರ್ಗಾಪುರದರಸನು। ಕ್ರಾಂತಿಗೆನುತ ಬಹನು॥ ಶಾಂತಿಯೆನ್ನುವ ಪದಕಪಹಾಸ್ಯವೆಸಗುವ। ಚಿಂತೆಯೊಳರುಹಿದೆನು

॥ಭಾಮಿನಿ॥

ಕೇಳುತಲಿ ದೇವರಸ ದೂತನು। ಪೇಳಿದಾವಚನವನು ಮನದೊಳು। ತಾಳಿದನು ಬಲುಚಿಂತೆ ಶಿವ ಶಿವ ಕೆಟ್ಟೆನಾನಕಟ॥ ಕಾಲದಾ ಘನ ಮಹಿಮೆಯೋ ಮಮ। ಬಾಲಕನ ಜಾತಕದ ಫಲವೋ। ಪಾಲಿಸದೆ ಧರ್ಮವನು ವಿಷಮ ಸ್ಥಿತಿಯೊಳೀ ತೆರದಿ ॥1॥

॥ರಾಗ॥ ರೇಗುಪ್ತಿ॥ ಏಕ॥

ಬರುತಿಹ ಸಮರಕೆ ಎಸಗಲೇನನು ನಾನು। ಪರಿಹಾರವನು ಕಾಣೆ ನಿನ್ನು॥ ಬರದ ಬೇಗೆಗೆ ಜನ ಗುಳೆ ಎದ್ದು ಹೋಗಿದೆ। ಇರುವ ಯೋಧರಿಗಾದರಾನು ॥1॥ ವಿತರಿಸೆ ವೇತನ ಬರಿದು ಬೊಕ್ಕಸವೆಲ್ಲ।ಹತಭಾಗ್ಯ ನಾನಯ್ಯೋ ಶಿವನೆ॥ ಹತಿಸಲೇತಕೆ ಯುದ್ಧವೆನುತಲಿನ್ನಿವರನ್ನು। ಸತಿಸುತರನು ಪೊರೆಯುವೆನೆ ॥2॥ ತೊರೆಯಿರಿ ದೇಶವೆಂದೆನುತಲಿನ್ನುಳಿದರ್ಗೆ। ಕರೆದು ಸತಿಯೊಳೆಂದ ಬಳಿಕ॥ ತರಳನ ಜತೆಗೆ ನೀ ತೆರಳು ಮಂದಾರಕೆ। ಬರಗಾಲ ಸರಿಯುವ ತನಕ ॥3॥

॥ರಾಗ॥ ತೋಡಿ॥ ರೂಪಕ॥

ಕೆಟ್ಟು ನೆಂಟರ ಸೇರುವದ್ಯಾವ ನ್ಯಾಯವು। ಕಷ್ಟ ಕಾಲದಿ ನಿಮ್ಮ ನಿಂತು॥ ಬಿಟ್ಟು ಪೋಪೆನೆ ನಾನು ಸಮಪಾಲು ಎನಗಿದೆ। ಒಟ್ಟಿಗನುಭವಿಪೆ ಜತೆಯಾಂತು॥1॥

॥ರಾಗ॥ ಕೇದಾರಗೌಳ॥ ಅಷ್ಟ॥

ಮಡದಿ ಮಕ್ಕಳ ಪೊರೆ। ವಡೆ ಗತಿ ಯಿಲ್ಲವು। ಅಡಸಿದೆ ಬರಗಾಲವು॥ ಸುಡುಬಿಸಿಲಿಂದಲಿ।

ಪೊಡವಿಗಾರಾಗಿದೆ। ಕುಡಿಯಲು ನೀರಿಲ್ಲವು ॥1॥

॥ರಾಗ॥ ತೋಡಿ॥ ರೂಪಕ॥

ನಿಮಗಾದ ತೆರದಲಿ ಎನಗಾಗಲದಕೇನು। ಸಮಗಾಲಿಗಳು ಸಂಸಾರದಲಿ॥ ವಿಮುಖಳಾಗೆನು ನಿಮ್ಮನಗಲೆನು ಕಷ್ಟದ। ಸಮಯದೀ ವಿಷಮ ಸ್ಥಿತಿಯಲ್ಲಿ॥1॥

॥ರಾಗ॥ ಕೇದಾರಗೌಳ॥ ಅಷ್ಟ॥

ತರಳನ ಪೊರೆಯುವ।ಪರಿಗಾಣೆ ವಿದ್ಯೆಯ।ನೊರೆಯುವದೆಂತರಿಯೆ॥ ಬರುತಿಹ ಸೇನೆಯು।ಪುರ ಸೇರುವ ಮುನ್ನ। ತೆರ । ಳದಿರದು ದಾರಿಯೆ॥1॥

॥ರಾಗ॥ ತೋಡಿ॥ ರೂಪಕ॥

ತೆರಳುವ ಶೀಘ್ರದೆ ತಡೆಯುವದೇಕಿನ್ನು।ದುರುಳರಿಲ್ಲಿಗೆ ಬಹಮೊದಲೆ॥ಪರವೂರನು ಸೇರಿ ಹರಿಶ್ಚಂದ್ರನ ತೆರ ಹೊರೆವ ಹೊಟ್ಟೆಯ ಚಾಕರಿಯಲೆ ॥1॥

॥ಭಾಮಿನಿ॥

ಕೇಳುತಾಕೆಯ ನುಡಿಯ ದುಃಖವ। ತಾಳಲಾರದೆ ನೃಪತಿ ಯೋಚಿಸಿ। ಕಾಲ ಕಳೆದರೆ ಬಹಳನರ್ಥಕೆ ಎಡೆಯದಕ್ಕೆನುತ॥ ಬಾಲಕನ ಸಹ ಮಡದಿ ಸಹಿತಲಿ। ಹೇಳದಾರಿಗು ಗುಪ್ತ ದ್ವಾರದಿ।ಫಾಲನೇತ್ರನ ನೆನೆಯುತಲಿ ತಾ ನಡೆಯಲರಿಬಲವು ॥1॥

॥ರಾಗ॥ ಭೈರವಿ॥ ಏಕ॥

ಬರುತಲಿ ಕೋಟೆ ಬಾಗಿಲದು॥ ತೆರೆ॥ ದಿರುವದ ಕಂಡೊಳಸರಿದು॥ ಅರಸನಿರೀಕ್ಷಿಸಲಂದು ॥ಜನ॥ರಿರದಿರೆ ಬಲುಕುಷಿ ತಳೆದು ॥1॥ ಬರಗಾಲದ ಭೀಕರತೆ॥ ಈ॥ ತೆರವಾಯಿತೆ ಏನು ಕಥೆ॥ ಪರಿಹಾರವ ಗೈಯದೆಯೆ॥ ನೃಪ॥ ತೆರಳಿದನೆತ್ತಲೆಂದರಿಯೆ ॥2॥ ದೊರಕಿತು ಚಂದನ ಪುರವು। ಧುರ॥ ವಿರಚಿಸದೆಯೆ ಕರ ವಶವು॥ ಪರಿಹರಿಸುತ ಕ್ಷಾಮವನು ॥ನಾ॥ ಬರಿಸುವೆ ಪ್ರಜೆಗಳೆಲ್ಲರನು ॥3॥

॥ಭಾಮಿನಿ॥

ಎನುತ ಪುರವಶಗೈದು ಗುಪ್ತನು। ಘನದ ಕೆರೆ ಬಾವಿಗಳ ತೋಡಲು। ಹಣವ ತೊಡಗಿಸಿ ದೇವರಸನನು ಅರಸಲೆಂದೆನುತ॥ ಜನವನಟ್ಟಿದ ಬಲವ ನೆರಹಿಸಿ। ಜನಪ ಬಹಮೊದಲವನ ಬಂಧಿಸಿ। ಅನವರತ ಸೆರೆಗಿಡುವೆನೆನ್ನುತ ಯೋಚಿಸುತಲಂದು ॥1॥

॥ರಾಗ॥ ಸೌರಾಷ್ಟ್ರ॥ ತ್ರಿವುಡೆ॥

ಇತ್ತಲಾ ಮಂದಾರ ಭೂಪನ। ಪತ್ನಿ ಹಡೆದಿರೆ ಹೆಣ್ಣು ಶಿಶುವನು। ಚಿತ್ತ ತೋಷದೊಳರಸ ವಿರಚಿಸಿ। ಉತ್ಸವವನನು ॥1॥ ಜಾತಕರ್ಮವಗೈದು ಮಗಳಿಗೆ। ಪ್ರೀತಿಯಿಂದಲಿ ಚಂದ್ರಿಕಾಯೆಂ। ದಾತ ನಾಮವ ನಿಟ್ಟು ಕರೆದನು। ಮಾತೆಪೆಸರ ॥2॥ ಪುತ್ರಿಯಾದರದೇನು ಎನ್ನಯ। ಉತ್ತರಧಿಕಾರಿಣಿಯು ಈಕೆಗೆ। ಸೂಕ್ತ ಕಾಲದಿ ಸಮರ ವಿದ್ಯೆಯ। ನುತ್ತಮದಲಿ ॥3॥ ಕಲಿಸಲಿಹೆನೆನ್ನುತಲಿ ಮನದಲಿ। ತಳೆದಿರಲು ನಿರ್ಧಾರವನು ನೃಪ। ಗಲಿಬಿಲಿಯ ಭಾವದಲಿ ದೂತನು। ತಿಳಿಸಲಿಂತು ॥4॥

॥ರಾಗ॥ ಮುಖಾರಿ॥ ಏಕ॥

ದೊರೆರಾಯ ಲಾಲಿಸು ನುಡಿಯ॥ ವಾರ್ತೆಯನೊಂದ॥ ಅರಿತು ನಾ ನೊರೆವೆನು ಜೀಯ॥ ವರ ಚಂದನಪುರ। ಬರದಿಂದಲಿತ।ತ್ತರಿಸಲು ಜನ ಜಲ। ವರಸುತಗುಳೆಎ।ದ್ದಿರೆ ದುರ್ಗಾಪುರ।ದರಸನು ಸೇನೆಯ। ವೆರಸುತ ಧಾಳಿಗೆ। ಬರುತಿಹುದರಿಯುತ ॥1॥ ತರಳನ ಸಹಸತಿಯೊಡನೆ॥ ದೇವರಸನು॥ ತೆರಳಿದ ದೇಶಾಂತರವನೆ। ಧುರವಿಲ್ಲದೆ ಧರೆ। ದೊರಕಿತು ತನಗೆಂ। ದುರುತರ ತೋಷದಿ। ದುರುಗಾಧಿಪತಿಯು। ಪುರವಶಗೈಯುತ। ಬರಪರಿಹಾರಕೆ। ವಿರಚಿಸುತಿರುವನು। ವರಕಾರ್ಯಗಳ ॥2॥

॥ಭಾಮಿನಿ॥

ಕೇಳಿ ದೂತನ ನುಡಿಯ ತಂಗಿಯ। ಬಾಳಿಗೊದಗಿತೆ ಕಷ್ಟದ ಸ್ಥಿತಿ। ತಾಳಲೆಂತಕಟಕಟ ಇವರಿನ್ನೆತ್ತ ಲೈದಿದರೊ॥ ಬಾಲನೊಂದಿಗೆ ದೇಶಚರಿಸುತ। ಬಾಳಲೆಂತ್ಯೆ ಶಿವನೆ ಕರೆಸುತ। ಪಾಲಿಸುವೆ ನಾನೆಂದರವರನ್ನೆಲ್ಲಿ ಅರಸುವೆನು ॥1॥

॥ರಾಗ॥ ಭೈರವಿ॥ ಆದಿ॥

ಯಾರನ್ನು ನಾ ಕಳುಹಲಿ ಪುಡುಕುವರಿನ್ನು।ಊರೂರು ಚರಿಸುವ ಇವರ॥ ಆರಿಗವರ ಪರಿಚಯ ವಿಹುದರಿಯೆನ। ನಾರಿ ಪದ್ಮಾವತಿ ಕುವರ ॥1॥ ಏಸೊಂದು ದಣಿದರೊ ಭಾವನೇಂಗೈದನೊ। ದೇಶ ದೇಶವ ಚರಿಸುತಲಿ॥ ಈಸು ನೆಂಟರು ಇರೆ ಸುದ್ದಿಯ ನರುಹದೆ। ತ್ರಾಸಗೊಂಬುದಕೇನನೆನಲಿ ॥2॥ ಸಿಂಧು ಭೈರವ ತಾನಿಂತು ಚಿಂತಿಸುತಿರೆ। ಹೊಂದೆ ತೋಷವ ಚಂಡಕೀರ್ತಿ।ನೊಂದ ಕಾಣುತ ಚಿಂತಾಮಣಿಯತಿ ವಿನಯದಿ। ಎಂದತಾ ನರಸಗೀರೀತಿ ॥3॥

॥ರಾಗ॥ ಕೇದಾರ ಗೌಳ॥ ಅಷ್ಟ॥

ಪೊಡವಿಪ ಲಾಲಿಸು। ಪೊಡವಿಯ ಚರಿಸುತ। ಪುಡುಕುವೆ ಸಹಜೆಯನು । ದೃಢವಿದು ನಂಬಿಕೊ। ಕೊಡುವೆನು ಭಾಷೆಯ। ನುಡಿದಂತೆ ನಡೆಯುವೆನು ॥ 1 ॥ ಪರಿಚಯ ವಿರುವದು। ಕಿರಿಯ ಸುತನ ನಾಮ। ಕರಣಕೆ ಬಂದಿಹೆನು॥ ಅರಸ ದೇವರಸನ। ಗುರು ತರಿಯುವೆ ನಾ। ತರಳನ ಸಹಿತಲಿನ್ನು ॥2॥ ಜನಪ ಸಾಂತ್ವನ ಗೊಂ।ಡನುಮತಿಯೀಯುತ। ಧನ ಸಹಗುರುತು ಪತ್ರವನು॥ ಅನುಕೂಲ ಕೊದಗಿಸೆ। ಸನುಮತಿಯಿಂದಲಿ। ಘನದಿಂದ ಲೈದಿದನು ॥3॥

॥ರಾಗ॥ ಕಾಂಬೋಧಿ॥ ಝಂಪೆ॥

ಚಂಡಕೀರ್ತಿಯು ತೋಷ।ಗೊಂಡು ಚಿಂತಾಮಣಿಯ। ಕಂಡು ನುಡಿದನು ಭಲರೆ ಎನುತ। ಕಂಡು ಹಿಡಿದವರನ್ನು। ಅಂಡಲೆಸಿ ನಿಗ್ರಹಿಸು। ದಿಂಡೆ ಪದ್ಮಾವತಿಯ ಸಹಿತ॥ ಅನ್ಯರನು ಕಳುಹಲಾ। ಮುನ್ನವೇ ನೀನೊಪ್ಪ। ಲೆನ್ನಮನಕಾಯ್ತು ಸಂತೋಷ। ನಿನ್ನ ದೂರದ ದೃಷ್ಟಿ।ಗಿನ್ನಿಲ್ಲ ಸರಿಸಾಟಿ। ಚೆನ್ನಾಯ್ತು ನಿನ್ನ ಸಹವಾಸ ॥2॥ ಒಳಿತನರಿತೆಸಗುವೆನು। ಗೆಳೆಯನಾಹಿತ ಬಯಸಿ। ತಳೆದ ನಿಲುವಂತೆ ನಡೆಯುವೆನು॥ ತಳುವದ್ಯೆದುವೆನೀಗ। ತಳೆಯದಿರು ಸಂದೇಹ। ಇಳೆಯ ಚರಿಸುತಲಿ ಬಹೆ ನಾನು॥

॥ರಾಗ॥ಸೌರಾಷ್ಟ್ರ॥ತ್ರಿವುಡೆ॥

ಇತ್ತ ಕುಡಿಯರ ಕರಿಯ ಸಾಕಿದ। ಪೃಥ್ವಿಪಾಲನ ಮಗನ ಚಂದದಿ। ಮತ್ತೆ ವರುಷವದಾಗ ಲೈದಕೆ। ಸೂಕ್ತದಿನದಿ ॥1॥ ಹನುಮ ದಾಸರ ಬಳಿಗೆ ಕಳುಹಿದ। ಅನುವಿನಿಂದಲಿ ವಿದ್ಯೆ

ಕಲಿಸಲು। ಜನಪಸುತರಿಂಗೊಪ್ಪುವಂದದಿ। ಮುನಿಪ ತಾನು ॥2॥ ಗುರು ಗಣಪರನು ಭಜಿಸಿ ಹನುಮನ। ಪರಮ ಭಕ್ತಿಗಳಿಂದ ನುತಿಸುತ। ಹರುಷದಿಂ ತೊಡಗಿದರು ಕುಡಿಯರ। ತರುಣರೊಡನೆ ॥3॥

॥ಶ್ಲೋಕ॥

ಮಹಾಮತಿಂ ಮೌಢ್ಯನಿವಾರಕಂ ಯಂ। ಮಹಾದ್ಯುತಿಂ ಭಾಸ್ಕರ ತೇಜಕಾಯಂ। ದೇಹಾಢ್ಯಭೀಮಂ ಘನಶಕ್ತಿವಂತಂ। ತಂ ರಾಮದೂತಂ ಭಜವಾಯುಪುತ್ರಂ॥

॥ರಾಗ॥ ಸೌರಾಷ್ಟ್ರ॥ ತ್ರಿವುಡೆ॥

ಅಕ್ಷರಭ್ಯಾಸವನು ಸಹಿತಲಿ। ಚಿಕ್ಕವರ ಮನಕೊಪ್ಪುವಂದದಿ। ಶಿಕ್ಷಣವನತಿ ಶ್ರದ್ಧೆಯಿಂದಲಿ। ದಕ್ಷತೆಯೊಳು ॥1॥ ಕಲಿಸ ತೊಡಗಲು ಯೋಗಿ ಹುಡುಗರು। ಒಲಿದು ವಿದ್ಯಾಸಕ್ತಿಯಿಂದಲಿ। ಚೆಲುವ ಉದಯನನನುಕರಿಸುತಲಿ। ಕಲಿಯುತಿರಲು ॥2॥ ಮುಂದೆ ಲಾಲಿಸಿ ದೇವರಸಪುರ।ದಿಂದ ಸತಿಸುತರೊಡನೆ ಪೊರಡುತ।ನೊಂದು ಹಲದೇಶಗಳ ಚರಿಸುತ। ಬಂದ ಬವಣೆ ॥3॥ ನಡೆದು ದಣಿದರು ದುಡಿದು ದಣಿದರು। ಒಡಲ ತುಂಬುವ ಪರಿಯ ಕಾಣದೆ।ಪೊಡವಿಯನು ಸಂಚರಿಸು ತೊಂದಿನ ನಡೆತರುತಲಿ ॥4॥ ಒಂದು ಊರಿನ ಛತ್ರದಲಿ ತಾ।ವಂದು ತಂಗಲು ನಡೆದ ಬಳಲಿಕೆ।ಯಿಂದ ಸತಿ ಸುತರಿರದೆ ನಿದ್ದೆಗೆ। ಸಂದಿರಲ್ಕೆ ॥5॥ ಮಗನ ಮುಖವನು ನೋಡುತರಸನು। ಒಗುವ ಕಂಬನಿಯಿಂದ ಮನದಲಿ। ಬಗೆದ ದೈವದ ವಿಕಟವನು ಬಲು। ದುಗುಡದಿಂದ ॥6॥

॥ರಾಗ॥ ನೀಲಾಂಬರಿ॥ ರೂಪಕ॥

ಹರಹರೆನ್ನಯ ವಿಧಿಯೆ॥ಲೋಕದೊಳೆನ್ನ॥ ತೆರನಾರಿಹರೊ ಅರಿಯೆ॥ ತರಳನ ಸಹ ಸತಿಯ॥ಸಾಕಲುಗತಿ॥ಇರದಂತ ಧರೆಯೊಡೆಯ ॥1॥ ಧುರದಿ ಸೋಲದೆ ಭುವಿಯ॥ ತೊರೆಯುವದಾಯ್ತು॥ ಬರಗಾಲದಿಂ ಧರೆಯ॥ ತೆರಳೆಂದರು ಸತಿಯು॥ ತವರಿಗೆ ಪೋಗ॥ ದಿರುವಳಿನ್ನೇಂಗತಿಯು ॥2॥ ಈಪರಿ ತಿರುಗಿದರೆ॥ಮಗನಗತಿ॥ ಆಪುದವನತಿಯುಖರೆ॥ ಪೋಪೆ ನಾನಿವರ ಬಿಟ್ಟು॥ ಕಾಣದೆ ಎನ್ನ॥ ಪೋಪರು ತವರಿಗೊಟ್ಟು ॥3॥

॥ಭಾಮಿನಿ॥

ಎಂದು ಚಿಂತಿಸಿ ದೇವರಸ ತಾ। ನಂದು ಕುವರನ ಮೊಗವ ನೋಡುತ। ಒಂದು ಅರಿಯದ ಮುಗ್ಧ ಭಾವವ ಕಂಡು ಮನ ಮರುಗಿ॥ ಕಂದನನು ನಾನೆಂತಗಲುವೆನೊ।ನೊಂದು ಶಪಿಸರೆ ಎಚ್ಚರಾಗುತ। ಮುಂದಿನೇಳಿಗೆ ಚಿಂತಿಸಿದರಿದೆ ಒಂದು ಪಥವೆನಗೆ॥

॥ರಾಗ॥ಕೇದಾರಗೌಳ॥ ಅಷ್ಟ॥

ಎನುತಲಿ ಯೋಚಿಸಿ।ಜನಪ ತನ್ನರಸಿ।ಯನು ಸುತ ಸಹಿತಗಲಿ॥ಕ್ಷಣದೊಳು ನಡೆಯುತ। ಮನವು ಶೋಕಿಸಲು ತಾ।ತನಯನ ಸೆಳೆತದಲಿ ॥1॥ ತೆರಳಿ ತುಸುವೆ ದೂರ। ಕರುಳ ಪಾಶದ ಹಾರ। ಕೊರಳಿಗಿಕ್ಕಿದ ತೆರದಿ॥ ಮರಳಿ ಬಂದನು ಹಿಂದೆ। ಅರಸಿ ನಾ ಬಹೆ ಮುಂದೆ। ಇರಲು ಯೋಗವು ದೃಢದಿ ॥2॥ ಸ್ಥಿರಗೊಳಿಸುತ ಮನ। ತೆರಳಿದ ತನಯನ। ಪೊರೆಯಲು ತವರನ್ನು॥ ಅರಸಿ ಸೇರಲಿ ಎನು। ತಿರದೆ ತಾ ನಡೆದನು। ಚರಣ ಒಯ್ದೆಡೆಗವನು ॥3॥

॥ಭಾಮಿನಿ॥

ಸತಿಗೆ ಎಚ್ಚರವಾಗೆ ಪದುಮಾ।ವತಿಯು ಕಾಂತನ ಕಾಣದಿರೆ ತಾ। ನತಿ ಭಯದಿ ಹೊರಗೈದಿ ಪುಡುಕುತ। ಕರೆಯೆ ದೀರ್ಘದಲಿ॥ ಸುತನು ನಿದ್ದೆಯು ತೊರೆಯು ತೇಳಲು। ವ್ಯಥೆಯೊಳಾತನನಪ್ಪುತಲಿ ತವ।ಪಿತನು ಕಾಣನು ಎತ್ತಲೈದಿದ ನೆನುತ ಅಳಲಿದಳು।

॥ರಾಗ॥ ನೀಲಾಂಬರಿ॥ ಏಕ॥

ಶಿವಶಿವಿನ್ನೇನು ಗತಿಯೋ॥ ಕಾಣನು ಮಮ॥ ಧವನೆತ್ತ ಪೋದನಯ್ಯೋ॥ ತವರಿಗೈದಲಿಕೆಂದರು॥ ಪೋಗದ ಎನ್ನ॥ ಭುವನೇಶ ತೊರೆದಿಹರು ॥1॥ ಅಮ್ಮ ಅಳುವದ್ಯಾತಕೆ॥ ನಾನಿಲ್ಲವೆ॥ ನಿಮ್ಮನು ಪೊರೆವುದಕೆ॥ ಸುಮ್ಮನೆ ನೀವತ್ತರೆ॥ ಎನಗೆ ದುಃಖ॥ ಉಮ್ಮಳಿಸುವುದು ಬೇರೆ ॥2॥ ಅರಮನೆಯನು ತೊರೆದು॥ ವರ್ಷವು ನಾಲ್ಕು॥ ಧರೆಯನು ಚರಿಸಿದೆವು॥ ಅರೆ ಹೊಟ್ಟೆಯಾದರು॥ ಉಪವಾಸ ಬಿದ್ದಿಲ್ಲ॥ ಇರೆ ವಿಶಾಲದ ಜಗವು ॥3॥

॥ಭಾಮಿನಿ॥

ಎನುತ ಜನಪನ ಕುವರ ತನ್ನಯ। ಜನನಿಯನು ಸಂತೈಪ ಸಮಯದಿ। ಅನತಿ ದೂರದೊಳಿದ್ದ ಚಿಂತಾಮಣಿಯು ಕಾಣುತಲಿ॥ ವನಿತೆಯಳ ಮೊಗನೋಡಿ ತನ್ನಯ। ಮನದಿ ನಿಶ್ಚೈಸಿದನು ಈಕೆಯೆ। ಅನುಜೆ ಭೈರವಗೆಂದು ನುಡಿಸಿದ ಸಾಂತ್ವನಿಸುತವಳ।

॥ರಾಗ॥ ತೋಡಿ॥ ಅಷ್ಟ॥

ಯಾರು ನೀನೆಲೆ ತಾಯೆ॥ ತೋರುವೀ ಬಾಲನು॥ ಯಾರು ನೀನಾರ ಜಾಯೆ॥ ಊರದಾವುದು ನಿನ್ನ। ಚಾರು ನಾಮವದೇನ।ದೀ ರೀತಿ ದುಃಖ ಛಾಯೆ ॥1॥

॥ರಾಗ॥ ॥ತಾಳ॥

ಹತ ಭಾಗ್ಯಳೈ ನಾನು। ಗತಿಯಾರು ಎಮಗಿನ್ನು। ಸುತನಿವನಿನ್ನು ಚಿಕ್ಕವನು॥ ಪತಿಯಿದ್ದು ಇರನೆಂಬ। ವ್ಯಥೆಯಾಯ್ತು ಮನ ತುಂಬ। ಪೃಥಿವಿಯೊಳೆಂತು ಬಾಳುವೆನು॥

॥ರಾಗ॥ ಸಾಂಗತ್ಯ॥ ರೂಪಕ॥

ಜನಪ ಭೈರವನಿಗೆ। ಅನುಜೆಯೆಂದರಿಗೆನಗೆ। ವನಿತೆಯು ನೀ ಪದ್ಮಾವತಿಯು।ಇನಯ ಬಿಟ್ಟೈದಿದ।ರಿನಿತೇಕೆ ಕೊರಗುವೆ। ನಿನಗಿದೆ ಘನ ತವರ್ಮನೆಯು ॥1॥

॥ರಾಗ॥ ಕಾಂಬೋಧಿ॥ ಝಂಪೆ॥

ಸೋತು ಸಂಬಂಧಿಕರ।ನೇತಕಾಶ್ರಯಿಸುವದು।ಪ್ರೀತಿ ದೊರೆಯದು ಅತ್ತಿಗೊಲವೆ॥ಭೂತಳದಿ ನಾ ದುಡಿದು। ಓತು ಸಂಪಾದಿಸುತ।ಈ ತರಳನೊಡನೆ ಜೀವಿಸುವೆ ॥1॥ ಇಳೆಯಾಣ್ಮನಾತ್ಮಜಗೆ। ಕುಲಕೊಪ್ಪುವಾ ವಿದ್ಯೆ। ಕಲಿಸದಿರೆ ಮುಂದೇನು ಗತಿಯು। ತಿಳಿದಿದನು ನಿನ್ನಣ್ಣ। ಕಳುಹಿದರಸಲಿಕೆನ್ನ। ಒಲಿದಿತ್ತ ಗುರುತು ಪತ್ರವನ ॥2॥ ಅಣ್ಣನಲ್ಲಿಗೆ ಬರೆನು। ಅಣ್ಣನೀನೆನಗಿನ್ನು। ಚಿಣ್ಣನಿಗೆ ವಿದ್ಯೆಯೊರೆವರನು॥ಮುನ್ನ ನೀ ತೋರಿಪುದು। ನಿನ್ನಳಿಯ ನಿವನೆಂದು। ಚೆನ್ನಾಗಿ ಕಲಿಸುವರ ನಿಂದು ॥3॥

॥ಭಾಮಿನಿ॥

ಕೇಳುತಾಕೆಯ ನುಡಿಯ ಯೋಚನೆ। ತಾಳಿದನು ಮಂದಾರಕೀಕೆಯು। ಬಾಲನೊಂದಿಗೆ

ಬಂದಡಿವರನು ಚಂಡಕೀರುತಿಯು ಖೂಳತನದಿಂದೇನನಾದರು। ಹಾಳುಗೈಯದೆ ಬಿಡನು ಅದರಿಂ ಪೇಳುವೆನು ಹೊಸ ದಾರಿಯೆನುತಲಿ ನುಡಿದ ನೀತೆರದಿ।

॥ರಾಗ॥ ಸೌರಾಷ್ಟ್ರ॥ತ್ರಿವುಡೆ॥

ಅಮ್ಮ ಪದ್ಮಾವತಿಯೆ ಲಾಲಿಸು। ಸಮ್ಮತಿಯು ನೀನೆಂದ ಮಾತಿಗೆ। ಎಮ್ಮ ಅರಿವಿನೊಳೋರ್ವನಿಹ ಬಲು। ಹುಮ್ಮನಸನು ॥1॥ ಹನುಮ ದಾಸನು ಪೆಸರು ಆಶ್ರಮ। ವನದೊಳಿದೆ ಹನುಮಂತ ಭಕ್ತನು। ಜನಪ ಸುತರಿಂಗಪ್ಪ ವಿದ್ಯೆಯ।ಘನದೊಳೊರೆವ ॥2॥ ಎಂದು ದಾರಿಯ ತೋರು ತವರಿಗೆ। ಮುಂದರಿಯೆ ಚಿಂತಾಮಣಿಯು ಜವ।ದಿಂದ ಲೀರ್ವರು ಬಂದು ಯೋಗಿಗೆ।ವಂದಿಸಲ್ಕೆ ॥3॥

॥ರಾಗ॥ ಕೇದಾರಗೌಳ॥ ಅಷ್ಟ॥

ಹರಸುತ ನುಡಿಸಿದ। ಬರವೆತ್ತಣಿಂದಲಿ। ತರಳನ ಸಹಿತಲಿತ್ತ॥ ಇರುವದು ಮುಖದೊಳೇ। ತರ ಚಿಂತೆಯೆನ್ನೊಳು। ಅರುಹು ಕಾರಣವ ಸತ್ಯ ॥1॥ ಎನಲೊರೆದಳು ತನ್ನ। ಹಣೆ ಬರಹ ವನೆಲ್ಲ। ಇನಿಯನ ಅಗಲಿಕೆಯ। ತನಯಗೆ ವಿದ್ಯೆಯ। ಅನುವಿನಿಂ ಕಲಿಸಲು। ನಿನಗೊಪ್ಪಿಸಿರುವೆನಯ್ಯ ॥2॥ ತರಳನ ಪರಿಕಿಸಿ।ಹರುಷವ ಗೊಂಡನು। ಒರೆದ ಮೆಚ್ಚುಗೆ ನುಡಿಯ॥ ಧರೆಯೊಳು ನಿನ್ನಂಥ।ರಿರಲು ತಾಯಂದಿರು। ಇರನು ದುರ್ಜನ ತನಯ ॥3॥ ಕಲಿಸುವೆನಿವನಿಗೆ। ಇಳೆಯಧಿಪರ ವಿದ್ಯೆ। ತಿಳಿದರೆ ಶುಭದಿನ ವಿಂದು॥ ತಿಳಿಸುವೆ ಹನುಮನ। ಚೆಲುವಿನ ಪ್ರಾರ್ಥನೆ। ಒಲುಮೆ ಸಂಪಾದಿಪುದು ॥4॥

॥ಭಾಮಿನಿ॥

ಉದಯನೊಂದಿಗೆ ರಾಜವಿದ್ಯೆಯ।ಒದಗಿ ಕಲಿಯುತ ಚಂದ್ರನಾಥನು।ಮುದದೊಳಿರ ಲಾ ಚಂಡಕೀರ್ತಿಯ ಗುಪ್ತಚಾರಕನು॥ ವಿಧ ವಿಧದ ವಾರ್ತೆಗಳನರಿಯುತ।ಲದನು ಅರುಹಲಿಕೆನುತ ಬಂದನು। ಪದಕೆ ಮಣಿಯುತಲೆಂದ ತಿಳಿದುದ ನಿಂತು ಸೊಗಸಿನಲಿ ॥1॥

॥ರಾಗ॥ ಮುಖಾರಿ॥ ಏಕ॥

ವಾರ್ತೆಯ ನರುಹಲು ಬಂದೆ॥ ತಿಳಿದುದ ಚಂಡ॥ ಕೀರ್ತಿರಾಯರೊಳಾನಿಂದೆ॥ ಧರೆಯೊಳು ನಾನಾ। ತರ ವೇಷವನಾ। ಧರಿಸುತ ಚರಿಸುತ। ಅರಿತ ಸುದ್ದಿಯನ। ಅರುಹಲಿಕದು ಘನ। ಧರೆಯದು ಚಂದನ। ಪುರ ದೇವರಸನ। ಅರಸಿಯಿರ್ಪುದನ ॥1॥ ಮಂದಾರ ಪುರದ ಸೀಮೆಯೊಳು॥ಇರುವದು ಮಹ॥ ಚಂದನದಾ ಕಾಡಿನೊಳು।ಹೊಂದಿಕೊಂಡಿಹುದು। ಒಂದಾಶ್ರಮವದು। ಇಂದು ಹನುಮ ದಾ।ಸೆಂದು ಪೆಸರಮುನಿ।ಮಂದಿರದೊಳಗತಿ। ಚಂದದಿ ಸುರಸತಿ।ಯಂದದೊಳಿಹಳತಿ।ಯಂದ ಪದ್ಮಾವತಿ ॥2॥

॥ರಾಗ॥ಭೈರವಿ॥ಏಕ॥

ಗುಪ್ತಚರನ ನುಡಿಕೇಳಿ॥ಬಲು॥ತೃಪ್ತಿಯ ಮನದೊಳು ತಾಳಿ॥ಬಪ್ಪಳೆ ಅಣ್ಣನ ಮನೆಗೆ॥ಅ॥ತಪ್ಪ ಮೊದಲೆ ನಾ ಪೋಗೆ ॥1॥ ಕಳುಹಿದನಗ್ರಜನೆನುತ॥ನಾ॥ನೊಲಿಸುತಾಕೆಯಕರೆ ತರುತ॥ಲಲನೆ ಚೆನ್ನಿಯ ಗೃಹದಲ್ಲಿ॥ಇಡು॥ತಲಿ ಭೋಗಿಪೆನವಳಲ್ಲಿ ॥2॥ ಗಾಡಿಯ ಕಟ್ಟಿಸಿ ಪೊರಟ॥ಮಲೆ॥ನಾಡಿನ ಸೀಮೆಗಂದದಧಟ॥ ಕೇಡಿಗನತಿಹಂಕಾರಿ॥ಇವ॥ರೂಢಿಗೆ ಬಲು ಹೆಮ್ಮಾರಿ॥3॥

॥ಭಾಮಿನಿ॥

ಇತ್ತ ಗುರುಕುಲದಲ್ಲಿ ಉದಯಾ।ದಿತ್ಯನುತ್ಸಾಹದೊಳು ತಾನುಸ।ಮಸ್ತವಿದ್ಯೆಯ ಕಲಿತನಾವರ ಹನುಮ ದಾಸರೊಳು॥ಒತ್ತಿಗಿರುತಿಹ ಚಂದ್ರನಾಥನೊ।ಳಿತ್ತದಾವುದೊಪಾಶ ಅಣ್ಣನೆ।ನುತ್ತರಿಯನವ ತಮ್ಮನೆಂಬುದದರಿಯ ದೀತನಿಗೆ॥1॥

॥ರಾಗ॥ ಸೌರಾಷ್ಟ್ರ॥ ತ್ರಿವುಡೆ॥

ವರುಷ ವಿಂಶತಿ ಪ್ರಾಯ ಯುವಕನು।ಹಿರಿಯ ನಾಲ್ಕಕೆ ಚಂದ್ರನಾಥನು।ಧರೆಯೊಳುದಿಸಿದ ಚಂದ್ರಸೂರ್ಯರ।ತೆರದೊಳಿರಲು ॥1॥ ಗುರುವು ಕಲಿಸಿದವಿದ್ಯೆಯನುತಾ।ಪರಿಕಿಸಿದ ನೊಂದಿವಸವೀರ್ವರ।ಕರಚಮತ್ಕೃತಿ ಕಂಡು ಮೆಚ್ಚುತ।ಹರುಷದಿಂದ ॥2॥ ಒರೆದ ಹನುಮನ ದಯದಿ ವಿದ್ಯೆಯ।ಅರುಹಿದೆನು ಶೀಘ್ರದಲಿ ಸಾಧಿಸಿ।ಗುರುತನಕೆ ಸಾರ್ಥಕತೆ ತಂದಿರಿ। ಮರುತ ಸುತನ ॥3॥ ಕರುಣೆ ನಿಮ್ಮಯ ಮೇಲಿರಲಿ ಅನ।ವರತವೆನ್ನುತ ಹರಸಲೆರಗುತ।ಅರುಹಿದರು ಗುರುದಕ್ಷಿಣೆಗೆಏನ್ತರಲಿಎನುತ ॥4॥ ಪರಿಸರವ ರಕ್ಷಿಪುದು ಧರ್ಮವ।ಪೊರೆದರದೆ ಎನಗಹುದು ದಕ್ಷಿಣೆ।ಇರದು ಬೇರೊಂದಾಸೆ ಮಾರುತಿ। ಕರುಣೆಯಿರಲು ॥5॥

॥ಭಾಮಿನಿ॥

ಹರಸುತುದಯಾದಿಗಳ ಕಳುಹಲು।ಅರಸಿ ಪದ್ಮಾವತಿಯು ವನದಲಿ।ಚರಿಸಿ ಪೂಜೆಗೆ ಸುಮವ ಸಂಚಯಿಸುತ್ತಿರುವ ಸಮಯ॥ದೂರದಿಂದಲಿ ಚಂಡಕೀರ್ತಿಯು।ಗುರುತಿಸುತ ಬಳಿ ಬಂದು ನಿಲ್ಲುತ।ಹರುಷದಿಂದಾಕೆಯನು ನುಡಿಸಿದ ನಿಂತು ಕಪಟದಲಿ ॥1॥

॥ರಾಗ॥ಕಾಫಿ॥ಅಷ್ಟ॥

ಅತ್ತಿಗೆ ನೀನು ಪದ್ಮಾವತಿ॥ನಾನಿ॥ನ್ನತ್ತಿಗೆ ಯನುಜನಾಗಿಹ ಚಂಡಕೀರ್ತಿ॥ವಾರ್ತೆಯ ನರಿತು ನಿನ್ನಣ್ಣ॥ಅರ॥ಸುತ್ತಲಿ ಕರೆತರೆ ಕಳುಹಿದನೆನ್ನ॥1॥

॥ರಾಗ॥ಕೇದಾರಗೌಳ॥ಅಷ್ಟ॥

ಅಣ್ಣನ ಮನೆ ದಾರಿ।ಯನ್ನರಿತಿದ್ದರು।ಮುನ್ನ ನಾ ಬರಲಿಲ್ಲ॥ ಬನ್ನ ಬವಣೆ ಬರ।ಲೆನ್ನ ಬಂಧುಗಳನು। ಇನ್ನು ನಾ ಸೇರಲ್ಲ ॥1॥

॥ರಾಗ॥ಕಾಫಿ॥ಅಷ್ಟ॥

ಎಲ್ಲರಂತಲ್ಲ ನಿನ್ನಣ್ಣ॥ಗುಣ॥ದಲ್ಲಾತನು ಚೆಲು ಬಂಗಾರ ಕಾಣ॥ ಸುಳ್ಳನಾಡೆನು ಕೇಳು ಬಲು ದುಃಖ ಪಡುವ॥ ಚಿಂತೆ॥ಯಲ್ಲಿಯೆ ಅರ್ಧ ದೇಹವನು ತಾಳಿರುವ॥

॥ರಾಗ॥ಕೇದಾರಗೌಳ॥ಅಷ್ಟ॥

ಬಲ್ಲೆನು ಅಣ್ಣನ।ಒಳ್ಳೆಗುಣಗಳೆ।ನ್ನಲ್ಲಿಹುದತಿ ಪ್ರೀತಿ॥ಎಲ್ಲವ ಕಳಕೊಂಡು।ಉಳ್ಳವನೆನುತಲಿ।ಅಲ್ಲಿರೆ ಅಪಕೀರ್ತಿ ॥1॥

॥ರಾಗ॥ಕಾಫಿ॥ಅಷ್ಟ॥

ಅವಮಾನವು ಇದು ಸಿಂಧು ಭೈರವನ ॥ತಂಗಿ॥ಬವಣೆಪಡುತ ಊರು ಚರಿಪುದು ಹೀನ ॥ ಜವದಿಂದ ನಿನ್ನನು ಕರೆದೊಯ್ವೆ ನಾನು ॥ ಒಳ್ಳೆ ॥ ಅವಕಾಶ ನಿನಗಿದು ಸೇರೆತವರನು ॥ 1॥

॥ ರಾಗ ಕೇದಾರಗೌಳ ॥ ಅಷ್ಟ ॥

ಕರೆಯಲು ನೀನಾರು । ಬರಿದೇಕೆ ಕಾಡುವೆ । ಬರೆನಣ್ಣ ಸಹ ಬಂದರು ॥ ಅರಿತಿರ್ಪೆ ನಿನ್ನಯ । ಪರಮ ಸದ್ಗುಣಗಳ । ತೆರಳು ಬೇಗನೆ ಸಾರು ॥ 1 ॥

॥ ಭಾಮಿನಿ ॥

ಎನಲು ಕೇಳುತ ಕ್ರೋಧದಿಂದಲಿ । ಜನಪನಾಜ್ಞೆಯು ಎನಗೆನುತಲಾ । ಕ್ಷಣದಿ ಕರ ಪಿಡಿಯುತ್ತಲೆಳೆಯಲು ಬೆದರಿ ಬೊಬ್ಬಿಡುತ ॥ ವನಿತೆ ಮೊರೆಯಿಡಲಾಶ್ರಮದೊಳಿಹ । ತನಯ ರಾಲಿಸುತಾಗ ಬಂದರು । ಇನಿತು ಘಟನೆಯ ಕಂಡು ರೋಷದಿ ಚಂದ್ರ ತಡೆದೆಂದ॥

॥ ರಾಗ ॥ ಪಂಚಾಗತಿ ॥ ಮಟ್ಟೆ ॥

ಫಡಮದಾಂಧ ಮನುಜ ನೀನು । ಅಡವಿಯೊಳಗೆ ಹೆಂಗಸನ್ನು । ತುಡುಕಿ ಎಳೆವ ಧೂರ್ತತನಕೆ । ಕೊಡುವೆ ಶಿಕ್ಷೆಯ ॥ 1 ॥ ಹುಡುಗ ನೀನದಾರು ಘೋರ । ಅಡವಿಯೊಳಗೆ ಅವಿತು ಜನರ । ತುಡುಗು ಮಾಡುವಂತ ಚೋರ । ಬಿಡೆನು ನಿನ್ನನು । 2 ॥ ಕಾಡೆ ನಮ್ಮ ವಾಸಸ್ಥಳವು । ನಾಡ ನಾಗರೀಕತನವು । ನೋಡೆ ನಿನ್ನ ಹೀನ ಗುಣವು । ರೂಡಿ ಮೆಚ್ಚದು ॥ 3 ॥ ನಾರಿಯೀಕೆ ಭಾರಿನಗವ । ಊರಿನಿಂದ ಕದ್ದು ವನವ । ಸೇರಲರಸಿ ಪಿಡಿದು ಒಯ್ವ ಕಾರಣವು ಇದು ॥ 4 ॥

॥ ಭಾಮಿನಿ ॥

ಕೇಳಿ ಕೋಪದಿ ಚಂದ್ರನವನಕ । ಪಾಲಕಿಡೆ ಮುಷ್ಠಿಯೊಳು ಧೂರ್ತಗೆ । ತಾಳಲಾಗದೆ ತಲೆ ತಿರುಗೆ ಧರೆಗೊರಗಿ ಚೇತರಿಸಿ ॥ ಖೂಳ ನೋಡುವ ಹವಣಿಕೆಯೊಳಿರೆ । ಮೂಳನಾತನ ಅರ್ಧ ಮೀಸೆಯ । ಬೋಳಿಸುತ ಕೊರಳಿಡಿದು ದೂಡಿದರಮಿತ ರೋಷದಲಿ ॥ 1 ॥

॥ ರಾಗ ॥ ಸೌರಾಷ್ಟ್ರ ॥ ತ್ರಿವುಡೆ ॥

ಪೆಟ್ಟಿನಾ ಹಂದಿಯೊಲು ಬಲು ಬುಸು । ಗುಟ್ಟು ತೈದಿದ ಮನದಿ ಮಸಗುತ । ಒಟ್ಟಿಗಿಹನವಳಣುಗ ನಾತನ । ಹುಟ್ಟಡಗಿಪೆ ॥ 1 ॥ ಕಿರಿಯ ಪ್ರಾಯದಿ ಪುರವ ಬಿಟ್ಟಿರೆ । ಅರಿಯದೀತಗೆ ಸಮರ ವಿದ್ಯೆಯು । ತರಿಯದಿರೆ ನಾ ಯುಕ್ತಿಯಿಂದಲಿ । ತರಳನನ್ನು ॥ 2 ॥ ಎಂದು ಮನದೊಳುಪಾಯ ಯೋಚಿಸಿ । ಬಂದನಕ್ಕನ ಮನೆಗೆ ಜವದಲಿ । ಹೊಂದಿದವ ಮಾನವನು ತೀರಿಸ । ಲೆಂದು ಕೀರ್ತಿ ॥ 3 ॥

॥ ರಾಗ ॥ ಬೇಗಡೆ ॥ ತ್ರಿವುಡೆ ॥

ಸಿಂಧು ಭೈರವನಾತ್ಮಜೆಯು ಚಂದ್ರಿಕೆಯು । ಸುಂದರ ಯುವತಿಯು ವರುಷ ಷೋಡಷಿಯು॥ ತಂದೆಗೋರ್ವಳೆ ಮಗಳೆಂಬ ಮಮತೆಯು । ನಂದನೆಗತಿ ಮೋಹದಿಂದ ನೃಪತಿಯು ॥ ಚಂದದಿ ಬಿಲು ವಿದ್ಯೆ ಸಮರದ ಕಲೆಯ । ಹೊಂದಿಸಿ ಕಲಿಸಿದನು ಗಜಾಶ್ವ ಸವಾರಿಯ ॥ ಒಂದು ಬಿಡದೆ ಕಲಿತಿರುವ ಸಂಭ್ರಮದಿ । ಬಂದಳು ದ್ಯಾನಕೆ ಸಖಿಯ ಸಂಗಡದಿ । ತಂದಿರೆ ಬಿಲು ಬಾಣ ವೀರ ಭೂಷಣದಿ ॥ 1 ॥

॥ ರಾಗ ॥ ಸೌರಾಷ್ಟ್ರ ॥ ತ್ರಿವುಡೆ ॥

ಕಲಿತ ವಿದ್ಯೆಯ ಪರಿಕಿಸುವೆನೆಂ । ದುಲಿವಗಿಳಿವಿಂಡಿಂಗೆ ಹೊಡೆದಳು । ಇಳೆಗುದುರೆ

ಕಾಣುತಲಿ ಮರುಕದಿ । ಗೆಳತಿಯಾಗ

॥ **ರಾಗ** ॥ **ಸಾಂಗತ್ಯ** ॥ **ರೂಪಕ** ॥

ಅರಗಿಣಿಗಳಿಗೆ ನೀ । ಶರ ಪೂಡಲೇತಕೆ । ಇರದದರಿಂದಲುಪಟಳವು ॥ ಅರಿಗಳ ಎದೆ ಸೀಳ । ಲಿರುವಂತ ಶಸ್ತ್ರದಿ । ತರಿದರೇ ನಿರದು ಸಾಹಸವು ॥ 1 ॥

॥ **ರಾಗ** ॥ **ಸೌರಾಷ್ಟ್ರ** ॥ **ತ್ರಿವುಡೆ** ॥

ಗಗನದಲಿ ಹಾರಾಡುತಿರುತಿಹ । ಖಗವ ನಾ ಹೊಡೆದುರುಳಿಸಿರ್ಪೆನು । ಬಗೆದ ಡೆನ್ನಯ ಗುರಿಯ ನಿಖರತೆ । ಸೊಗಸದೇನೆ ॥ 1 ॥

॥ **ರಾಗ** ॥ **ಸಾಂಗತ್ಯ** ॥ **ರೂಪಕ** ॥

ಗುರಿಯ ಪರೀಕ್ಷೆಗೆ । ಇರದೇನು ಪರ್ಯಾಯ । ನಿರಪರಾಧಿಗೆ ಶಿಕ್ಷೆ ಏಕೆ । ಕರುಣೆಗದರ್ಹವು । ಇರಲು ಸ್ವಚ್ಛಂದದಿ । ಪರಿಸರಕತಿ ಶೋಭೆನಿಜಕೆ ॥ 1 ॥

॥ **ರಾಗ** ॥ **ಸೌರಾಷ್ಟ್ರ** ॥ **ತ್ರಿವುಡೆ** ॥

ತಿನಲು ಕೋಳಿಯ ಕೊಲುವದಿಲ್ಲವೆ । ಉಣುವೆವದ ಚಪ್ಪರಿಸಿ ಕರುಣೆಯು। ಗಿಣಿಗೆ ಮಾತ್ರವೆ ನುಡಿಯದಿರು ನೀ । ನೆನಗೆ ನೀತಿ ॥ 1 ॥ ಬಂದನಲ್ಲಿಗೆ ಚಂಡಕೀರ್ತಿಯು । ಚಂದದಿಂ ಮುಖಕ್ಷೌರ ವಿರಚಿಸು । ತಂದು ಕಾಣುತ ಚಂದ್ರಿಕೆಯು ನಗು । ತೆಂದಳಿಂತು ॥ 2 ॥

॥ **ರಾಗ** ॥ **ಕೇದಾರಗೌಳ** ॥ **ಅಷ್ಟ** ॥

ಅರರೆ ಏನಿದು ಹೊಸ । ಪರಿ ಮಾವ ಮುಖದೊಳು । ಬರಿದಾಗಿ ಮೀಸೆಗಳು ॥ ಇರದು ಮೋರೆಯ ಕಳೆ । ಇರಲು ಚಿಂತೆಯ ಸೆಲೆ । ಅರುಹು ಕಾರಣವೆನ್ನೊಳು ॥ 1 ॥ ॥ ರಾಗ ॥ ಕಾಂಬೋಧಿ ॥ ಝಂಪೆ ॥ ಗಲಿಬಿಲಿಯಗೊಳು ತೆಂದ । ಲಲನೆಯೊಳು ಬಲುತುರಿಕೆ । ಬಳಲಿಸಿತು ತೆಗೆದೆ ಮೀಸೆಯನು ॥ ಬಿಲು ವಿದ್ಯೆಗಳ ಸಹಿತ । ಹಲವನಭ್ಯಾಸಿಸಿಹೆ । ಭಲೆ ಮೀರಿಸಿದೆ ಪುರುಷರನ್ನು ॥ 1 ॥

॥ **ರಾಗ** ॥ **ಕೇದಾರಗೌಳ** ॥ **ಅಷ್ಟ** ॥

ಕಲಿತಿಹೆನಾದರೆ ತಿಳಿದುದ ಪರಿಕಿಸೆ । ಒಲಿದಿಲ್ಲವವಕಾಶವು । ಚೆಲುವಿನ ಶುಕ ಪಿಕ । ಗಳೆ ಹೊರತಿರದನ್ಯ । ಕಲಿತೇನು ಸಾರ್ಥಕವು ॥ 1 ॥

॥ **ರಾಗ** ॥ **ಕಾಂಬೋಧಿ** ॥ **ಝಂಪೆ** ॥

ಒದಗಿಸುವೆನವಕಾಶ । ಸುದತಿ ಮೃಗಸಂಕಾಶ । ಕಿದಿರಿಲ್ಲವವಕೆ ಕಾಡಿನೊಳು ॥ ಮದದಿ ಕೃಷಿ ಭೂಮಿಯನು । ಸದೆದು ಕೆಡಿಸುವದನ್ನು । ಮುದದಿ ಕೊಲು ಬೇಟೆಯಾಟದೊಳು ॥ 1 ॥

॥ **ರಾಗ** ॥ **ಮಾರವಿ** ॥ **ಏಕ** ॥

ಅಡವಿಯ ಮೃಗಗಳ । ಗಡಣವ ಬಾಣದಿ । ಹೊಡೆಯುವದೇನು ಘನ । ಪೊಡವಿಪರೊಳು ಬಂ । ದಡಸಲು ಸಮರವು । ಕೆಡಹುವೆ ನೋಡೆನ್ನ ॥ 1 ॥

॥ **ರಾಗ** ॥ **ಕಾಂಬೋದಿ** ॥ **ಝಂಪೆ** ॥

ಹುಡುಗರಿಹರೀರುವರು । ಅಡವಿಯೊಳ ಬಲುಚೋರು । ಬಿಡರು ಬೇಟೆಯನಾಡಲಾರು ॥ ಕುಡಿಯ ಕುಲಜರ ಗಡಣ । ಒಡನಿಹುದು ಬಲು ತರುಣ । ಪಡೆಯ ಮರ್ದಿಸು ಪುಂಡರನ್ನ ॥ 1 ॥

॥ **ರಾಗ** ॥ **ಮಾರವಿ ಏಕ** ॥

ಬಿಡು ಬಿಡು ಮಾತುಳ । ಕಡುಹಿನ ಮೃಗಗಳ । ಪುಡುಕುತ ಬೇಟೆಯೊಳು ॥ ತುಡುಕುತ ಕೊಲುವೆನು । ತಡೆವರಕಿನಿಸನು । ಬಡಿದಿಳಿಸುವೆ ನಾನು ॥ 1 ॥

॥ **ಭಾಮಿನಿ** ॥

ಎನುತ ಭಾಷೆಯನಾಡಿ ಮೃಗಯಕೆ । ಅನುಮತಿಯ ಪಡೆಯುವರೆ ತನ್ನಯ । ಜನಕನಂಘ್ರಿಗೆ ಬಂದು ಮಣಿದಳು ಕಂಡು ಭೂಪತಿಯು ॥ ಅಣುಗಿಯನು ಪಿಡಿದೆತ್ತಿನೆತ್ತಿಯ । ಜನಪನಾಘ್ರಾಣಿಸುತ ಕುವರಿಯ । ಅನುನಯದಿತಾ ನುಡಿಸಿದನು ಸಂಭ್ರಮವಿದೇನೆನುತ ॥1॥

॥ **ರಾಗ** ॥ **ಸೌರಾಷ್ಟ್ರ** ॥ **ತ್ರಿವುಡೆ** ॥

ತನುಜೆ ಮೋಹದ ವನಜೆ ಚಂದ್ರಿಕೆ । ಮನದೊಳತ್ಯುತ್ಸಾಹವೇತಕೆ । ಘನದ ಯೋಚನೆ ಏನು ಬೇಡಿಕೆ । ಎನುವದೆನಗೆ ॥ 1 ॥

॥ **ರಾಗ** ॥ **ನವರೋಜು** ॥ **ಏಕ** ॥

ತಂದೆಯ ಲಾಲಿಸಿ ಕೇಳು ॥ ನುಡಿ ॥ ಯೊಂದನೊರೆಯುವೆ ಮಗಳು ॥ ಹೊಂದಿಸಿ ಶಬರರ। ಮಂದಿಯ ವೀರರ । ಒಂದಿಗೆ ಬೇಟೆಗೆ । ಇಂದೈದುವೆನು ॥ 1 ॥

॥ **ರಾಗ** ॥ **ತಾಳ** ॥

ಹುಡುಗಿಯು ನೀನೆಂಬುದ ಮರೆತಿಹೆಯ । ಹುಡುಗಾಟವಲ್ಲವು ಕೇಳಮ್ಮ ಮೃಗಯ ॥ ಅಡವಿಯೊಳಗೆ ಸಿಂಹ ಹುಲಿ ಚಿರತೆಗಳು । ಕಡು ಕ್ರೂರ ಕಾಡ್ಕೋಣ ಇಹವು ಆನೆಗಳು ॥

॥ **ರಾಗ** ॥ **ನವರೋಜು** ॥ **ಏಕ** ॥

ಹೆಣ್ಣು ನಾನಾಗಿರಲು ॥ ಧುರ ॥ ವನ್ನು ನೀ ಕಲಿಸಿರಲು ॥ ಚೆನ್ನಾಗಿಯೆ ಶರ । ವನ್ನು ಜೋಡಿಸುತಲಿ । ಇನ್ನಭ್ಯಾಸಿಪೆ । ನೆನ್ನುತ ಪೊರಟಿಹೆ ॥ 1 ॥

॥ **ರಾಗ** ॥ **ತಾಳ** ॥

ಏಕ ಮಾತ್ರಳು ಪುತ್ರಿ ನೀನಾದ್ದರಿಂದ । ನಾ ಕಲಿಸಿದೆ ಯುದ್ಧ ವಿದ್ಯೆ ಮುದದಿಂದ ॥ ಜೋಕೆಯಿಂದೀ ಪುರ। ವಾಳಲು ಮುಂದೆ । ಸಾಕರಿಪುದು ವೈರಿಗಳ ಗೆಲಲೆಂದೆ ॥ 1 ॥

॥ **ರಾಗ** ॥ **ನವರೋಜು** ॥ **ಏಕ** ॥

ಅರಸರಿಗೆ ಬೇಟೆಯದು ॥ ಮಿತ ॥ ವಿರಚಿಸಲು ಧರ್ಮವದು ॥ ಪರಿಕಿಪುದೆನ್ನಯ । ಕರಚಮತ್ಕೃತಿಗಳ । ಹರುಷದಿ ಜನಕನೆ । ಹರಸಿ ನೀ ಕಳುಹಿಸು ॥ 1 ॥

॥ **ಭಾಮಿನಿ** ॥

ಸುತೆಯ ಒತ್ತಾಯಕ್ಕೆ ಮಣಿಯುತ । ಪೃಥಿವಿಪತಿ ತಾ ಹರಸಿ ಕಳುಹಲು । ಅತಿಶಯದ ಉತ್ಸಾಹ ದಿಂದಲಿ ಚಂದ್ರಿಕೆಯು ಜವದಿ ॥ ಮಥಿಸೆ ಮಿಗಗಳ ಬೇಡ ಪಡೆಯನು । ಜತೆಗೆ ಸಖಿಯರ ಗಡಣ ಕೂಡುತ । ಸತಿಯು ಧರಿಸುತ ವೀರಕಳೆಯನು ಮನಕೆ ನಡೆತಂದು ॥

॥ **ರಾಗ** ॥ **ಮುಖಾರಿ** ॥ **ಏಕ** ॥

ಬೇಟೆಯ ನಾಡಿದಳು ॥ ಚಂದ್ರಿಕಾದೇವಿ ॥ ಬೇಟೆಯ ನಾಡಿದಳು ॥ ಪ ॥ ಕಾಡಿನ ಮೃಗಗಳ। ನೋಡಿಯು ಅರಿಯದ । ಗೂಡೆಯು ಬೆದರದೆ । ಹೂಡುತ ಶರವನು । ಓಡುವ ಹಂದಿಯ । ನೀಡಾಡುತ ಬಲು । ಝಾಢಿಸಿ ವನವನು । ಗಾಢ ಸಂಭ್ರಮದಿ ॥ 1 ॥ ಪರುಷರಿಗಿಂತೇನ್ಕಮ್ಮಿ ॥ ಎನ್ನುತ ಸತಿ । ಯರು ಬಿಲು ಬಾಣವ ನೆಮ್ಮಿ ॥ ಕರಡಿ ಕಾಡ್ಕೋಣ। ಚಿರತೆಯು ಹರಿಣ । ಶರಭ ಶಾರ್ದೂಲ । ಕರಿಯಲಾಂಗೂಲ । ನರಿ ತೋಳಗಳು । ಇರೆ ಮುಸುವಗಳು । ತರ ತರ ಖಗಗಳು । ತರಿಯುತಲವಳು ॥ 2 ॥

॥ **ಭಾಮಿನಿ** ॥

ತರಿದು ಬಲು ಮೃಗಗಳನು ಚಂದ್ರಿಕೆ । ಹರುಷದಿಂನಿಂತಿರುವ ಸಮಯದಿ । ಭರದೊಳೋಡುತ ಜಿಂಕೆ ಬರೆ ಕಾಣುತ್ತ ಶರಹೂಡೆ ॥ ಸರಳು ನಾಂಟಲು ವೇದನೆಂಯೊಳತಿ । ಚುರುಕಿನಿಂದೋಡುತಲಿ ಉದಯನ । ಚರಣದೆಡೆಯಲಿ ಬೀಳೆ ಕಾಣುತ ಮರುಕದಿಂದದಕೆ॥

॥ **ರಾಗ** ॥ **ಸೌರಾಷ್ಟ್ರ** ॥ **ತ್ರಿವುಡೆ** ॥

ಶರವ ಕೀಳುತ ಗಾಯಕೌಷಧಿ । ಎರೆಯುತಲಿ ಸಾಂತ್ವನವ ಗೊಳಿಸುತ । ಭರಿತ ರೋಷದೊಳೆಂದ ತನ್ನೊಳು । ಉರಿಮಸಗುತ ॥ 1 ॥ ಅರರೆ ವನದೊಳು ಸ್ವೇಚ್ಛೆಯಿಂದಲಿ । ಚರಿಸಿ ಬದುಕುವ ಸಾಧು ಹರಿಣವ । ಸರಳಿನಿಂದಿರಿದಾತ ನಾರವ । ಅರಿಯದೀಗ ॥ 2 ॥ ಮನುಜರಂತೆಯೆ ಬದುಕೆ ಹಕ್ಕಿದೆ । ವನದ ಪ್ರಾಣಿ ಸಮೂಹಕೆಂದಿಗು । ಇನಿತು ಘಾಸಿಯ ಮಾಣ್ದನನು ಬಿಡೆ। ಎನುತ ಜವದಿ ॥ 3 ॥ ಕರೆದು ಗೆಳೆಯರ ಸಹಿತ ಪೊರಡಲು । ತರುಣಿಯರು ಅರಸುತ್ತ ಜಾಡನು ಬರುತ ಕಂಡರು ಗಾಯಗೊಂಡಾ । ಹರಿಣವನ್ನು ॥ 4 ॥ ಕುಡಿಯ ತರುಣರ ಆಶ್ರಯದೊಳಿರೆ । ಹುಡುಗಿ ಗೆಳತಿಯ ಕರೆದು ನುಡಿದಳು । ಹೊಡೆದೆ ನಾನಿದ ತಿಳಿಸಿ ಮಿಗವನು । ಕೊಡಲು ಪೇಳು ॥ 5 ॥ ಎಂದಡೊಪ್ಪುತ ಗೆಳತಿ ಮಾಲತಿ । ಬಂದು ಪೇಳ್ದಳು ಸಿಂಧು ಭೂಪನ । ನಂದನೆಯು ಶರಪೂಡಲೀ ಮೃಗ । ಬಂದು ದಿಲ್ಲಿ ॥ 6 ॥ ನಾವು ಹೊಡೆದಿಹ ಜಿಂಕೆಯನು ಎಮ । ಗೀವುದೀಗಲೆ ಎನಲು ಕೇಳುತ । ಸಾವಧಾನದಿ ಗೆಳೆಯ ಚೆನ್ನನು । ಆ ವನಿತೆಗೆ ॥ 7 ॥

॥ **ರಾಗ** ॥ **ಕೇದಾರಗೌಳ** ॥ **ಅಷ್ಟ** ॥

ಒರೆದನು ಕಾಡೊಳು । ಚರಿಸುವ ಮೃಗಗಳ । ತರಿಯುವದನ್ಯಾಯ ॥ ತರುಣಿಯರಿರ ನೀವು। ಪರುಷರ ತೆರದಲಿ । ವಿರಚಿಸುವಿರೆ ಬೇಟೆಯ ॥ 1 ॥ ನ್ಯಾಯ ವಿಮರ್ಶೆಗೆ । ನೀ ಯಾರು ಎರಳೆಯ । ಸಾಯಕದಿಂ ಹೊಡೆದ । ನಾಯಕಿ ಚಂದ್ರಿಕೆ । ತಾಯೆಂದಳೆನ್ನೊಳು। ಕಾಯದೀವುದು ನೀವದ ॥ 2 ॥ ಯಾರೆಂದರು ಎಮ್ಮ । ಸೇರಿದ ಮಿಗವನು । ಆರಿಗೀಯೆ ವಿನ್ನು ॥ ಭಾರಿ ಗಾಯದಿ ರಕ್ತ । ಸೋರಿಯೆ ಸೊರಗಿದೆ । ನಾರಿಕೊಡೆವು ಇದನು ॥ 3 ॥

॥ ಭಾಮಿನಿ ಅರ್ಧ ॥

ಎಂದೆನಲು ನಡೆತಂದು ಒಡತಿಗೆ । ಎಂದಳೆಲ್ಲವ ಕೇಳಿಕೋಪದಿ । ಚಂದ್ರಿಕೆಯು ತಾ ಬಂದು ಗರ್ಜಿಸಿ ನುಡಿದಳವರೊಡನೆ ॥ 1 ॥

॥ ರಾಗ ॥ ಭೈರವಿ ॥ ಏಕ ॥

ಘಡ ಕುಡಿಯರ ಹೃದಗಳೆ ॥ ನಾ ॥ ಹೊಡೆದಿಹ ಜಿಂಕೆಯ ನಿಲ್ಲೆ ॥ ಪಿಡಿದಿಟ್ಟುದು ಏನ್ನ್ಯಾಯ ॥ ಅದ ॥ ಕೊಡದಿರೆ ಅದು ಅನ್ಯಾಯ ॥ 1 ॥ ನೋಡಿದನುದಯ ತಾನವಳ ॥ ಕುಷಿ ॥ ಗೂಡುತ ಗತ್ತಿಗೆ ಬಹಳ ॥ ರೂಢಿಯೊಳಗೆ ಬೇಟೆಯನು ॥ ಹೆ ॥ ಣ್ಣಾಡಿದುದನು ಕಂಡಿರೆನು ॥ 2 ॥ ಪೃಥ್ವಿಯ ನಾಳುವ ನೃಪರು ॥ ಮೃಗ ॥ ಯಾತ್ರೆಯ ಕೈಗೊಳ್ಳುವರು ॥ ಕ್ಷತ್ರಿಯ ನಾರಿಯು ನಾನು ॥ ಅರ ॥ ಸೊತ್ತಿಗೆ ಮುಂದೆನಗಿನ್ನು ॥ 3 ॥ ಕ್ರೂರ ಮೃಗಗಳಿರೆ ವನದಿ ॥ ನರ ॥ ಬಾರನು ಕಾಡಿಗೆ ಭಯದಿ ॥ ಘೋರಾರಣ್ಯವು ಇರಲು ॥ ಅದು ॥ ಊರಿಗೆ ಹಿತ ಮಳೆ ತರಲು ॥ 4 ॥ ನೀತಿಯು ಸಾಕೆಲೊ ನಿನ್ನ ॥ ನಾ ॥ ಘಾತಿಸಿರುವ ಮಿಗವನ್ನ ॥ ನೀ ತಕ್ಷಣವೀಯವದು ॥ ಬಾ ॥ ಯ್ಮಾತಿನೊಳಿನ್ನೇನಹುದು ॥ 5 ॥

॥ ರಾಗ ॥ ಕಾಂಬೋಧಿ ॥ ಝಂಪೆ ॥

ಕೊಡೆನು ಮೃಗವನು ನಿನಗೆ । ಅಡವಿ ಪ್ರಾಣಿಗಳೆನಗೆ । ಒಡಹುಟ್ಟಿದವುಗಳಂತಿಹುದು ॥ ಹುಡುಗಿ ನೀನೆನು ತಾನು । ತಡೆದಿಹೆನು ಕೋಪವನು । ಪಡೆಯೊಡನೆ ಬೇಗ ನಡೆಯುವುದು ॥ 1 ॥ ಪೊಡವಿಪಾತ್ಮಜೆ ಯೆನ್ನ । ಹುಡುಗಿ ಎಂಬೆಯ ನಿನ್ನ । ಬಡಿವೆ ಸಮರದಿ ಕಣೆಯೊಳೀಗ ॥ ತಡೆಯೆಧನು ಶರವಿರದೆ । ಕುಡಿಯ ನೆನ್ನೊಳು ಧುರದೆ । ಪೊಡವಿಗುರುಳುವೆ ನೀನು ಬೇಗ ॥ 2 ॥ ಎನಲು ಕವಣೆಯ ತೆಗೆದ । ತುಣುಕು ಕಲ್ಲನು ಪಿಡಿದ । ಘನದಿ ಗುರಿಯಿಟ್ಟು ತಾ ಹೊಡೆದ ॥ ಕ್ಷಣಕವಳ ಕರದಿಂದ । ಧನುಶರವು ಜಾರೆ ಮದ । ವನಿತೆಯತಿಯವಮಾನದಿಂದ ॥ 3 ॥ ಹೆಡೆ ತುಳಿದ ಫಣಿಯಂತೆ । ಪಡೆಯೊಡನೆ ಮರಳಿದಳು । ಮಡದಿ ಕೆರಳುತ ಕೋಪದಿಂದ ॥ ಕುಡಿಯ ಹುಡುಗನು ಎನ್ನ । ಕಡಿಯೆ ಧನು ಶರವನ್ನ । ಪೊಡವಿಯೊಳು ಬದುಕಲೇನಂದ ॥ 4 ॥

॥ ಭಾಮಿನಿ ॥

ಬುಸುಗುಡುತ ಲೈತರುತ ಚಂದ್ರಿಕೆ । ವಸತಿಯೊಳಗಿರೆ ಚಂಡಕೀರ್ತಿಯು । ಸೊಸೆಯ ಕಾಣುತ ನುಡಿಸಿದನು ಮೃಗಯಾತ್ರೆಯಾ ಪರಿಯ । ಹೊಸತು ಅನುಭವ ಬೇಟೆಯಲಿ ಮೃಗ । ವಿಸರವನು ಸವರಿದೆಯ ಪೇಳೆನೆ । ವಿಷಯವರುಹುತ ನುಡಿದಳತಿ ಕೋಪದಲಿ ಭಾಷೆಯನು ॥ 1 ॥

॥ ರಾಗ ॥ ಕಾಂಬೋಧಿ ॥ ಝಂಪೆ ॥

ಕಾಡಮನುಜನುಗೈದ । ಗಾಢದಪಮಾನ ದಾ । ಸೇಡ ತೀರ್ಚದೆ ಪೋದರಾನು ॥ ರೂಢಿಪಾತ್ಮಜಳಹೆನೆ । ಮಾಡುವೆನು ಶಾಸ್ತಿಯನು । ನೋಡುತಿರಿ ಮಾವ ನೀವಿದನು ॥1॥

॥ ರಾಗ ॥ ಸೌರಾಷ್ಟ್ರ ॥ ತ್ರಿವುಡೆ ॥

ಎನಲು ನುಡಿದನು ಚಂಡಕೀರ್ತಿಯು । ವನಿತೆಯವನನು ಪಾಯದಿಂದಲಿ । ಮನೆಗೆ ಬರಿಸುತ ಶಾಸ್ತಿಎಸಗಲು । ನಿನಗೆ ಸುಲಭ ॥ 1 ॥ ಒರೆವೆ ನಾನದ ಕೊಂದು ಕಾರ್ಯವ ।

ತರುಣಿ ನೀವನ ಕೇಳಿಗೈದುತ । ಮರುಳು ಗೊಳಿಸಾತನನು ಪುರಕೈ । ತರುವ ತೆರದಿ ॥2॥ ತಂದೆಯೊಡನರುಹುತ್ತಲಾತಗೆ । ಹೊಂದಿಸುವದೈ ಶಿಕ್ಷೆಯನ್ನೆನೆ । ಚಂದ್ರಿಕೆಯು ತಾನೊಪ್ಪಿದಳು ಮುದ । ದಿಂದಲಂದು ॥ 3 ॥

॥ ರಾಗ ॥ ಕೇದಾರಗೌಳ ॥ ಅಷ್ಟ ॥

ಇತ್ತ ಚಿಂತಾಮಣಿ । ಸುತ್ತಿ ದೇಶಗಳನು । ಪೃಥ್ವಿಪ ದೇವರಸನನು । ಪತ್ತೆಯಾಗದೆ ಮರ । ಳುತ್ತಲೈತರುತಿರೆ । ಸ್ವಸ್ಥದಿ ಚಂಡಕೀರ್ತಿ ॥ 1 ॥ ಪಥದೊಳಗಿದಿರಾಗೆ । ವ್ಯಥೆಯಿಂದ ನುಡಿದನು । ಹತಭಾಗ್ಯ ನಾನಾದೆ । ಸತಿ ಸಹಿತಲಿ ನೃಪ । ಮೃತಿಯ ನೈದಿದನೇನೊ । ಪೃಥಿವಿಯೊಳ್ಕಾಣದಾದೆ ॥ 2 ॥ ಮಾರಿ ಹೋದುದು ನೀ । ಬಾರದೆ ಎನ್ನವಿ । ಚಾರ ವಿಮರ್ಶಿಸಲು ॥ ಆರೂ ಸಿಗರು ಪುರ । ಸೂರೆಗೊಳಲು ನಾ । ದಾರಿ ಹುಡುಕುತಿಹೆನು ॥3॥ ಸುಲಭದಲ್ಲವು । ಇಳೆಯಧಿಪತಿ ಬಲು । ಬಲವಂತ ತಾನಹುದು ॥ ತಿಳಿದು ಕಾರ್ಯಗಳನು। ತಿಳಿಸುವೆ ನಿನಗೆನು । ತಲಿ ತೆರಳಿದರಂದು ॥ 4 ॥

॥ ರಾಗ ॥ ಸೌರಾಷ್ಟ್ರ ॥ ತ್ರಿವುಡೆ ॥

ಒಂದು ದಿನ ಸಂಜೆಯಲಿ ಉದಯನು । ಒಂದಿಗಿರುತಿಹ ಗೆಳೆಯರೆಲ್ಲರ । ಚಂದದಿಂದಲಿ ಕರೆಯುತವರೊಡ । ನೆಂದನಿಂತು ॥ 1 ॥

॥ ರಾಗ ॥ ತಾಳ ॥

ಬನ್ನಿ ಬನ್ನಿ ಬನ್ನಿರಣ್ಣ ಆಟವಾಡುವ । ಚಿಣ್ಣಿದಾಂಡು ಕವಣೆಕೋಲು । ಎಲ್ಲರಾಡುವ ॥ ಬನ್ನಿ ಕಬಡಿ ಯಾಟಕೀಗ ಗುಂಪು ರಚಿಸುವ । ತನ್ನಿ ಕೋಲ ಕೋಲಿನಾಟ ಆಡಿ ನಲಿಯುವ ॥1॥ ॥ ಕೋಲಾಟಪದ ॥ ಮುಕ್ಕಣನೆಲ್ಲರು ಕೊಂಡಾಡಿರೊ ಎಂಬಂತೆ ॥ ಹನುಮಂತನೆಲ್ಲರು ಕೊಂಡಾಡಿರೊ ॥ ನಮ್ಮ ॥ ಮನದಿಷ್ಟ ದೇವನ ಕೊಂಡಾಡಿರೊ । ವನದೊಳು ರಾಮನ ಕಂಡ ॥ ತನ್ನ ॥ ತನುಮನ ಅರ್ಪಿಸಿಕೊಂಡ ॥ ಹನುಮಂತ ॥ ನೀರಧಿ ಮೇಲಕೆನೆಗೆದ ॥ ಲಂಕೆ ॥ ಸೇರಿ ಲಂಕಿಣಿಯನು ಕೊಂದ ॥ ನಾರಿ ಸೀತೆಯ ಗುರುತು ತಂದ ॥ ಹದ ॥ ಮೀರೆ ಲಂಕೆಯ ಸುಟ್ಟು ಬಂದ ॥ ಹನುಮಂತ ॥ ಭಾರಿ ಪರ್ವತ ಹೊತ್ತು ತಂದ ॥ ಅದ ॥ ನೀರಿಗಿಡಲು ಸೇತು ಬಂದ ॥ ಘೋರ ರಕ್ಕಸರನು ತರಿದ ॥ ಬಲು ॥ ವೀರ ಮಾರುತಿ ನೋಡಲೆಂದ ॥ ಹನುಮಂತ ॥ ಸಂಜೀವಿನಿಯ ಮದ್ದು ತಂದ ॥ ನಮ್ಮ ॥ ಅಂಜನೆಯಾ ಮುದ್ದುಕಂದ । ಭಂಜಿಸಿ ದನುಜರ ಕೊಂದ ॥ ಆರಿ ॥ ಗಂಜದ ಧೀರ ತಾನೆಂದ ॥ ಹನುಮಂತ ॥

॥ ರಾಗ ಸೌರಾಷ್ಟ್ರ ॥ ತ್ರಿವುಡೆ ॥

ಚಂದ್ರಿಕೆಯು ಸೇಡನ್ನು ನೆನೆಯುತ । ಲೊಂದು ದಿನ ಗೆಳತಿಯರ ವೃಂದದ । ಒಂದಿಗಾವನದೊಳು ವಿಹಾರಕೆ । ಎಂದು ಮುದದಿ ॥ 1 ॥

॥ ರಾಗ ॥ ಸುರುಟಿ ॥ ಏಕ ॥

ಬಂದಳು ಚಂದ್ರಿಕೆಯು ॥ ಸಖಿಯರ ॥ ವೃಂದದೊಡನೆ ಸತಿಯು ॥ ಮಂದಾರದ ಸುಮ। ಗಂಧವು ಗಮ ಗಮ ॥ ದಿಂದಲಿ ಮುಡಿಯೊಳು । ಚಂದದಿ ಶೋಭಿಸೆ ॥ ಮಾಲತಿ ಜತೆಗಿರಲು ॥ ಗೆಳತಿಯ । ರೋಲಯಿಸುತ ಬರಲು ॥ ಲೀಲೆಯಿಂದಲಿ ವನ । ಕೇಳಿಗೆನುತ

ಗುಣ । ಶೀಲೆಯರೆಲ್ಲರು । ತಾಳಿ ಸಂಭ್ರಮದಿ ॥ 2 ॥ ಅಡವಿಯನೊಳಪೊಗುತ ॥ ಸೊಬಗನು ॥ ಬೆಡಗಿಂದೀಕ್ಷಿಸುತ ॥ ಕುಡಿಯರ ಕೇರಿಯ । ಎಡೆಯೊಳು ಚರಿಸುತ । ಹುಡುಗಿಯರೊಳು ತಾ । ನುಡಿದಳು ಚಂದ್ರಿಕೆ ॥ 3 ॥

॥ ರಾಗ ॥ ತಾಳ ॥

ಗೆಳತಿ ನೋಡೆ ಅಡವಿ ಚೆಲುವ ಎಷ್ಟು ಸೊಬಗಿದೆ । ತಳಿರು ತೋರಣಗಳ ಚಪ್ಪರವನೆ ಹಾಕಿದೆ ॥ ಲಲನೆ ಪ್ರಕೃತಿ ವಧುವಿನಂತೆ ಸಿಂಗರಿಸಿ ದೊಲು । ತಿಳಿಯೆ ಪುರುಷನೊಡನೆ ಮದುವೆ ನಡೆವ ತೆರದೊಳು ॥ ವಿವಿಧ ಸುಮಗಳರಳಿನಿಂತ ಚಂದ ನೋಡದೊ । ತವಕದಿಂದ ಲಾರಡಿಗಳು ರಸವ ಹೀರ್ವದೊ । ನವ ನವೀನ ಬಣ್ಣ ಚಿಟ್ಟೆ ಗಳ ವಿಲಾಸವೆ। ಸವಿದು ಮಧುವನಮಲಿನಲ್ಲಿ ಹಾರುತಿಪ್ಪವೆ ॥ 2 ॥ ಕೆರೆಯ ನೋಡು ತಿಳಿಯ ಜಲವು ಸ್ಫಟಿಕದಂತಿದೆ । ಶರದಿ ಶ್ವೇತ ಹಂಸಗುಂಪು ಈಜುತಿರ್ಪುದೆ ॥ ಬರಿದೆ ಕಾಲ ಕಳೆಯಲೇಕೆ ನೀರಿಗಿಳಿಯುವ । ಹರಿವ ಬೆವರ ತೊಳೆದು ಕೊಳೆಯ ಕಳೆಯೆ ಮೀಯುವ ॥ 3 ॥

॥ ರಾಗ ॥ ನವರೋಜು ॥ ಏಕ ॥

ಲೀಲೆಯೊಳು ಆಡಿದರು ॥ ವನ ॥ ಕೇಳಿಯನು ಸುದತಿಯರು ॥ ಕಾಲನು ಬಡಿಯುತ । ತೇಲುತ ನೀರೊಳು । ತೋಳಲಿ ಜಲವನು । ಸೀಳುತಲೀಜುತ ॥ 1 ॥ ಮುಳುಗುತಲಿ ಕಾಣದೊಲು ॥ ಜಲ ॥ ದೊಳಗೀಜುತ ಬರಲು ॥ ಗೆಳತಿಯ ಕಾಲನು । ಸೆಳೆಯುತ ಬೆದರಿಸಿ। ಕಿಲಕಿಲನಗುತಲಿ । ಲಲನೆಯರೆಲ್ಲರು ॥ 2 ॥

॥ ಭಾಮಿನಿ ॥

ನೀರಿನಾಟವ ನಿಲಿಸಿ ಸತಿಯರು । ಬೇರೆ ಸೀರೆಯ ನುಡುತ ಕುಡಿಯರ । ವೀರತಾನ್ಯೆತಾರ ನೇಕೆಂದೆನುತ ಚಂದ್ರಿಕೆಯು ॥ ಕೇರಿಯುತ್ತಲೆ ನೋಡುತಿರಲೀ । ನಾರಿಯರ ಕಿಲನಗುವ ಕೇಳುತ । ಭಾರಿಯಚ್ಚರಿಯಿಂದಲುದಯನು ಬರುತ ಸಖರೊಡನೆ ॥

॥ ರಾಗ ॥ ಶಂಕರಾಭರಣ ॥ ಮಟ್ಟೆ ॥

ಕಂಡನು ॥ ಉದಯ ॥ ಚಂದ್ರಿಕೆಯನು ॥ ಕಂಡನು ॥ ಪ ॥ ಕಂಡ ಚಂದ್ರಿಕೆಯ ರೂಪವನು ॥ ಮೋಹ । ಗೊಂಡನು ಸೊಬಗಿಗೆ ತಾನು ॥ ಮೊದಲು ॥ ಕಂಡರು ಕೋಪದಿ ॥ ಕಂಡಿರೆ ಚೆಲುವನು ॥ ಖಂಡಿಸೆ ಧನು ನಾಚಿ । ಕೊಂಡು ಪೋಗಿಹಳನು ॥ 1 ॥ ಅಂದು ಓಡಿದ ಆ ಹುಡುಗಿ ॥ ಮತ್ತೆ ॥ ಬಂದಳೇತಕೆ ಇತ್ತ ಬೆಡಗಿ ॥ ನೋಡೆ ॥ ಅಂದೆನ್ನ ಸಾಹಸ ಧುರದಿ ॥ ಕಂ ॥ ಡಿಂದು ಮೋಹದಿ ಬಂದ ತೆರದಿ ॥ ಜತೆ ॥ ತಂದಿಲ್ಲವು ಬಲ ಸುಂದರಿಯರು ಹಲ। ಮಂದಿಯಿರ್ಪರು ಏ । ಕೆಂದು ಗೆಳೆಯನೊಳು ॥ 2 ॥

॥ ರಾಗ ॥ ಸಾಂಗತ್ಯ ॥ ರೂಪಕ ॥

ಬಿಲ್ಲು ಬಾಣದೊಳೆ । ನ್ನಲ್ಲಿ ಸೋತವಳು ಕ । ಣ್ಣಲ್ಲಿ ಗೆಲ್ಲಲು ಬಂದಳೇನು ॥ ಎಲ್ಲಿಯ ಕುಡಿಯರಿ । ನ್ನೆಲ್ಲರಗುವರಿಯು । ಸಲ್ಲದು ಎನೆ ಮಾಲತಿಯನು ॥ 1 ॥

॥ ರಾಗ ॥ ಕೇದಾರಗೌಳ ॥ ಅಷ್ಟ ॥

ಕರೆದೆಂದಳು ಗುಣ । ಕಿರದು ಕುಲವು ಮನ । ಕರಿವುದು ಯೋಗ್ಯತೆಯು ॥ ಅರಗುವರನ ತೆರ । ವಿರೆ ರೂಪ ಪೌರುಷ । ಸರಿಯಪ್ಪುದು ಜತೆಯು ॥ 1 ॥ ಹೆತ್ತವರಿಲ್ಲವೆ । ಪುತ್ರಿಗೆ ಮದುವೆಯ । ಉತ್ತಮನೊಳು ರಚಿಸೆ ವರ್ತನೆ ಚೋದ್ಯವು ಮತ್ತಿವಳಾ ನುಡಿ । ಸತ್ಯವೆಂತರಿವುದು ॥ 2 ॥ ಇರುವನು ರಾಗವ । ನರುಹಿ ಮನದ ಭಾವ । ಅರಿಯದೆ ಹಡೆದರಿಗೆ । ಒರೆದರೇನ್ಫಲವದ । ನರಿಯಲು ಬಂದುದ । ದರಿಯದೆ ಸಖಿ ನಿನಗೆ ॥ 3 ॥

॥ ರಾಗ ॥ ಸಾಂಗತ್ಯ ॥ ರೂಪಕ ॥

ಅನುರಾಗ ವಿಹುದದ । ಜನಕಗೊರೆದು ಮೊದ । ಲನುಕೂಲ ದಿನವ ನಿಶ್ಚೈಸಿ । ಎನಗರುಹಲು ದಿ । ಬ್ಬಣ ಸಹ ಪೋಗದಿ । ಪ್ಪೆನೆ ನಿಮ್ಮೆಲ್ಲರ ಸೇರಿಸಿ ॥ 1 ॥

॥ ರಾಗ ॥ ಕೇದಾರಗೌಳ ॥ ಅಷ್ಟ ॥

ಕಳುಹಿಸಿ ಹಿರಿಯರ । ಲಲನೆಯ ಕೇಳಲಿ । ತಿಳಿಸುವೆ ನಾ ಪಿತಗೆ ॥ ಒಲಿಯುತ ಜನಕನು । ತಿಳಿದೊಳ್ಳೆ ದಿನವನು । ಚೆಲುವಗೀಯುವನೆನ್ನನು ॥ 1 ॥

॥ ರಾಗ ॥ ಸಾಂಗತ್ಯ ॥ ರೂಪಕ ॥

ಕುರುಹೇನು ಮಾತಿಗೆ । ಮರುಳಾಗೆ ಹೆಣ್ಣಿಗೆ । ಬರಿದೆ ನಾಟಕ ನಂಬೆ ನಿದನು ॥ ಹರಳಿನೀ ಉಂಗುರ । ಬೆರಳಿಗಿಡುವೆ ತೋರ । ಲರಿಯದಿರನು ಸತ್ಯ ಪಿತನು ॥ 1 ॥

॥ ಭಾಮಿನಿ ॥

ಎನ್ನುತಾಕೆಯ ಬೆರಳಿನುಂಗುರ । ವನ್ನು ಇತ್ತಳು ಉದಯನಿಗೆ ನಾ । ನಿನ್ನು ತೆರಳುವೆ ಶೀಘ್ರದಿಂದಲಿ ತಂದೆ ತಾಯರನು ॥ ಹೆಣ್ಣು ಕೇಳಲು ಕಳುಹಿ ಗುರುತನು । ಎನ್ನ ಪಿತಗೊಪ್ಪಿಸಲು ನಿಮ್ಮನು । ಮನ್ನಿಸುತ ಕರೆಸುತಲಿ ಮದುವೆಯ ವಿರಚಿಸುವನೆನುತ ॥ 1 ॥ ತೆರಳಲುಉದಯನು ಹರ್ಷದಿಂದಲಿ । ಅರಿಯದವಳಾವಂಚನೆಯ ತಾ । ಬರುತ ಪಿತರೊಡನೊರೆದ ನಡೆದಿಹ ಎಲ್ಲ ಸಂಗತಿಯ । ಬೆರಳಿನುಂಗುರ ವೀಯುತವರನು । ಭರಿತ ಕಾಣಿಕೆ ಸಹಿತ ಕಳುಹಲು। ಭರದಿ ಪೊರಟರು ಮಂದರಾ ಪುರದತ್ತಲತಿ ಜವದಿ ॥ 2 ॥

॥ ರಾಗ ॥ ಸೌರಾಷ್ಟ್ರ ॥ ತ್ರಿವುಡೆ ॥

ಹನುಮ ದಾಸರು ಎಂದ ವಚನವು । ಎನಿತು ಸತ್ಯವದಾಯ್ತು ಕಂದನು । ಜನಪನಾತ್ಮಜನಹುದು ನಿಶ್ಚಯ । ವೆನುತಲವರು ॥ 1 ॥ ಅರಸು ಮಗಳನು ವರಿಸಿದರೆ ಮ । ತ್ತಿರನು ಕೇರಿಯೊಳೆಮ್ಮ ಸಂಗಡ । ಮರೆವನೇ ಸಾಕಿದರ ಸತಿ ಜತೆ । ಗಿರಲು ನಮ್ಮ ॥ 2 ॥ ನಮ್ಮ ಕಂದನ ಗುಣವದರಿಯದೆ । ಸುಮ್ಮನೇಕನು ಮಾನವೆನು ತೆಂ । ಕಮ್ಮ ಸಾಂತ್ವನ ಗೊಳಿಸೆ ನಡೆದರು। ಹೆಮ್ಮೆಯಿಂದ ॥ 3 ॥ ಬರುತಲರಮನೆ ಪೊಗುತಲರಸನ । ಚರಣದೆಡೆಯಲಿ ಕಾಣಿಕೆಗಳನು। ಹರುಷದಿಂದಿರಿಸುತ್ತ ವಂದಿಸೆ । ಪರಿಕಿಸುತಲಿ ॥ 4 ॥ ಯಾರು ನೀವೆಲ್ಲಿಂದ ಬಂದಿರಿ । ಭಾರಿ ಕಾಣಿಕೆಯೇನು ಬಂದಿಹ । ಕಾರಣವ ಪೇಳುವುದು ಎನಲಾ । ಕರಿಯ ನುಡಿದ ॥ 5 ॥

॥ ರಾಗ ॥ ಕಾಂಬೋಧಿ ॥ ಝಂಪೆ ॥

ಅರಸ ಲಾಲಿಸು ನಾನು । ಕರಿಯ ನಾಮಕನಿಹೆನು । ಗುರಿಕಾರನಹೆನು ಕುಡಿಯರಿಗೆ ॥ ತರಳನೋರುವ ವನದಿ । ದೊರಕಿಹನು ಮಮಗೃಹದಿ । ಪೊರೆದಿಹೆವು ಕಾಲಕಾತನಿಗೆ ॥1॥ ಕುಲಕೊಪ್ಪುವಾ ವಿದ್ಯೆ । ಗಳ ಕಲಿಸಲತಿ ಶ್ರದ್ಧೆ । ಯಲಿ ಕಲಿತು ಪ್ರೌಢನಾಗಿಹನು ॥ ಬಲು ಸುಂದರನ ತಮ್ಮ । ಚೆಲುಸುತೆಯು ಮೋಹಿಸಿರೆ । ಲಲನೆಯನು ಕೇಳಬಂದಿಹೆನು ॥ 2 ॥ ಗುರುತಿಗೆನುತಲಿ ಬೆರಳ । ಹರಳನುಂಗುರ ತರಳ । ಗಿರದಿತ್ತು ಬಂದಿರುವ ಮಗಳ ॥ ಕರೆದು ಕೇಳ್ದರೆ ನಿಮಗೆ । ಅರಿಕೆಯಾಗುವ ಹಾಗೆ । ವಿರಚಿಸಿರಿ ಎಂದೆನೆ ನೃಪಾಲ ॥ 3 ॥ ಕೆರಳುತಲಿ ಮಗಳನ್ನು । ಕರೆದು ಕೇಳಿದ ನೀನು । ಮರುಳಾದೆಯೇನು ಕುಡಿಯನಿಗೆ ॥ ಬೆರಳಿನುಂಗುರ ವಿವನ । ಕರಕೆಂತು ಬಂತು ಎನ । ಗರುಹು ಸತ್ಯವನಿರುವ ಹಾಗೆ ॥ 4 ॥

॥ ರಾಗ ॥ ಕಾಂಬೋಧಿ ॥ ಏಕ ॥

ಜನಕ ಇದೇನು ಚೋದ್ಯ ॥ ಇವರಾಡುವ ಮಾತು ॥ ಅನುಮಾನಕೆಡೆಯು ಸದ್ಯ ॥ ವನ ಕೇಳಿಗೆನುತ ಪೋಗಿರೆ ನಾ । ನೆನಿತೊ ಜಾರಿದ ಉಂಗುರ ದೊರೆತುದನ ॥ 1 ॥ ದುರುಪಯೋಗಿಸುತೆನ್ನನು ವರಿಸಲಿಕೆ । ಹಿರಿಯರ ಕಳುಹಿದ ಕುಡಿಯರ ಹೈದ ನಿಜಕೆ ॥ ಅರಗುವರಿಯು ನಾನು ಮಲೆಕುಡಿಯನನು । ವರಿಸುವೆನೇ ನಿನಗನುಮಾನವೇನು ॥ 2 ॥

॥ ರಾಗ ॥ ಸೌರಾಷ್ಟ್ರ ॥ ತ್ರಿವುಡೆ ॥

ತರಳೆಯಾಡಿದ ನುಡಿಯ ಕೇಳುತ । ಅರಸ ಕೋಪದೊಳೊರೆದ ಕಾಡಿನೊ । ಳಿರುವರಿಗೆ ಮಮ ಮಗಳ ಕೇಳುವ । ಡರರೆ ಧೈರ್ಯ ॥ 1 ॥ ಇರುವರೆಂತಹ ಜನರು ಜಗದಲಿ । ವಿರಚಿಸುವೆ ನಾನಿದಕೆ ಶಾಸ್ತಿಯ । ಕರೆದು ದೂತರೊಳೆಂದ ನಿವರಿಗೆ । ಕೊರಡೆಯಿಂದ ॥2॥ ಹೊಡೆಯುವದು ಇಪ್ಪತ್ತು ಛಡಿಯನು । ತಡೆಯದೀಗಲೆ ಎನಲು ದೂತರು । ಪಿಡಿದು ಬಡಿಯುತ ದೂಡಿದರು ಬಲು । ಗಡುಸಿನಿಂದ ॥ 3 ॥

॥ ಭಾಮಿನಿ ॥

ತನುವಿಗಾಗಿಹ ಗಾಯಕಿಂತಲು । ಮನಕದತ್ಯಾಘಾತವಾಗಲು । ಜನಪಸುತೆಗೈದಿರುವ ಮೋಸಕೆ ಬಹಳ ಮರುಗುತಲಿ ॥ ಮನೆಗೆ ಬರುತಿಹ ಸಾಕಿದವರಾ । ಕಣುಗಳಲಿ ನೀರಿಳಿಯೆ ಕಾಣುತ । ವನಿತೆ ಎಸಗಿದ ವಂಚನೆಯನರಿಯುತ್ತಲಾದಿತ್ಯ ॥ 1 ॥

॥ ರಾಗ ॥ ತಾಳ ॥

ಏನನೆಸಗಿದಳು ನಾರಿ ॥ ನಿಮ ॥ ಗೇನು ಗಾಯವು ಈ ಪರಿ ॥ ಹಾನಿ ಯಾರಿಂದಾದುದು ॥ ಅನು ॥ ಮಾನವಿರಿಸದೆ ಪೇಳಿರಿಂದು ॥ 1 ॥

॥ ರಾಗ ॥ ಸಾಂಗತ್ಯ ॥ ರೂಪಕ ॥

ಒಡೆಯರವರು ನಾವು । ಬಡವರಾಗಿರ್ಪೆವು । ಕುಡಿಯರಿಗೇಕರಸನ ಮಗಳು ॥ ಹೊಡೆದರು ಇಪ್ಪತ್ತು । ಛಡಿ, ಶನಿ ಹಿಡಿದಿತ್ತು । ತಡೆಯದು ಮನದ ನೋವುಗಳು ॥ 1 ॥

॥ ರಾಗ ॥ ಕಾಂಬೋಧಿ ॥ ಝಂಪೆ ॥

ಎನ್ನ ಸಾಕಿದ ನಿಮಗೆ । ಕನ್ನೆ ಹೊಡೆಸಲು ಹೀಗೆ । ಇನ್ನು ಬಿಡೆನವಳ ಸೇಡಿಂಗೆ ॥ ಮುನ್ನ ನಡೆಯುತ ರಾಯ । ನನ್ನು ಕೇಳುತ ನ್ಯಾಯ । ವನ್ನೊರೆಯದಿರೆ ಧುರದೊಳವಗೆ ॥ 1 ॥ ತಕ್ಕ ಶಾಸ್ತಿಯ ಗೈವೆ । ದುಃಖಗೊಳದಿರಿ ನಾವೆ । ಶಕ್ತರಿರುವೆವು ಸಮರದಲ್ಲಿ ॥ ಆಕ್ರಮಿಸುತಲಿ ಕಾಡಿ । ನಾಕ್ರಮಣವನು ಮಾಡಿ । ಮೂರ್ಖತೆಯ ಕೊನೆಗೊಳಿಪೆನಲ್ಲಿ ॥ 2 ॥ ಎಂದು ಗೆಳೆಯರ ಕರೆಯೆ । ಬಂದವರಿಗೆಲ್ಲೊರೆಯೆ । ಚಂದ್ರನಾಥನು ಸಹಿತ ಪೊರಡೆ ॥ ಬಂದು ಪದ್ಮಾವತಿಯು । ಎಂದಳವರೊಳು ದೊರೆಯು । ಎಂದಿಗೂ ಬಿಡ ಧರ್ಮ ನೋಡೆ ॥3॥ ಸಿಟ್ಟಿನಿಂದಾತನಿಗೆ । ಕಷ್ಟ ಕೊಡದಿರಿ ಎನಗೆ । ಕೊಟ್ಟಿರುವ ನನ್ನ ಮೊದಲಿಂಗೆ ॥ ದಿಟ್ಟತನ ನಿಮ್ಮೊಳಿದೆ । ಒಟ್ಟಿಗಿರೆ ಜಯ ನಿಮದೆ । ಬಿಟ್ಟು ಬಿಡಿ ನ್ಯಾಯ ಪೇಳ್ದವಗೆ ॥ 4 ॥

॥ ಭಾಮಿನಿ ॥

ಹನುಮು ಭಕ್ತರು ನಾವು ನೀತಿಯ । ಇನಿತು ಮೀರುವರಲ್ಲ ತನ್ನಯ । ತನುಜೆ ನುಡಿದುದೆ ಸತ್ಯವೆನುತಲಿ ನಿರಪರಾಧಿಗಳ । ಘನದಿ ಶಿಕ್ಷಿಸ ಬಹುದೆ ಎಂಬುದ । ಜನಪನೊಳು ಕೇಳುತ್ತ ಮೀರ್ದರೆ । ಅನುವರದಿ ಸೋಲಿಪೆವು ಹೊರ ತೇಂಗೈಯೆವೆಂದೆನುತ ॥ 1 ॥ ಭರದಿ ನಡೆದರು ಕವಣೆ ಬಿಲ್ಗಳ । ಕರದಿ ಪಿಡಿಯುತಲುದಯಚಂದ್ರರು । ಬರಲಿಕರಮನೆ ಬಳಿಗೆ ಕಾಣುತ ಕೋಟೆ ಬಾಗಿಲನು ॥ ಅರಸನಿಕ್ಕಿಸೆ ನಿತ್ತು ಹೊರಬದಿ । ದೊರೆಗೆ ಧಿಃಕ್ಕಾರವನು ಪೇಳ್ದರು । ಪರಮ ಹೇಡಿಯು ಭೈರವಗೆ ಧಿಃಕ್ಕಾರವೆಂದೆನುತ ॥ 2 ॥

॥ ರಾಗ ॥ ಸೌರಾಷ್ಟ್ರ ॥ ತ್ರಿವುಡೆ ॥

ಭಾರಿ ಬೊಬ್ಬೆಯ ಕೇಳಿ ಭೈರವ । ನೇರಿ ಬಂದನು ಕೋಟೆ ಮೇಲಕೆ । ಯಾರು ನೀವಿಂತೊರೆಯಲೇಂ ಧಿ । ಕ್ಕಾರವೆನಗೆ ॥ 1 ॥

॥ ರಾಗ ॥ ಬಿಲಹರಿ ॥ ಏಕ ॥

ಧರೆಗೆ ನ್ಯಾಯವ ನೊರೆಯುವ ಭೂಪನೀ ತೆರ । ನಿರಪರಾಧಿಗಳಿಗೆ ಶಿಕ್ಷೆ ವಿಧಿಸಿದುದು ॥ ತರವೆ ಪೇಳೆನ್ನ ಪೊರೆದವರಿಗೆ ಛಡಿಯೇಟುಗಳ । ತರಳೆಯೊರೆದುದೆ ಸತ್ಯವೆನುತ ಹೊಡೆಸಿದುದು॥

॥ ರಾಗ ॥ ಸೌರಾಷ್ಟ್ರ ॥ ತ್ರಿವುಡೆ ॥

ಪೊಡವಿಗರಸೆನ್ನೇಕಸುತೆಯನು । ಕುಡಿಯ ಹುಡುಗಗೆ ಕೇಳ ಬಂದರೆ । ಛಡಿಯೆ ಹೊರತಿರದನ್ಯ ಶಿಕ್ಷೆಯ । ಹೊಡೆಯ ಪೇಳ್ದೆ ॥ 1 ॥ ಬರಿದೆ ಕೇಳಿದುದಲ್ಲ ಚಂದ್ರಿಕೆ । ಒರೆದ ತೆರದಿಂ ಕಳುಹಿದೆನು ಉಂ । ಗುರದ ಸಹಿತಲಿ ಹಿರಿಯರನು ನಾ । ಕರೆದು ಕೇಳಿ ॥ 2 ॥ ಕರೆಯೆ ಚಂದ್ರಿಕೆ ಬರುತಲುದಯನ । ನಿರುಕಿಸಲು ಮನ ಚಂಚಲಿಸಿದುದು ॥ ಉರದಿ ಸುಪ್ತದೊಳಿದ್ದ ಮೋಹದಿ । ತರಳೆ ನಾಚೆ ॥ 3 ॥ ಪೇಳು ಸತ್ಯವನೆನಲು ನಿಜವನು । ಹೇಳುತಲಿನಾ ತಪ್ಪನೆಸಗಿದೆ । ತಾಳಿಹುದು ಮನವೀಗ ಪ್ರೇಮವು । ಶೀಲನಲ್ಲಿ ॥ 4 ॥ ನ್ಯಾಯ ನಿಷ್ಠನು ಎನ್ನತೀರ್ಪ । ನ್ಯಾಯವೆನಿಸಿತು ನಿನ್ನದೆಸೆಯೊಳ । ಮಾಯ ಕರಿಗೀತೆತೆರದ ಶಿಕ್ಷೆಯ । ನೀಯಲಾಯ್ತು ॥ 5 ॥ ಇನ್ನಿದಕೆ ಪರಿಹಾರ ವೀತಗೆ । ನಿನ್ನ ನೀಯುತ ಮದುವೆ ವಿರಚಿಪೆ। ಎನ್ನುತಲಿ ನೃಪ ನುಡಿಯೆ, ಕೇಳುತ । ಲನ್ನೆಗುದಯ ॥ 6 ॥

॥ **ರಾಗ** ॥ **ಕಾಂಬೋಧಿ** ॥ **ಝಂಪೆ** ॥

ಬಡವನಾದರು ನಾನು । ಕುಡಿಯುತಿಹೆ ಗಂಜಿಯನು । ಇಡೆನಾಸೆ ಮೃಷ್ಟಾನ್ನಕಿಂದು ॥ ಹುಡುಗಿ ಇವಳೆಂದುದನು । ದೃಢವೆಂದು ನಂಬಿದೆನು । ನುಡಿವೆ ತಪ್ಪಾಯ್ತು ಮನ್ನಿಪುದು ॥ 1 ॥ ಬೇಡವೆಂದರೆ ಇವಳು । ಮಾಡಿದಪರಾಧಗಳು । ರೂಢಿಯೊಳು ನಿರ್ದೋಷಿಗಳಿಗೆ। ನೀಡಿಸಿತು ಶಿಕ್ಷೆಯನು । ಮಾಡೆ ಪರಿಹಾರವನು । ನೀಡುವುದು ನೀ ಛಡಿಯ ಸುತೆಗೆ ॥2॥ ಎನಲೆಂದ ಉದಯನೆಲೆ । ಜನಪ ಕ್ಷಮೆಯಿಂ ಮೇಲೆ । ಘನಶಿಕ್ಷೆ ಬೇರೆ ನಾಕಾಣೆ ॥ ವನಿತೆ ಸಹಿಸಳು ಕಷ್ಟ । ತನುಜೆಗೀಯದೆ ಪೆಟ್ಟ । ಮನದಿ ಮನ್ನಿಪುದು ಎನ್ನಾಣೆ ॥ 3 ॥ ಎನುತ ಮರುಳಲ್ಕವರು । ಜನಪ ಬೆರಗಾಗಿವರು । ಗುಣದಿ ಬಲು ಸಂಸ್ಕೃತರು ಎನಗೆ । ಅನುಮಾನ ಕರುಳೊಳಗೆ । ಘನಮೋಹ ಉಂಟಾಗೆ । ಮನಕರಿಯದೇತಕಿದು ಹೀಗೆ ॥ 4 ॥

॥ **ಭಾಮಿನಿ** ॥

ಯಾರಿವರು ಎಂದೆನುತ ಮನದಲಿ । ಭಾರಿ ಚಿಂತಿಸುತಿರಲು ಭೈರವ । ನಾರಿ ಚಂದ್ರಿಕೆ ತನ್ನ ತಪ್ಪಿಗೆ ಮರುಗುತಿರೆ ಬಳಿಕ ॥ ಆರಿಗರಿಯದು ಗುರುತು ಚಂದನ । ಭೂರಮಣ ನೂರೂರು ಚಲಿಸುತ । ಭಾರಿ ಬಳಲಿದ ಉಣಲು ಉಡಲಿಲ್ಲದೆಯೆ ಸೊರಗುತಲಿ ॥ 1 ॥ ಒಂದೆ ವಸನದಿ ಚಳಿಗೆ ನಡುಗುತ । ನಿಂದಿರಲು ತಾನೊಂದು ಮರದಡಿ । ಬಂದ ಉದಯಾದಿಗಳು ಕಾಣುತ ಮರುಕದಿಂದವಗೆ । ನೊಂದು ಉದಯನು ತನ್ನ ಅಂಗಿಯ । ನಂದು ತೊಡಿಸಲು ಬಲದ ಭುಜದಲಿ । ಚಂದದಿಂದಲಿ ರಾಜಿಸುವ ಓಂಕಾರ ಗೋಚರಿಸೆ ॥

॥ **ರಾಗ** ॥ **ಸೌರಾಷ್ಟ್ರ** ॥ **ತ್ರಿವುಡೆ** ॥

ನೋಡಿದನು ಚಿಹ್ನೆಯನು ಭೂಪತಿ ॥ ನೋಡುತಲಿ ಸಂತೋಷಗೊಳಲತಿ । ಮೋಡಿ ಮಾಡಿದ ಭುಜದ ಆಕೃತಿ । ನೀಡೆ ಶಾಂತಿ ॥ 1 ॥

॥ **ರಾಗ** ॥ **ಮೋಹನ** ॥ **ಅಷ್ಟ** ॥

ಯಾರಪ್ಪ ಪೇಳು ನೀನು । ನಿನ್ನ ಸಾಕಿದ । ಆರು ಆ ಪುಣ್ಯಾತ್ಮಳು ॥ ಊರಾವುದು ತವ। ಚಾರು ನಾಮವದಾವ । ದಾರು ಜತೆಯೊಳಿಹರು ॥ 1 ॥ ಕುಡಿಯರ ವೆಂಕಮ್ಮನು ॥ ಸಾಕಿದಳೆನ್ನ ॥ ಕೊಡಿಸಿ ವಿದ್ಯೆಯ ಕರಿಯನು । ಪೊಡವಿಪಾತ್ಮಜನೀತ । ಅಡವಿಯೊಳಗೆ ಉಚಿತ । ಪಡೆದ ವಿದ್ಯೆಯ ಚಂದ್ರನಾಥ ॥ 2 ॥ ಚಂದ್ರನಾಥನೆ ನೀನು ॥ ಹೌದಾದರೆ ॥ ತಂದೆ ದೇವರಸನೇನು ॥ ಹಿಂದೆ ಪದ್ಮಾವತಿ । ಯೊಂದಿಗೆ ತೊರೆದೆನು । ಹೊಂದಲೆನ್ನುತ ತವರನು ॥ 3 ॥ ಕಿರಿಯ ಕಂದನನು ಹಿಂದೆ । ಕದಿಯುತಲಾರೊ ॥ ಅರಿಯದಂತೊಯ್ದರಿಂದೆ॥ ಮರವೆಯದಾದುದು । ಗುರುತಿದು ಭುಜದಲಿ । ಇರುವ ಓಂಕಾರದಿಂದೆ ॥ 4 ॥

॥ **ಭಾಮಿನಿ** ॥

ತಂದೆ ನಾ ನಿಮಗಿಹೆನು ಎನ್ನಯ । ನಂದನರು ನೀವುಭಯರರಸಿಯು । ಸಿಂಧು ಭೂಪನ ತಂಗಿ ಪದ್ಮಾವತಿಯು ಎಂದೆನಲು ॥ ಒಂದಿಗೀರ್ವರು ನಮಿಸುತಪ್ಪುತ । ನೊಂದಿಹೆಯ ಬಲು ದೇಶ ಚರಿಸುತ । ಸಂದಿತಿನ್ನಾಕಷ್ಟ ಬಾರೆಂದೆನುತ ಕರೆದೊಯ್ಯೆ ॥ 1 ॥ ಇತ್ತ ಧೂರ್ತನು ಚಂಡಕೀರ್ತಿಯು । ಪೃಥ್ವಿ ಮಂದಾರವನು ಪಡೆಯಲು । ಸೂಕ್ತ ರೀತಿಯ

ತಂತ್ರ ರಚಿಸುತಲೊರೆದು ಗೆಳೆಯನೊಳು । ಮತ್ತೆನಡೆದನು ಚಂದನಾಪುರ। ದತ್ತ ಲಲ್ಲಿಹ ಶಾಂತಿ ಗುಪ್ತನಿ । ಗಿತ್ತು ಆಮಿಷ ಸಹಯ ಪಡೆಯಲೆನುತ್ತಲೈತರುತ ॥

॥ ರಾಗ ॥ ಕಾಂಬೋಧಿ ॥ ಝಂಪೆ ॥

ಕಂಡು ನಮಿಸಲು ತೋಷ । ಗೊಂಡು ಸತ್ಕರಿಸಿ ಬೆಸ । ಗೊಂಡನೆತ್ತಣ ಬರವಿದೆನಲು ॥ ಚಂಡಕೀರ್ತಿಯು ತನ್ನ । ಕೊಂಡಾಡಿ ಗುರುತನ್ನ । ಮಂಡಲಾಧಿಪನನುಜನೆನಲು ॥ 1 ॥ ಸಿಂಧುಭೈರವ ಭಾವ । ನೆಂದರಾತನ ಭಾವ । ಹಿಂದಿನಾದೊರೆಯು ದೇವರಸ ॥ ಬಂಧು ನಿನಗಾಪನವ । ನಿಂದ ಸೆಳೆದೆವು ಪುರವ । ನೆಂದು ಗುಟ್ಟರಿಯಲವಕಾಶ ॥ 2 ॥ ಎಂದು ಬಂದರೆ ಸಾಗ । ದೆಂದು ತಿಳುವುದು ಬೇಗ । ಬಂದ ಕಾರ್ಯವನು ಪೇಳೆನಲು ॥ ಸಂದೇಹಿಸದಿರೆನ್ನ । ಬಂದೆ ತವಸಹಯವನ । ಹೊಂದಲೆನ್ನುತಲಿ ಶೀಘ್ರದೊಳು ॥ 3 ॥ ಮಂದಾರಪುರವನ್ನು । ಇಂದು ಗೆಲೆ ಸೇನೆಯನು । ಹೊಂದಿಸುತಲಿತ್ತರದಕಾನು ॥ ಸಿಂಧು ಭೂಪನ ಸುತೆಯ । ಸುಂದರಿಯ ಚಂದ್ರಿಕೆಯ । ಮುಂದೀವೆನೆನ್ನ ಸೊಸೆಯನ್ನು ॥ 4 ॥ ಮಗಳು ಓರ್ವಳೆ ನಿನಗೆ । ಮಗನಿಲ್ಲದಿರಲಾಗೆ । ಸುಗುಣೆಯನು ವರಿಸಲವಳಲ್ಲಿ । ಸೊಗಸಿನಿಂ ಸಂತಾನ । ಸಿಗದಿರದು ಅನುಮಾನ । ಬಗೆಯದಿರುನೀನು ಎನ್ನಲ್ಲಿ ॥ 5 ॥

॥ ರಾಗ ॥ ಸೌರಾಷ್ಟ್ರ ॥ ತ್ರಿವುಡೆ ॥

ದೇವರಸನಾತ್ಮಜನ ನಾನೇ । ಬಾವಕಿಯ ಬಳಿಯಿಂದ ಲೊಯ್ಯುತ । ಜೀವ ತೆಗೆದಿಹೆ । ದತ್ತ ಪಡೆಯುವ । ಭಾವವೆನುತ ॥ 1 ॥ ಆವಧೈರ್ಯವು ಭೂಪನೊಡನಿ । ನ್ನಾವ ಬಲವಿಹುದರಿಯೆ ಸೋತರೆ । ಕಾವರಾರೈ ಎನ್ನ ಸುಮ್ಮನೆ । ಠಾವ ಶೇರು ॥ 2 ॥ ಸೇನೆಸಹ ಪರಿವಾರವೆಲ್ಲವ। ನಾನು ಕೈವಶಗೈದಿಹೆನು ಮುಂ। ದೇನು ಭಯ ವಿರದಯ್ಯ ಮಮ ಕೊರ । ಆಣೆ ಎನಲು ॥ 3 ॥ ಕರಕೆ ಕರವನು ತಟ್ಟಿ ಭಾಷೆಯ । ನೊರೆಯೆ ನಂಬುವೆನೆನಲು ಚಂಡನು । ಭರದಿ ದೇವರ ಆಣೆ ಇಡುತಲಿ । ಕರವ ತಟ್ಟೆ ॥ 4 ॥ ಒಪ್ಪುತಲಿ ಬಲು ತೋಷದಿಂದಲಿ । ತೃಪ್ತಿಯಿಂ ದಳಪತಿಯ ಕರೆಸಲು । ತಪ್ಪದೈ ತಂದೊರೆದ ನಾ ತಿ । ಮ್ಮಪ್ಪನಿಂತು ॥ 5 ॥

॥ ರಾಗ ॥ ಮಾರವಿ ॥ ಏಕ ॥

ಧರಣಿಪ ಏತಕೆ । ಕರೆಸಿದೆ ಎನ್ನನು । ಧುರ ಬಂದೊದಗಿಹುದೆ ॥ ಅರುಹಲು ಸೇನೆಯ । ನೆರಯಿಸುವೆನು ನಾ । ಭರದಿಂದಲಿಯಿಂದೆ ॥

॥ ರಾಗ ॥ ಕೇದಾರಗೌಳ ॥ ಝಂಪೆ ॥

ಸಿಂಧು ಭೈರವನ ಪುರಕೆ । ಸೇನೆಸಹ । ಏಂದು ಧಾಳಿಯ ನಿಡಲಿಕೆ ॥ ಹೊಂದಿಪುದು ಸೈನಿಕರನು ॥ ಬಲುಬೇಗ ॥ ವೆಂದೊರೆಯಲಾಗಾತನು ॥ 1 ॥

॥ ರಾಗ ॥ ಮಾರವಿ ॥ ಏಕ ॥

ಧುರವಿರದಾದುದು । ವರುಷವು ಹಲವದು । ಅರಿಬಲವನು ಸವರೆ ॥ ಹರುಷವದಾಪುದು। ದೊರೆಯಲಿ ಜಯವಧು । ಅರಸನೆ ನಾ ಬೆದರೆ ॥ 1 ॥ ॥ ಭಾಮಿನಿ ॥ ಇಂತು ಸೇನೆಯ ನೆರಹಿ ಪೊರಡಲು । ಸಂತಸದೊಳಾ ಚಂಡಕೀರ್ತಿಯು । ಮುಂತೆಸೆಯೊಳೈದಿದನು ಮುಂದಿನ

ಅರಸು ತಾನೆನುತ । ಚಿಂತಿಸುತ ಚಿಂತಾಮಣಿಯು ತಾ । ನೆಂತು ಸೈಸಲಿ ಗೆಳೆಯನಕ್ರಮ। ಬಂತು ಮನವೆಂತಿವಗೆ ಸೊಸೆಯನು ಧೂರ್ತಗೀಯವಡೆ ॥ 1 ॥

॥ ರಾಗ ॥ ಕಾಂಬೋಧಿ ॥ ಝಂಪೆ ॥

ನಡೆಯಗೊಡೆನಿದನಿನ್ನು । ಪೊಡವೀಶಗರುಹುವೆನು । ತಡೆವೆನೆಂತಾದರಾನಿದನು । ಪಡೆಯ ನೊಶಕರಿಸಿಹನು । ದೃಢದೊಳಿದಿರಿಸಲಿನ್ನು । ನುಡಿವೆನರಸನಿಗುಪಾಯವನು ॥

॥ ರಾಗ ॥ ಸಾಂಗತ್ಯ ॥ ರೂಪಕ ॥

ಎಂದೆನುತಲಿ ನಡೆ । ತಂದು ಭೂಪನ ಕೂಡೆ । ಎಂದನು ತವ ಭಾವನಿಂದು ಹೊಂದಲು ರಾಜ್ಯವ । ಚಂದನ ಪುರದವ । ನೊಂದಿಗೊಪ್ಪಂದವ ಗೈದು ॥ 1 ॥ ಗೆಲಲೆನುತಲಿ ನಮ್ಮ। ಬಲವಶಕರಿಸಿಹ । ಲಲನೆ ಚಂದ್ರಿಕೆಯ ತಾನವಗೆ । ಒಲಿದೀವೆನೆನುತಲಿ । ತಿಳಿಸಿ ಸೇನೆಯ ಸಹ । ಛಲದಿ ಬರುತಿಹನ ಗೆಲೆ ನಮಗೆ ॥ 2 ॥ ಸುಲಭವಾಗದು ಅದ । ಕಳಿಯಂದಿರನು ಮೊದ । ಲೊಳು ಪೇಳಿ ಬರಿಸುವೆನೀಗ ॥ ಲಲನೆ ಪದ್ಮಾವತಿ । ಯಳ ಸುತರಿಹರತಿ । ಬಲವಂತರೊಳು ಕೈಸಾಗ ॥ 3 ॥

॥ ರಾಗ ॥ ಸೌರಾಷ್ಟ್ರ ॥ ತ್ರಿವುಡೆ ॥

ಒರೆದ ಧರಣಿಪ ತಂಗಿ ಭಾವನ । ಅರಸಲೈದಿದ ನೀಹತಾಶದಿ । ಮರಳಿ ಬಂದಿಹೆ ಎಲ್ಲಿಹರು ಬೇ । ಗರುಹು ಎನಲು ॥ 1 ॥ ಅರಿವಹುದು ನಿಮಗಾ ಬಳಿಕ ನಾ । ಕರೆವೆ ಮೊದಲವರನ್ನು ಸೇನೆಯು । ಬರುವ ಸಮಯಕೆ ತಲುಪುವಂದದಿ । ತೆರಳಿ ಬೇಗ ॥ 2 ॥ ಎನುತ ಪೊರಟನು ಶೀಘ್ರದಿಂದಲಿ । ವನದೆಡೆಗೆ ನಡೆತರಲಿ ಕತ್ತಲು । ಜನಪ ದೇವರಸನನು ಸಹಿತಲಿ । ತನಯರಂದು ॥ 3 ॥

॥ ರಾಗ ॥ ಮಧ್ಯಮಾವತಿ ॥ ಏಕ ॥

ಬರುತಿರೆ ದೂರದಿ ಕಂಡು ಪದ್ಮಾವತಿ ॥ ಅರಸನ ಗುರುತಿಸುತಲಿ ತೋಷದೊಳತಿ । ಹರಿಸಿ ಕಣ್ಣೀರನು ಇದಿರು ಗೊಳ್ಳುತ ಪತಿ । ಚರಣಕೆರಗಲೆತ್ತಿಯಪ್ಪುತನೃಪತಿ ॥ 1 ॥ ನೊಂದೆಯ ಪೇಳು ನೀನೆನ್ನನುವರಿಸಿ । ಬಂದಿಹೆ ನೋಡಿದೊ ಕಂದರನಾಶ್ರಯಿಸಿ । ಅಂದು ಕಳೆದ ಕಿರಿನಂದನನಿವನು । ಒಂದಿಗಿದ್ದರು ಗುರುತಿಸದಾದೆ ನೀನು ॥ 2 ॥ ಎನಲಿಕುದಯನ ಭುಜದ ಗುರುತನು ನೋಡಿ । ವನಿತೆ ಮೋಹದೊಳಪ್ಪಿ ಮುದ್ದನು ಮಾಡಿ । ಜನನಿನಾನಾದರು ಪೊರೆದ ವೆಂಕಮ್ಮ । ತನಯನಿಗಾದಳು ನಿಜವಾದ ಅಮ್ಮ ॥ 3 ॥

॥ ರಾಗ ॥ ಕೇದಾರಗೌಳ ॥ ಅಷ್ಟ ॥

ಅನಿತರೊಳಗೆ ಚಿಂತಾಮಣಿ ಬರೆ ಕಾಣುತ । ವನಿತೆ ಪದ್ಮಾವತಿಯು । ಮನತೋಷವನು ಗೊಳು । ತಿನಿಯನೊಳೆಂದಳು । ಘನಮಹಿಮನ ಸತ್ಕೃತಿಯು ॥ 1 ॥ ಕ್ಷೇಮವೆ ಅಣ್ಣಗೆ । ಸೀಮೆಯೊಳೆಲ್ಲರ್ಗೆ । ಕಾಮಿನಿ ಚಂದ್ರಿಕೆಯ ॥ ಪ್ರೇಮದ ನಾಟಕ । ವೀ ಮಗುವಿನ ಮುಗ್ಧ। ನೇಮಕೆಸಗಿರೆ ಹಾನಿಯ ॥ 2 ॥ ಅರಿತಿಹೆನೆಲ್ಲವ । ಒರೆವೆ ಮೊದಲು ತವ । ಹಿರಿಯನ ಪರಿಭವದ ॥ ದುರುಳನಾ ಚಂಡನು । ಪುರವ ಸೆಳೆಯಲೆನು । ತರಿಗಳ ಕೂಡಿಹನು ॥3॥

ಒಪ್ಪಿಸುವೆನು ಶಾಂತಿ । ಗುಪ್ತಗೆ ಸೊಸೆಯನೆಂ । ದೊಪ್ಪಂದವಾಗಿಹುದು ॥ ತಪ್ಪಿಸಲಿದರನು। ಬಪ್ಪುದು ಉದಯನು । ಒಪ್ಪಿ ಚಂದ್ರನು ಬಹುದು ॥ 4 ॥

॥ ರಾಗ ॥ ಭೈರವಿ ॥ ಏಕ ॥

ಎನೆಕೇಳುತಲಾದಿತ್ಯ ॥ ಚಂ ॥ ಡನು ಎಸಗುವ ದುಷ್ಕೃತ್ಯ ॥ ಕ್ಷಣದಲಿ ನಿಲಿಸುವೆ ನಾನು ॥ ಶೈ ॥ ಮಿನಿಗಾತನ ಕಳುಹುವೆನು ॥ 1 ॥ ಅಮ್ಮನ ಸೆಳೆಯಲಿ ಕೆಂದೆ ॥ ಬಂ ॥ ದೊಮ್ಮಗೆ ಹೊಡೆತವ ತಿಂದೆ ॥ ಬಿಮ್ಮಗೆ ಓಡಿದನಾತ ॥ ನಾ ॥ ಹಮ್ಮಿಳಿಸುವೆ ಚಂದ್ರನಾಥ ॥ 2 ॥ ಗುರುವಿನ ಪದಕೀರುವರು ॥ ಬಂ ॥ ದೆರಗಲು ಹರಸುತಲವರು । ಒರೆದರು ಹನುಮನ ಮನದಿ ॥ ಕ್ಷಣ ॥ ಮರೆಯದೆ ಕಾದಿರಿ ಧುರದಿ ॥ 3 ॥

॥ ಭಾಮಿನಿ ॥

ಪೊರೆದವರ ಆಶಿಶವ ಬೇಡುತ । ಭರದಿ ಪೊರಟರು ತಂದೆತಾಯರ । ಕರೆದು ಕೊಂಡಾ ದಿನವೆ ಚಿಂತಾಮಣಿಯ ಜತೆಯಲ್ಲಿ ॥ ಬರುತ ಹಡೆದರನವನ ಮನೆಯಲಿ ಇರಿಸುತಲಿ ನಡೆತರಲಿ ಕಿತ್ತಲು । ದುರುಳ ಸೈನಿಕ ಬಂದು ತಲಪಿರೆ ಮರೆಯೊಳಡಗಿದ್ದ ॥ 1 ॥ ಕುಡಿಯ ತರುಣರು ಕವಣೆಯಿಂದಲಿ । ಹೊಡೆಯೆ ಕಲ್ಲನು ಯೋಧರಿಂಗದ । ತಡೆಯಲಾಗದೆ ಓಡತೊಡಗಲು ಕಂಡು ದಳಪತಿಯು । ಕಿಡಿಗೆದರು ತೈತರಲು ಚಂದ್ರನು । ಒಡನೆ ಇದಿರಾಗಲ್ಕೆ ಕಾಣುತ । ನುಡಿದ ಕೋಪದೊಳವನೊಡನೆ ನಿಲು ಹುಡುಗ ನಿಲ್ಲೆನುತ ॥

॥ ರಾಗ ॥ ಮಾರವಿ ॥ ಏಕ ॥

ಫಡ ಹುಡುಗನೆ ಇಂ । ತಡಗುತ ಮರೆಯಿಂ । ಹೊಡೆವೆಯ ಕಲ್ಲುಗಳ ॥ ಕಡುಗಲಿ ಎನ್ನನು। ತುಡುಕಲು ನಿನ್ನನು । ಕೆಡಹುವೆ ಧರೆಗಾನು ॥ 1 ॥ ಪೊಡವಿಪತಿಯ ಬಲ । ತೊಡಗದ ತೆರಧುರ । ತಡೆದಿರೆ ಮೋಸದೊಳು ॥ ಅಡಗುತಲಂತಹ । ಕೆಡುಕರ ನೀತೆರ । ಪುಡಿಗೈವೆವು ಕೇಳು ॥ 2 ॥ ಯುದ್ಧದ ಧರ್ಮಕೆ । ಬದ್ಧವಾಗಿಹುದದು । ಶುದ್ಧ ಭೇದದ ನೀತಿ ॥ ಕದ್ದಡಗುತ ಹೊಡೆ । ದದ್ದನ್ಯಾಯವು । ಕ್ರುದ್ಧಾಸುರ ನೀತಿ ॥ 3 ॥ ಅಸುರರ ತೆರದಲಿ । ರಸೆಯೊಳನ್ಯಾಯವ । ಎಸಗುವ ನಿಮ್ಮನ್ನು ॥ ದೆಸೆಗೆಡಿಸಲಿಕೀ । ಹೊಸಕ್ರಮ ಯುದ್ಧವು । ಅಸಮಾನ್ಯವದಿನ್ನು ॥ 4 ॥ ಹೊಸಬನು ನೀನಾ । ರುಸುರೆ ಲೊಪೆಸರನ । ವಸುಧೆಯೊಳಾವೂರು॥ ಅಸಮಾನ್ಯನ ತೆರ । ಮಸಗುವೆ ಎನ್ನೊಳು । ದೆಸೆಗೆಡಿಪೆನು ಸಾರು ॥ 5 ॥ ಸಾರುವೆ ಬೇಗನೆ। ಕ್ರೂರನೆ ನಿನ್ನನು । ಸೇರಿಸಿ ಯಮನೆಡೆಗೆ ॥ ಹಾರದೆ ವಿಕ್ರಮ । ತೋರು ಪರಾಕ್ರಮ । ವೀರತನವನೆನಗೆ ॥ 6 ॥

॥ ಭಾಮಿನಿ ॥

ಕಾದುತಿರೆ ಕತ್ತಿಯೊಳು ಈರ್ವರು । ಕ್ರೋಧದಿಂದಲಿ ಚಂದ್ರನಾಥನು । ಮೂದಲಿಸುತವನೆದಗೆ ಇರಿಯಲು ಅಳಿದ ತಿಮ್ಮಪ್ಪ ॥ ಆದುದನು ಕಾಣುತ್ತ ಗುಪ್ತನು । ಆದನತಿ ಉದ್ರೇಕ ಕ್ಷಣದಲಿ। ಛೇದಿಸದಿರೆನೆನುತ್ತ ಚಂದ್ರನ ತಡೆಯುತಿಂತೆಂದ ॥ 1 ॥

॥ **ರಾಗ** ॥ **ಶಂಕರಾಭರಣ** ॥ **ಮಟ್ಟೆ** ॥

ಪೋರನೀನದಾರು ಪೇಳು । ಚೋರನಂತೆ ಕಾಳಗದೊಳು । ಸಾರಿಬಂದು ದಳಪತಿಯನು। ಹೋರಿ ಕೊಂದವ ॥ 1 ॥ ಆರ ರಾಜ್ಯವನ್ನು ನೀನು । ಸೂರೆಗೊಂಡೆಯವಗೆ ನಾನು । ಚಾರುಸುತನು, ಬರವನರಿತು ಸಾರಿ ಬಂದೆನು ॥ 2 ॥ ದೇಶವನ್ನು ವಿಸ್ತರಿಸುವ । ಆಶೆಯಿಂದ ರಾಜಧುರವ । ನಾಶಿಸುತಲಿ ಗೆದ್ದರದನು । ದೋಷವೆಂಬುದೆ ॥ 3 ॥ ಆಸೆ ಇರಲಿ ಸಹಜವಹುದು । ಆಶಿಸುತೆಳೆ ಹೆಣ್ಣ ನೀದು । ರಾಸೆಯಿಂದ ಬಂದಿರುವುದು । ದೂಷ್ಯವಲ್ಲವೆ ॥ 4 ॥ ಆರು ಪೇಳ್ದರಿದನು ನಿನಗೆ । ಸೂರೆಗೊಳಲು ಧುರದಿ ಕಡೆಗೆ । ಸೇರದಿಹುದೆ ಗೆದ್ದವನಿಗೆ । ಸಾರ ಸಂಪದ ॥ 5 ॥ ಮುದುಕ ನಿನಗೆ ಆಸೆ ಬಿಡದು । ಅದಕೆ ಬಂದೆ ಬಿಡಿಸಲೆಂದು । ಇದಕೊ ನಿಲ್ಲು ಸಮರಕಿಂದು । ಒದಗಿ ತೋರೆಲ ॥ 6 ॥

॥ **ಭಾಮಿನಿ** ॥

ಈ ತೆರದಿ ಹೊಯ್ದಾಡುತಿರಲತಿ । ಖಾತಿಯೊಳಗಾ ಗುಪ್ತಚಂದ್ರರು । ನೀತಿ ರಹಿತನ ಬಲವು ಗುಂದಲು ಮೂರ್ಛಿಸುತ ಕಣದಿ ॥ ಸೋತೊರಗಿ ತುಸು ಹೊತ್ತಿನಲ್ಲವ । ಚೇತರಿಸುತಲಿ ತನ್ನ ಮನದಲಿ । ಮಾತನಾಡಿದ ಸೋಲಿನಾ ಹಿನ್ನೆಲೆಯ ಚಿಂತಿಸುತ ॥ 1 ॥

॥ **ರಾಗ** ॥ **ಸೌರಾಷ್ಟ್ರ** ॥ **ತ್ರಿವುಡೆ** ॥

ಹರ ಹರೀ ತರುಣನೊಳು ಸಮರದಿ । ಕರವ ಸೋತೆನು ಭುವನದೊಳಗೀ । ವರೆಗಜೇಯನು ಎಂಬ ಬಿರುದದು । ತೊರೆದು ಹೋಯ್ತೆ ॥ ಮೋರೆ ನೋಡಲಿಕಿವನ ನಾವುದೊ । ಭಾರಿ ಸೆಳೆವುದು ಪಾಶ ಹೊಡೆಯಲು । ಬಾರದೈಮನ ವಿದಕೆ ಅರಿಯದು । ಕಾರಣಗಳು ॥ 2 ॥ ಬರಿದೆ ಕಾದುತ ಸಾವುದೇತಕೆ । ಇರುವಳೋರ್ವಳೆ ತರಳೆಯನ್ನಿವ । ಗೆರೆದು ದಾರೆಯ ನಿತ್ತರೆನ್ನಯ । ಪುರವಮುಂದೆ ॥ 3 ॥ ಆಳುವನು ತಾನೆನುತ ಮನದಲಿ । ತಾಳಿ ಸಾಂತ್ವನವನ್ನು ಚಂದ್ರಗೆ । ಪೇಳಿದನು ನಾ ಸೋತೆ ನಿನ್ನೊಳು । ಕಾಳಗದಲಿ ॥ 4 ॥ ಸೋತವಗೆ ನಾ ಹೊಡೆಯೆ ನೀ ಶರ । ಣಾರ್ಥಿ ಯಾದರೆ ಮನ್ನಿಸುವೆ ಪಿತ । ಗೋತು ಕ್ಷಮೆ ಯಾಚಿಪುದು, ಮುಂದಕೆ । ಪ್ರೀತಿಯಿಟ್ಟು ॥ 5 ॥ ಕೀಳು ಮಾಡದಿರೆನ್ನ, ನೋರ್ವಳೆ। ಬಾಲಿಕೆಯ ನಿನಗೀವೆ ರಾಜ್ಯವ । ನಾಳು ನೀ ಸುತರಿರದ ಎನ್ನನು । ಪಾಲಿಸುವುದು ॥6॥ ಎಲ್ಲಿರುವ ತವ ಪಿತನು ಬಹೆನಾ । ನಲ್ಲಿ ಗಾತನೊಳರುಹುವೆನು ಎನೆ । ಒಳ್ಳೆಮನದಲಿ ಒಯ್ದುನವರಿರು । ವಲ್ಲಿಗವನ ॥ 7 ॥

॥ **ರಾಗ** ॥ **ಭೈರವಿ** ॥ **ಅಷ್ಟ** ॥

ಕತ್ತಿಯನು ಝಳಪಿಸುತ ॥ ಚಂಡಕೀರ್ತಿಯು ॥ ಒತ್ತಿಮುಂದೈತರುತ ॥ ಕತ್ತರಿಸಲ್ಕರಿ । ಮೊತ್ತವ ಕಾಣುತ । ನಿತ್ತನುದಯನಿದಿರು ॥ 1 ॥ ಕಿಡಿಗೆದರುತ ಕಣ್ಣಿಂದ ॥ ಉದಯನ ಕಂಡು ॥ ನುಡಿದನು ಆರೆಲೊ ಹೈದ ॥ ಕುಡಿಯರ ಕುಲಜನು । ನಡೆತಂದೆನ್ನನು ॥ ತುಡುಕಲಹೆಯೊ ನೀನು ॥ 2 ॥

॥ **ರಾಗ** ॥ **ಕಾಂಬೋಧಿ** ॥ **ಝಂಪೆ** ॥

ಚಂಡಕೀರ್ತಿಯೊ ನೀನು । ಷಂಢಕೀರ್ತಿಯೊ ಎನು । ದಂಡಪಿಂಡನೆ ಧರೆಗದಿನ್ನು । ಉಂಡಮನೆಗೆರಡೆಣಿಪ । ಪುಂಡು ತನವನು ನಿಲಿಪ । ಗಂಡುಗಲಿ ನಿನಗೆ ಸಾಕಾನು ॥1॥

॥ **ರಾಗ** ॥ **ಭೈರವಿ** ॥ **ಅಷ್ಟ** ॥

ಸಾಕೆನಿಸುವೆ ನಿನಗೆ । ವನದೊಳಗಿಪ್ಪ ॥ ನೇಕೆ ನಡೆತಂದೆ ಹೀಗೆ ॥ ಈ ಕಠಿಣದ ಧುರ । ಬೇಕೇತಕೆ ತೆರ । ಆ ಕಾಡಿಗೆ ಬೇಗ ॥ 1 ॥

॥ **ರಾಗ** ॥ **ಕಾಂಬೋಧಿ** ॥ **ಝಂಪೆ** ॥

ಚಂದ್ರಿಕೆಯ ಮದುವೆಯನು । ಹೊಂದಿಸಿರುವೆಯ ನೀನು । ಬಂದೆನೂಟಕೆ ಅರಿಯುತದನು ॥ ಬಂದವರ ಕತ್ತಿಯೊಳು । ಕೊಂದೊರಗಿಸುವೆಯ ಬಲು । ಹಿಂದು ನಿಲಿಸುವೆ ಧುರಕೆ ನಿಲ್ಲು ॥ 1 ॥

॥ **ಭಾಮಿನಿ** ॥

ಕಾದುತಿರೆ ಕೈ ಸಾಗದಾಗಲು । ಹಾದಿಯರಸುತ ಲೋಡತೊಡಗಿದ । ಕ್ರೋಧದಿಂ ಸೆರೆ ಪಿಡಿದು ಕರಗಳ ಬಂಧಿಸುತ್ತುದಯ ॥ ಪೋದನರಮನೆಯೊಳಗೆ ಮಾವನ । ಪಾದತಲದಲಿ ಕೆಡಹುತೆಂದನು । ಈ ದುರಾತ್ಮನಿಗೇನು ಶಿಕ್ಷೆಯೊ ನೀಡುವುದು ಎನಲು ॥

॥ **ರಾಗ** ॥ **ಕಾಂಬೋಧಿ** ॥ **ಝಂಪೆ** ॥

ಕಾಣುತುದಯನನಪ್ಪಿ । ಮಾನನಿಧಿ ನಾ ತಪ್ಪಿ । ಹೀನೈಸಿದೆನು ನಿನ್ನ ಮೊದಲು ॥ ನೀನೆನ್ನ ತಂಗಿಯಳ । ಸೂನೆಂಬುದರಿತೆನಲ ॥ ಆ ನಿನ್ನ ಭುಜದ ಚಿಹ್ನೆಯೊಳು ॥ 1 ॥
ಚಂಡಕೀರ್ತಿಯೊಳೆಂದ । ಕಂಡಾಯ್ತು ನೀ ಗೈದ । ಪುಂಡಾಟ ಕಾವ ರೀತಿಯೊಳು । ದಂಡಿಸಲಿ ಕ್ಷಮೆಗಿಂತ । ಕಂಡಿರೆನು ಶಿಕ್ಷೆಯನು । ಭಂಡನಡೆಪುರಕೇಶೀಪ್ರದೊಳು ॥ 2 ॥
ಬಂದು ಚಂದ್ರಿಕೆ ಮಾವ । ಗೆಂದಳೆನ್ನನದಾವ । ನೊಂದಿಗೆ ವಿವಾಹ ವಿರಚಿಸುವೆ ॥ ಮಂದಮತಿ ತವ 'ಮಾತಿ । ನಿಂದತ್ತೆ ಮಗನೊಳತಿ । ಯಿಂದ ನಡೆದುದನೆಂತುಮರೆವೆ ॥3॥
ಎಂದು ಉದಯನ ಚರಣ । ಕೊಂದಿಸುತ ಕ್ಷಮಿಸೆನ್ನ । ನಿಂದು ಉದ್ಧರಿಸು ಕರಪಿಡಿದು॥ ನಿಂದಿಹುದು ಮನವು ನಿ । ಮ್ಮೊಂದಿಗಿನ್ನನ್ಯರನು । ಎಂದಿಗೂವರಿಸೆನಾಮುಂದು ॥ 4 ॥

॥ **ರಾಗ** ॥ **ಸೌರಾಷ್ಟ್ರ** ॥ **ತ್ರಿವುಡೆ** ॥

ಭಾವನಾನೆಸಗಿರುವ ತಪ್ಪಿಗೆ । ಆವ ಶಿಕ್ಷೆಯು ಕಡಿಮೆ, ಯದರಿಂ । ಜೀವನದ ಪರಿಯಂತ ನೆನೆವಡೆ । ಈವ ಕ್ಷಮೆಯು ॥ 1 ॥ ಆವ ಮುಖದಲಿ ಬದುಕಲಿನ್ನಾ । ನೀವಿರೋಧವ ಮಾಡುತಕ್ಕನ । ನಾವ ಮುಸುಡಲಿ ನೋಡಲದಕಿಂ । ಸಾವೆ ಲೇಸು ॥ 2 ॥ ಎನ್ನುತಲಿ ಕಿರುಗತ್ತಿಯಿಂದಲಿ । ಎನ್ನ ಎದೆಯನು ಇರಿದು ಕೊಳ್ಳುತ । ಮನ್ನಿಸೆನುತಲಿ ತೊರೆದ ಜೀವನ । ವನ್ನು ಕ್ಷಣದಿ ॥ 3 ॥

॥ **ಭಾಮಿನಿ** ॥

ಬಂದರಾಗಲೆ ದೇವರಸ ಜತೆ । ಯಿಂದಲಾ ಚಿಂತಾಮಣಿಯು ಸಹ । ವಂದು ಪುತ್ರಿಯ ಜತೆಗೆ ಗುಪ್ತನು ಮಾತೆಯೊಡ ಚಂದ್ರ ॥ ಸಿಂಧುಭೈರವ ತೋಷಗೊಳಲವ । ಗೆಂದ ಚಿಂತಾಮಣಿಯು ನಡೆದುದ । ನೊಂದು ಬಿಡದಾ ಬಳಿಕ ಮುಂದಿನ ಕೃತಿಯ ನೆನೆಯುತಲಿ ॥ 1 ॥ ಅರಿತು ಶುಭದಿನದಂದು ಚಂದ್ರಗೆ । ಪರಮ ಸುಂದರಿ ಕಾಂತಿಮತಿಯನು । ತರುಣಿ ಚಂದ್ರಿಕೆಯನ್ನು ಉದಯಾದಿತ್ಯಗೀಯುತಲಿ ॥ ವಿರಚಿಸಲು ಮದುವೆಯನು ನಾರಿಯ । ರಿರದೆ ಆರತಿ ಬೆಳಗೆ ಲೋಕಕೆ । ಸರುವ ಸಜ್ಜನಕಾಯ್ತು ಮಂಗಲ ವೆಂಬ ಕಥೆಯಿದನು ॥2॥

॥ **ರಾಗ** ॥ **ಸೌರಾಷ್ಟ್ರ** ॥ **ತ್ರಿವುಡೆ** ॥

ಮನದಿ ಕಲ್ಪಿಸಿ ಯಕ್ಷಗಾನದಿ । ಘನದ ಭಕ್ತಿಗಳಿಂದ ಬರೆದನು । ಅನುಭವಿಯು ನಾನಲ್ಲ ತಪ್ಪಿರೆ । ಮುನಿಯದಿದನು ॥ 1 ॥ ತಿದ್ದಿ ಓದುವದೆಂದು ಬೇಡುವೆ । ಇದ್ದದೋಷವ ತಿಳಿಸೆ ತಿದ್ದುವೆ । ಬುದ್ಧಿವಂತರು ಹರಸಿರೆನ್ನನು । ಶುದ್ಧಮನನ ॥ 2 ॥ ತಂದೆ ನಾರಾಯಣನು ಗೌರಿಯ । ಕಂದನಿಹೆನು ಗಣೇಶ ನಾಮಕ । ಹೊಂದಿಹೆನು ನಾ ವಿಪ್ರ ಜನ್ಮವ । ಸುಂದರೆಯೊಳು ॥ 3 ॥

॥ **ರಾಗ** ॥ **ತಾಳ** ॥

ಮಂಗಲಂ ಜಯ ಮಂಗಲಂ ॥ ಶುಭ ॥ ಮಂಗಲಂ ನಿತ್ಯಮಂಗಲಂ ॥ ಪ ॥ ಮಂಗಲ ಮಹಿಮ ಶ್ರೀಯಂಗನೆಯರಸಗೆ । ಮಂಗಲ ಗೌರಿಗೆ ಶಂಕರಗೆ । ಮಂಗಲವಾಣೀ ಸಹಿತಲಿ ಬ್ರಹ್ಮಗೆ । ಮಂಗಲ ಜಗಹಿತ ಕಾವರಿಗೆ ॥ ಮಂಗಲಂ ॥

ಪಟ್ಟಾಜೆ ಗಣೇಶ ಭಟ್ಟರ ಎಲ್ಲಾ ಕೃತಿಗಳಲ್ಲೂ ಎದ್ದು ತೋರುವ ಸರಳತೆ, ಸಹಜತೆ, ಸರಾಗತೆ ಮತ್ತು ಸುಭಗತೆ ಮೇಲ್ನೋಟಕ್ಕೆ ನಮ್ಮನ್ನು ಆಕರ್ಷಿಸುತ್ತವೆ. ಈ ಗುಣಗಳು ಯಕ್ಷಗಾನ ಪ್ರಸಂಗಗಳ ಮೂಲಧಾತು ಎಂದರೂ ತಪ್ಪಾಗಲಾರದು. ಗಣೇಶರಿಗೆ ಯಕ್ಷಗಾನದ ಮೇಲಿರುವ ಪ್ರೀತಿ, ಅವರು ಪ್ರಸಂಗವನ್ನು ನಿರ್ವಹಿಸುವ ರೀತಿ ಮತ್ತು ಆ ಮೂಲಕ ಸಮಾಜಕ್ಕೆ ನೀಡುವ ನೀತಿ ಹೀಗೆ "ಮೂರುತಿ"ಗಳು ಅವರ ಪ್ರಸಂಗಗಳಿಗೆ ಶ್ರೀರಕ್ಷೆಯಾಗಿ ಕೂಡಿ ಬಂದಿವೆ. ಹನ್ನೆರಡು ಪ್ರಸಂಗಗಳಲ್ಲಿ ವಸ್ತುವಿನ ದೃಷ್ಟಿಯಿಂದ ಪೌರಾಣಿಕ ಕಥಾಭಾಗಗಳೊಂದಿಗೆ ಒಂದೆರಡು ಕಾಲ್ಪನಿಕ ಕಥೆಗಳನ್ನು ಸಮನ್ವಯಿಸಲಾಗಿದೆ. ಕಾಲ್ಪನಿಕವಾದರೂ ಅವೂ ಪೌರಾಣಿಕದ ಸ್ವರೂಪದಲ್ಲಿಯೇ ಉಳಿದುಕೊಂಡಿವೆ ಮತ್ತು ವೈವಿಧ್ಯತೆಯ ಅಗತ್ಯಕ್ಕೆ ಪೂರಕವಾಗಿ ಬಂದಿವೆ. ಶೀರ್ಷಿಕೆಗಳೂ ಯಕ್ಷಗಾನದ ಸ್ವಭಾವದಲ್ಲಿಯೇ ಇವೆ. ಶ್ರೀಯುತರಿಂದ ಇನ್ನೂ ಹೆಚ್ಚಿನ ಸೇವೆ ನಾಡು ನುಡಿಗಳಿಗೆ ಸಲ್ಲಲಿ ಎನ್ನುವುದಷ್ಟೇ ನನ್ನ ಹಾರ್ದಿಕವಾದ ಹಾರೈಕೆ.

● ಡಾ. ರಮಾನಂದ ಬನಾರಿ

ಕಲಾರಾಧನಾ ಪ್ರತಿಷ್ಠಾನ, ನಾರಾಯಣೀಯಂ,
ಬರೆಕರೆ ಮನೆ. ಕಾವು, ಪುತ್ತೂರು ತಾಲೂಕು,
ಕರ್ನಾಟಕ - 574223